ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಡಾ. ಎಂ. ಬಿ. ನೇಗಿನಹಾಳ

ಪ್ರಕಾಶ ಕಲ್ಲಪ್ಪ ಗಿರಿಮಲ್ಲನವರ

ಕನ್ನಡ ಪುಸ್ತಕ ಪ್ರಾಧಿಕಾರ

ಡಾ. ಎಂ.ಬಿ.ನೇಗಿನಹಾಳ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಡಾ. ಎಂ.ಬಿ.ನೇಗಿನಹಾಳ

ಪ್ರಕಾಶ ಕಲ್ಲಪ್ಪ ಗಿರಿಮಲ್ಲನವರ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**DR. M.B.NEGINHAL** A Monograph on M. B. Neginhal in Kannada Written by: Prakash Kallappa Girimallanavar Published By ***B.H Mallikarjun***, Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xvi + 113
Copies : 1000
Price : ₹ 60.00

ಮೊದಲ ಮುದ್ರಣ : ೨೦೧೨
ಪುಟಗಳು : xvi + ೧೧೩
ಪ್ರತಿಗಳು : ೧೦೦೦
ಬೆಲೆ : ₹ ೬೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು–೫೬೦ ೦೨೧
ದೂ : ೦೮೦–೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**
ಸಂಪಾದಕ

# ಲೇಖಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ತನ್ನ ರಚನಾತ್ಮಕ ಕಾರ್ಯಗಳ ಮೂಲಕ ಸದ್ದುಗದ್ದಲವಿರದೆ ಕನ್ನಡ ಕಟ್ಟುವ ಕಾರ್ಯದಲ್ಲಿ ನಿರತವಾಗಿದೆ. ಹೊಸ ಹೊಸ ಯೋಜನೆಗಳು ಜಾರಿಗೆ ಬರುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ. ಈ ಹೊಸ ಯೋಜನೆಗಳ ಪರಿಕಲ್ಪನೆಯಲ್ಲಿ ಮೂಡಿಬಂದಿದ್ದೇ 'ಕನ್ನಡ ಕಟ್ಟಿದವರು ಮಾಲಿಕೆ' ಯೋಜನೆ.

ಡಾ. ಸಿದ್ಧಲಿಂಗಯ್ಯನವರ ಜ್ಞಾನಶಕ್ತಿ ಮತ್ತು ಹಿಂದಿನ ಆಡಳಿತಾಧಿಕಾರಿಗಳಾಗಿರುವ ಅಶೋಕ ಎನ್. ಚಲವಾದಿ ಮತ್ತು ಇಂದಿನ ಆಡಳಿತಾಧಿಕಾರಿಗಳಾದ ಬಿ.ಹೆಚ್. ಮಲ್ಲಿಕಾರ್ಜುನ ಅವರ ಕ್ರಿಯಾಶಕ್ತಿ ಕಾರಣವಾಗಿ ಕನ್ನಡ ಪುಸ್ತಕ ಪ್ರಾಧಿಕಾರವು ಜಾಗತೀಕರಣದ ದಿನಮಾನದಲ್ಲಿ ಕನ್ನಡ ನಾಡು-ನುಡಿಯ ಏಳ್ಗೆಗಾಗಿ ಅಂತೆಯೇ ಕನ್ನಡ ಸಂಸ್ಕೃತಿಯ ಬೆಳವಣಿಗೆಗಾಗಿ ನಿರಾತಂಕವಾಗಿ ತೊಡಗಿಕೊಂಡಿದೆ.

ಕನ್ನಡ ಕಟ್ಟಿದವರು ಮಾಲಿಕೆಯಲ್ಲಿ 'ಡಾ.ಎಂ.ಬಿ.ನೇಗಿನಹಾಳ' ಅವರನ್ನು ಕುರಿತು ಬರೆಯಲು ನನಗೆ ಹೇಳಿದಾಗ, ತುಂಬ ಸಂತೋಷವೆನಿಸಿತು. ಅವರು ಬೆಳಗಾವಿಯಲ್ಲಿದ್ದಾಗ ಹಲವಾರು ಸಲ ಭೇಟಿಯಾಗಿದ್ದೆ. ಅವರ ವಿದ್ವತ್ತಿನ ಶೋಧಗಳ ಕುರಿತು ಗಮನಿಸುತ್ತಲೇ ಇದ್ದೆ. ಆದರೆ ಆಕಸ್ಮಿಕವಾಗಿ ಅವರು ತೀರಿಕೊಂಡದ್ದು ಕನ್ನಡ ವಿದ್ವತ್‌ಲೋಕ ಬಡವಾದಂತೆ ಅನಿಸಿತು. ಮರೆತು ಹೋಗಬಹುದಾಗಿದ್ದ ಇಂಥ ಮಹಾನ್ ಸಂಶೋಧಕನ ಜೀವನ ಮತ್ತು ಸಾಧನೆಯನ್ನು ಈ ಮೂಲಕ ಪರಿಚಯಿಸುತ್ತಿರುವುದು ಸಮಾಧಾನಕರ ವಿಷಯವಾಗಿದೆ.

ಕೃತಿ ರಚಿಸಲು ಪ್ರೇರಣೆ ನೀಡಿದ ಕ್ರಿಯಾಶೀಲ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೆ, ದಕ್ಷ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್.ಮಲ್ಲಿಕಾರ್ಜುನ ಅವರಿಗೆ ಕೃತಜ್ಞತೆಗಳು.

ಪುಸ್ತಕ ರಚನೆಗೆ ಕೋರಿ ಪತ್ರ ಬಂದ ಸಂದರ್ಭದಲ್ಲಿ ಮರೆತು ಹೋಗಬಹುದಾದ ಒಬ್ಬ ದೊಡ್ಡ ಸಂಶೋಧಕನ ಚರಿತ್ರೆಯನ್ನು ಚೆನ್ನಾಗಿ ಬರೆ'

ಎಂದು ಆಶೀರ್ವದಿಸಿದ, ಅನ್ನ-ಅಕ್ಕರೆಗಳನ್ನಿತ್ತು ಸಾಕಿ ಸಲುಹಿದ ಮಾತೃವಾತ್ಸಲ್ಯದ ನನ್ನ ಪರಮಾರಾಧ್ಯ ಗುರುಗಳಾದ ನಾಗನೂರು ರುದ್ರಾಕ್ಷಿಮಠದ ಪೂಜ್ಯಶ್ರೀ ಸಿದ್ಧರಾಮ ಮಹಾಸ್ವಾಮಿಗಳವರಿಗೆ ಭಕ್ತಿಯ ನಮನಗಳನ್ನು ಅರ್ಪಿಸುವೆ.

ಹಿರಿಯ ಸಾಹಿತಿಗಳಾದ ಡಾ. ಸರಜೂ ಕಾಟ್ಕರ್ ಅವರ ಸೂಕ್ತಮಾರ್ಗದರ್ಶನದಿಂದ ಈ ಕೃತಿ ಹೊರಬರಲು ಸಾಧ್ಯವಾಗಿದೆ. ಖ್ಯಾತ ರಂಗಚಿಂತಕರಾದ ಡಾ. ರಾಮಕೃಷ್ಣ ಮರಾಠೆ ಅವರು ಈ ಕೃತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಇದಕ್ಕೊಂದು ಮೂರ್ತಸ್ವರೂಪ ಬರುವಂತೆ ಮಾಡಿದ್ದಾರೆ. ಬೆಳಗಾವಿಯ ಸಾಹಿತ್ಯಿಕ ವಲಯವನ್ನು ವಿಸ್ತರಿಸುತ್ತಿರುವ ಈ ಉಭಯ ಹಿರಿಯರಿಗೆ ನನ್ನ ನಮನಗಳು.

ಡಾ. ನೇಗಿನಹಾಳ ಅವರನ್ನು ಕುರಿತು ಬಹಳಷ್ಟು ಮಾಹಿತಿ ನೀಡಿದವರು ನಮ್ಮ ನಾಡಿನ ಖ್ಯಾತ ಸಂಶೋಧಕರೂ, ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆದ ಡಾ. ಎಂ. ಎಂ. ಕಲಬುರ್ಗಿ ಅವರು ಮತ್ತು ಡಾ. ನೇಗಿನಹಾಳರ ಬಾಲ್ಯದ ಗೆಳೆಯರಾದ ನಿವೃತ್ತ ಪ್ರಾಚಾರ್ಯರಾದ ಡಿ.ಬಿ. ತಳವಾರ ಅವರು. ಈ ಇಬ್ಬರು ಹಿರಿಯರು ನೇಗಿನಹಾಳರ ಬದುಕಿನ ವಿವರಗಳನ್ನು ಅತ್ಯಂತ ಆಪ್ತವಾದ ರೀತಿಯಲ್ಲಿ ತಿಳಿಸಿ ಕೃತಿ ರಚನೆಗೆ ಶಕ್ತಿಯಾಗಿದ್ದಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೆರವಾದ ಕು. ಧರಿ ಮತ್ತು ಮಾವ ಬಸವರಾಜ ಹಳಂಗಳಿ ಅವರ ಉಪಕಾರ ಸ್ಮರಿಸುವೆ. ಗ್ರಂಥಾಲಯದಲ್ಲಿರುವ ಡಾ. ನೇಗಿನಹಾಳರ ಸಮಗ್ರ ಕೃತಿಗಳನ್ನು ಒದಗಿಸಿ ಪುಸ್ತಕರಚನೆಗೆ ಶುಭ ಹಾರೈಸಿದ ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯದ ನಿರ್ದೇಶಕರೂ, ನನ್ನ ಹಿತೈಷಿಗಳು ಆದ ಶ್ರೀ ಬಿ.ಬಿ. ಹೊಸಮನಿ ಅವರಿಗೆ ಶರಣುಗಳು.

ಪ್ರಕಾಶ ಕಲ್ಲಪ್ಪ ಗಿರಿಮಲ್ಲನವರ

# ಪರಿವಿಡಿ


| | |
|---|---|
| ಪ್ರವೇಶ | ೨ |
| ಜನನ-ಬಾಲ್ಯ-ವಿದ್ಯಾಭ್ಯಾಸ | ೧೦ |
| ಕನ್ನಡದ ಅರಿವು ಅಧ್ಯಯನದ ಹರವು | ೧೭ |
| ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ | ೨೦ |
| ಕನ್ನಡ ನಾಡು-ನುಡಿ ಇತಿಹಾಸದ ಅವಲೋಕನ ವರ್ತಮಾನದ ನವೀಕರಣ | ೨೪ |
| ಕಟ್ಟಿಕೊಟ್ಟ ಬೆಳಗಾವಿ ಇತಿಹಾಸ | ೩೨ |
| ಮಹಾರಾಷ್ಟ್ರದಲ್ಲಿ ಕನ್ನಡ ದೇವರ ಅಗ್ರಪೂಜೆ | ೩೫ |
| ಕನ್ನಡ ನಾಮವಿಜ್ಞಾನ ಚಿಂತನೆ | ೪೮ |
| ಜನಾಂಗೀಯ ಅಧ್ಯಯನ | ೫೩ |
| ವಚನ ಸಾಹಿತ್ಯ ಸಂಶೋಧನೆ | ೫೭ |
| ಸಿದ್ಧರಾಮನ ಕುರಿತ ಮಹತ್ವದ ಸಂಶೋಧನೆ | ೬೦ |
| ಚಿಕ್ಕದೇವರಾಯ ವಂಶಾವಳಿ | ೬೩ |
| ಜಾನಪದ ದುಡಿಮೆ | ೬೭ |
| ವ್ಯಕ್ತಿತ್ವದ ಹೊಳವುಗಳು | ೭೩ |
| ಡಾ. ನೇಗಿನಹಾಳ ಕಂಡಷ್ಟು-ತಿಳಿದಷ್ಟು | ೮೦ |
| ಅನುಬಂಧ | ೮೪ |
| ಡಾ. ನೇಗಿನಹಾಳ | ೮೫ |
| ಶಿಷ್ಯಾದಿಚ್ಛೇತ್ ಪರಾಜಯಪುರ | ೯೦ |
| ಕನ್ನಡ ಸಂಶೋಧನಾ ಕ್ಷೇತ್ರದ ದಿಗ್ಗಜ | ೯೪ |
| ಕನ್ನಡ ಭಾಷೆಯ ಪ್ರಾಚೀನತೆ ಶೋಧಿಸಿದ ಶ್ರೇಷ್ಠ ಸಂಶೋಧಕ | ೯೭ |
| ಜೀವನದ ಪ್ರಮುಖ ಘಟನೆಗಳು | ೧೦೦ |

# ಪ್ರವೇಶ

ಬೆಳಗಾವಿ ಜಿಲ್ಲೆಯ ವಿದ್ವತ್‌ಪರಂಪರೆಯು ಶ್ರೀಮಂತವಾದುದು, ಸಮೃದ್ಧವಾದುದು. ಬ್ರಿಟಿಷ ಆಡಳಿತದಲ್ಲಿ ಮುಂಬೈ ಪ್ರಾಂತಕ್ಕೆ ಒಳಪಟ್ಟಿದ್ದ ಬೆಳಗಾವಿ ಜಿಲ್ಲೆ ಸಹಜವಾಗಿಯೇ ನೆರೆಯ ಮಹಾರಾಷ್ಟ್ರದ ಮುಂಬೈ, ಪುಣೆ, ಕೊಲ್ಲಾಪುರಗಳಂಥ ಉನ್ನತ ಶಿಕ್ಷಣ ಕೇಂದ್ರಗಳಿಂದ ಪ್ರಭಾವಿತವಾಯಿತು. ಬೆಳಗಾವಿ, ಧಾರವಾಡ ಜಿಲ್ಲೆಗಳು ಸಂಪೂರ್ಣ ಮರಾಠಿಮಯವಾಗಿದ್ದ ಸಂದರ್ಭದಲ್ಲಿ ಕನ್ನಡ ಕಟ್ಟುವ ಕೆಲಸ ಮಾಡಿದವರು ಅನೇಕ ಮಹನೀಯರು. ಡೆಪ್ಯೂಟಿ ಚೆನ್ನಬಸಪ್ಪ ಆದಿಯಾಗಿ ಗಂಗಾಧರ ಮಡಿವಾಳೇಶ್ವರ ತುರಮರಿ ವರೆಗೆ ಅನೇಕ ಜನ ಪರಿಶ್ರಮಿಸಿದರು. ತರುವಾಯದ ಘಟ್ಟದಲ್ಲಿ ಕೆ.ಜಿ. ಕುಂದಣಗಾರ, ಶಂಬಾ ಜೋಶಿ, ಎಸ್.ಸಿ. ನಂದೀಮಠ, ಪ್ರ.ಗೋ.ಕುಲಕರ್ಣಿ, ಆ.ನೇ. ಉಪಾಧ್ಯೆ, ಬೆಟಗೇರಿ ಕೃಷ್ಣಶರ್ಮ ಮೊದಲಾದ ಶ್ರೇಷ್ಠ ಸಂಶೋಧಕ–ವಿದ್ವಾಂಸರು ಕನ್ನಡ ನಾಡು ಸಂಸ್ಕೃತಿಯ ವಿಕಾಸಕ್ಕಾಗಿ ಹಗಲಿರುಳು ಶ್ರಮಿಸಿದರು. ಈ ಎಲ್ಲ ಪೂರ್ವಸೂರಿಗಳ ಪರಂಪರೆಯನ್ನು ಅತ್ಯಂತ ವ್ಯವಸ್ಥಿತವಾಗಿ ಮುಂದುವರಿಸಿ, ಕನ್ನಡ ಸಂಶೋಧನೆ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ಪ್ರಾತಃಸ್ಮರಣೀಯವರಲ್ಲಿ ಡಾ. ಎಂ.ಬಿ. ನೇಗಿನಹಾಳ ಒಂದು ಅಪರೂಪದ ಹೆಸರು.

ಡಾ. ಎಂ.ಬಿ. ನೇಗಿನಹಾಳ ಕನ್ನಡ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಆಡಳಿತಗಾರರಾಗಿ ಸೇವೆ ಸಲ್ಲಿಸಿದ ಅಪರೂಪದ ವಿದ್ವಾಂಸರು. ನಿಸ್ಪೃಹ–ನಿರಾಡಂಬರ ಜೀವಿಗಳಾಗಿದ್ದರು. ವೃತ್ತಿ ಬದುಕಿನಲ್ಲಿ ಸಜ್ಜನಿಕೆ, ಪ್ರಾಮಾಣಿಕತೆ ಮತ್ತು ಕ್ರಿಯಾಶೀಲತೆಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾದವರು. ಸಾವಿರಾರು ವಿದ್ಯಾರ್ಥಿಗಳ ಬಾಳಿಗೆ ವಿದ್ಯೆಯನ್ನು ಧಾರೆಯೆರೆದ ಅವರ ಕರ್ತೃತ್ವಶಕ್ತಿ–ಸಂಘಟನಾ ಸಾಮರ್ಥ್ಯ ಅಪೂರ್ವ–ಅರ್ಥಪೂರ್ಣ. ಚಿಂತನಶೀಲ–ಸೋಪಜ್ಞತೆಯುಳ್ಳ ಪ್ರಾಧ್ಯಾಪಕರಾದ ಡಾ. ನೇಗಿನಹಾಳ ಅವರು ಗುಣಗ್ರಾಹಿಗಳು. ಶಿಷ್ಯ ಸಂಕುಲಕ್ಕೆ ನಿರಪೇಕ್ಷ ಮನೋಭಾವದಿಂದ ವಿದ್ಯಾದಾನಗೈದ ಸೌಜನ್ಯಶೀಲ ವ್ಯಕ್ತಿಗಳು. ಅವರ ವೈಚಾರಿಕ ಮನೋಧರ್ಮ, ಪುಸ್ತಕ ಪ್ರೀತಿ–ಶಿಷ್ಯ ವಾತ್ಸಲ್ಯ, ಸಾಮಾಜಿಕ ಕಾಳಜಿ, ಶೈಕ್ಷಣಿಕ ಶಿಸ್ತು ಅನ್ಯಾದೃಶ್ಯ.

ಪ್ರತಿಭೆ ಮತ್ತು ಪಾಂಡಿತ್ಯಗಳ ಸಂಗಮವಾಗಿರುವ ಅವರು ಕನ್ನಡ ಸಾರಸ್ವತ ಪ್ರಪಂಚಕ್ಕೆ ಸಲ್ಲಿಸಿದ ವಿಶಿಷ್ಟ ಕಾಣಿಕೆ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆ ಸ್ಮರಣೀಯ. ಪ್ರಾಧ್ಯಾಪಕ ಸಾಹಿತಿ ಎನ್ನುವ ಸಾಂಸ್ಕೃತಿಕ ಧ್ವನಿ ತರಂಗಕ್ಕೆ ಸಂವೇದನಾಶೀಲರಾಗಿದ್ದರು. ತಮ್ಮ ಸವ್ಯಸಾಚಿ ವ್ಯಕ್ತಿತ್ವ, ಸದ್ಭಾವ ಹಾಗು ಸಮದರ್ಶಿ ಗುಣದಿಂದ ಆತ್ಮೀಯ ವಲಯದಲ್ಲಿ 'ಸಮನ್ವಯಿ' 'ಅಜಾತ ಶತ್ರು' ಎಂದೇ ಹೆಸರಾಗಿದ್ದಾರೆ.

ಕನ್ನಡ ಸಾಹಿತ್ಯದ ಅಪೂರ್ವ ಅಂತಃಸತ್ವವಾಗಿರುವ ಮೌಖಿಕ ಪರಂಪರೆಯ ಜಾನಪದ ಮತ್ತು ಶಾಸನ ಸಾಹಿತ್ಯವನ್ನು ಕುರಿತು ಆಳವಾದ ಅಧ್ಯಯನ ಮಾಡಿದ ಡಾ. ನೇಗಿನಹಾಳ ಅವರು ರಚಿಸಿದ ಕೃತಿಗಳು ನಾಡವರ ಗಮನ ಸೆಳೆದಿವೆ. ಅವರ ಬಹುಮುಖಿ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಬಹುದೊಡ್ಡ ವಿಶೇಷತೆಯೆಂದರೆ ವಿನಯ ಮತ್ತು ವಿದ್ವತ್ತು.

ತಂದೆ–ತಾಯಿಗಳಿಂದ ಸಹಜವೆನ್ನುವಂತೆ ಬದುಕಿನ ಹೋರಾಟ ಪರಿಚಯವಾಯಿತು. ನಡೆನುಡಿಗಳಲ್ಲಿ ಏಕತೆ, ಸತ್ಯ–ನಿಷ್ಠೆ ಪ್ರಾಮಾಣಿಕತೆ ಮುಂತಾದ ಮೌಲ್ಯಗಳ ತಿಳುವಳಿಕೆ ಚಿಕ್ಕವಯಸ್ಸಿನಲ್ಲಿಯೇ ಲಭಿಸಿತು. ಮನೆಯಲ್ಲಿಯ ಅವಿಭಕ್ತ ಪ್ರಜ್ಞೆ–ಶ್ರಮ ಸಂಸ್ಕೃತಿಗಳು ಅವರ ಬದುಕಿನುದ್ದಕ್ಕೂ ಆದರ್ಶವಾಗಿ ಬಂದ ಪರಮ ಮೌಲ್ಯಗಳು.

ಊರಿನ ಜಾತ್ರೆ ಉತ್ಸವಗಳಲ್ಲಿ ಜರುಗುತ್ತಿದ್ದ ಶ್ರೀಕೃಷ್ಣ ಪಾರಿಜಾತ, ಸಂಗ್ಯಾಬಾಳ್ಯಾ–ರಾಧಾನಾಟ ನಿಜಗುಣ ಶಿವಯೋಗಿ, ಹರಿಶ್ಚಂದ್ರ, ಸಂಪೂರ್ಣ ಭಾರತ, ಕೀಚಕ ವಧೆ, ಚಂದ್ರಹಾಸ, ಚಿತ್ರಸೇನ ಮುಂತಾದ ಸಣ್ಣಾಟ ಮತ್ತು ದೊಡ್ಡಾಟಗಳು ಡಾ. ನೇಗಿನಹಾಳ ಅವರ ಜೀವನದಲ್ಲಿ ತುಂಬ ಪ್ರಭಾವ ಬೀರಿದವು. ಅವರ ಎಲ್ಲ ಒಲವು ಜಾನಪದದ ಕಡೆಗೆ ಹೊರಳಲು ಕಾರಣವೂ ಆದವು.

'ಒಬ್ಬ ಮನುಷ್ಯನ ಭವಿತವ್ಯವೂ ಯಾವುದೇ ವಿಶ್ವವಿದ್ಯಾಲಯದಲ್ಲಿ ಇಲ್ಲ. ಅದು ಹುಟ್ಟಿದ ಮನೆಯಲ್ಲಿದೆ' ಎಂಬ ಮಾತು ಇಲ್ಲಿ ನೇಗಿನಹಾಳ ಅವರ ಜೀವನಕ್ಕೆ ಅನ್ವಯಿಸುತ್ತದೆ.

ಡಾ. ನೇಗಿನಹಾಳ ಅವರು ತಮ್ಮ ಸಮಗ್ರಶಕ್ತಿ ಮತ್ತು ಆಸಕ್ತಿಗಳನ್ನು ಅಧ್ಯಯನ, ಅಧ್ಯಾಪನ ವಿಷಯಗಳಲ್ಲಿ ಕೇಂದ್ರೀಕರಿಸಿದರು. ವರ್ಗ ಕೋಣೆಯ ಬೋಧನ–ಗ್ರಂಥಾಲಯ ವಾಚನ ಇವು ಅವರ ಪ್ರಮುಖ ಹವ್ಯಾಸಗಳಾಗಿದ್ದವು. ಇದರಿಂದ ಅವರ ಅಧ್ಯಾಪನ ಕಲೆಗೆ ಸರಿಯಾದ ಚೌಕಟ್ಟು ಪ್ರಾಪ್ತವಾಯಿತು.

ವ್ಯಾಪಕ ಅಧ್ಯಯನ ಭವಿಷ್ಯದ ಅವರ ಬೆಳವಣಿಗೆಗೆ ಮೂಲಧನವಾಗಿ ಪರಿಣಮಿಸಿತು.

ಅವರು ಕಟ್ಟಿ ಬೆಳೆಸಿದ ಸ್ನಾತಕೋತ್ತರ ವಿಭಾಗವು ಇಂದು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಬೆಳೆಯುತ್ತಿದೆ. ವಚನ ಸಾಹಿತ್ಯ, ಜಾನಪದ ಸಾಹಿತ್ಯ, ಕಾವ್ಯ ಮೀಮಾಂಸೆ, ಛಂದಸ್ಸು ಮುಂತಾದ ವಿಷಯಬೋಧನೆಗಳು ಇವರ ಪರಿಶ್ರಮದಿಂದ ವಿಶೇಷ ವ್ಯಾಪ್ತಿ ಪಡೆದವು. ನೇಗಿನಹಾಳರು ಪೂರ್ವ ಸಿದ್ಧತೆಯಿಲ್ಲದೆ ಎಂದೂ ಪಾಠ ಹೇಳಲಿಲ್ಲ. ಮೈಗಳ್ಳತನ-ಆಲಸ್ಯತನದಿಂದ ಎಂದೂ ಪಾಠ ನಿಲ್ಲಿಸಲಿಲ್ಲ. ಹೇಳಬೇಕಾದ ವಿಷಯವನ್ನು ನೇರವಾಗಿ ವಿದ್ಯಾರ್ಥಿಗಳ ಮನಮುಟ್ಟುವಂತೆ ಹೇಳುವುದು ಇವರ ಜಾಯಮಾನ. ಇವರ ಕಾವ್ಯ ಮೀಮಾಂಸೆ ಪಾಠಗಳನ್ನು ಆಲಿಸಲು ಇತರ ವರ್ಗದ ವಿದ್ಯಾರ್ಥಿಗಳೂ ಬರುತ್ತಿದುದು ವಿಶೇಷವಾಗಿತ್ತು.

"ಸಂಸ್ಕೃತಿಯೆನ್ನುವುದು 'ಸಮೂಹಸಮ್ಮತ ಜೀವನಪದ್ಧತಿ'ಯಾಗಿದೆ. ಪ್ರಾಚೀನ ಕನ್ನಡ ಸಮಾಜ ತನ್ನ ಬದುಕಿನಲ್ಲಿ ಸಾಮಾಜಿಕ ನ್ಯಾಯ-ಸಾಮಾಜಿಕ ಅನ್ಯಾಯ ರೂಪದ ಅನೇಕ ಜೀವನಪದ್ಧತಿಗಳನ್ನು ರೂಪಿಸಿಕೊಂಡಿದ್ದಿತು. ವರ್ತಮಾನದ ಬದುಕನ್ನು ಅರ್ಥಮಾಡಿಕೊಳ್ಳಲು, ಸರಿಪಡಿಸಲು ನೆರವಾಗುವ ಇದರ ಅಧ್ಯಯನ ಇಂದು ತುಂಬ ಮಹತ್ವ ಪಡೆದಿದೆ. ಹೀಗಾಗಿ ಸಾಹಿತ್ಯ, ಶಾಸನ, ಜಾನಪದ ಇತ್ಯಾದಿ ಕ್ಷೇತ್ರಗಳನ್ನು ಬಳಸಿಕೊಂಡು, ಕಳೆದುಹೋದ ಕನ್ನಡಿಗರ ಅನೇಕ ಜೀವನಪದ್ಧತಿ-ನಂಬಿಕೆಗಳನ್ನು" ಶೋಧಿಸುವ ಕಾರ್ಯವನ್ನು ಡಾ. ನೇಗಿನಹಾಳ ಅವರು ಮಾಡಿದ್ದಾರೆ.

ಇತಿಹಾಸವೆಂಬುದು ಅಸಂಖ್ಯಾತ ಜೀವನಚರಿತ್ರೆಗಳ ಸಾರಸರ್ವಸ್ವ ಎನ್ನುತ್ತಾನೆ ಕಾರ್ಲೈಲ್. ಜೀವನ ಚರಿತ್ರೆಗಳು ರಸಾರ್ದ್ರವಾದಾಗ ಇತಿಹಾಸವೂ ರಸದರ್ಶನವೆನಿಸುತ್ತದೆ. ಇಡೀ ಜನಾಂಗದ ಕನಸು-ಕನವರಿಕೆಗಳ, ಆದರ್ಶ-ಯಥಾರ್ಥಗಳ, ಹೋರಾಟ-ಗೆಲವುಗಳ, ಸೋಲು-ಛಲಗಳ, ಆತ್ಮವಿಕಾಸದ ಮೆಟ್ಟಿಲುಮೆಟ್ಟಿಲುಗಳ, ಸಂಸ್ಕೃತಿ ಸಂದೋಹದ, ವೈಚಾರಿಕ ದೋಹನದ, ನಾಗರಿಕತೆಯ ವಿಕಸನದ, ಮಾನವತೆಯ ಮಹಾಯಾತ್ರೆಯ ಕಲಾತ್ಮಕ ನಿರೂಪಣೆಯಾಗುತ್ತದೆ. ಆಯಾ ಕಾಲದ ಮೌಲ್ಯಪ್ರಜ್ಞೆಗೆ ಅನುಗುಣವಾಗಿ ಸಾರ್ವಕಾಲಿಕ ಮೌಲ್ಯದ ಪುನರ್ದರ್ಶನದ ವಿವರಣೆಯಾಗುತ್ತದೆ.

ಡಾ. ನೇಗಿನಹಾಳರ ಬದುಕಿನಲ್ಲಿ ಬೆಳುದಿಂಗಳಿಗಿಂತ ಬಿಸಿಲೇ ಹೆಚ್ಚು. ಬಿಸಿಲಿನಲ್ಲಿಯೇ ಬೆಳೆದ ಅವರು ಅದನ್ನು ಬದುಕಿಗೂ ಅಳವಡಿಸಿಕೊಳ್ಳಲು ಯತ್ನಿಸಿದವರು. ಒಮ್ಮೊಮ್ಮೆ ಬಿಸಿಲು ಸರಿದು ಬೆಳುದಿಂಗಳು ಹರಡಿದರೂ ಅದರ

ಬಗೆಗೆ ನಿರ್ಲಿಪ್ತರಾಗಿದ್ದವರು. ಬಿಸಿಲು ಮತ್ತು ಬೆಳುದಿಂಗಳನ್ನು ಸಮಚಿತ್ತದಿಂದ ಸ್ವೀಕರಿಸಿದ್ದಾರೆ. 'ಬದುಕನ್ನು ಬಂದಂತೆ ಸ್ವೀಕರಿಸಬೇಕು; ಎದುರಿಸಬೇಕು' ಎಂಬ ಸಿದ್ಧಾಂತದಲ್ಲಿ ವಿಶ್ವಾಸವಿಟ್ಟ ಅವರು ಹಾಗೆಯೇ ಬದುಕಿದವರು.

ಡಾ. ಎಂ.ಬಿ.ನೇಗಿನಹಾಳ ಒಬ್ಬ ಅಸಾಧಾರಣ ವ್ಯಕ್ತಿ. ಕನ್ನಡ, ಕನ್ನಡ ನಾಡು ಮತ್ತು ಶಾಸನ ಸಂಸ್ಕೃತಿಗಳ ಬಗ್ಗೆ ತುಂಬ ಕಳಕಳಿಯಿಂದ ದುಡಿದರು. ತನ್ನ-ತನವೆಲ್ಲವನ್ನೂ ಕಳೆದುಕೊಂಡು ಅನ್ಯಭಾಷೆ-ಸಂಸ್ಕೃತಿಗಳ ವೈಭವ-ವಿಲಾಸಗಳಿಗೆ ಮಾರು ಹೋದ ನಿರಭಿಮಾನಿ ಕನ್ನಡಿಗರನ್ನು ನಾನಾವಿಧವಾದ ಯೋಜನೆಗಳ ಕಾರ್ಯಾಚರಣೆಯಿಂದ ಜಾಗೃತಗೊಳಿಸಿದರು. ಅಜ್ಞಾನ, ದಟ್ಟದಾರಿದ್ರಗಳ ಮಧ್ಯೆ ಒದ್ದಾಡುತ್ತಿದ್ದ, ನಿರ್ಜೀವ ಸಮಾಜ ಚೇತರಿಸಿಕೊಳ್ಳಲು ಶಿಕ್ಷಣ ಅವಶ್ಯವೆಂದರಿತು ಬೆಳಗಾವಿಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಕಟ್ಟಿ ಬೆಳೆಸಿದರು.ಕಡುಬಡವ ಹಾಗು ಜಾಣ ವಿದ್ಯಾರ್ಥಿಗಳ ಬಾಳದೀವಿಗೆಯಾದರು.

ಡಾ. ಎಂ.ಬಿ. ನೇಗಿನಹಾಳ ತುಂಬ ಮಹತ್ವಾಕಾಂಕ್ಷಿ. ಅವರ ಧೈರ್ಯ ಎಲ್ಲರೂ ಮೆಚ್ಚುವಂಥದೇ. ಅಪ್ಪಕಟ್ಟಿದ ಆಲದ ಮರಕ್ಕೆ ಜೋತು ಬೀಳುವ ಪ್ರವೃತ್ತಿಯ ಕನ್ನಡಿಗರಲ್ಲಿ ಅವರೊಬ್ಬರು ಅಪರೂಪ. ಅವರಿಗೆ ಕನ್ನಡದ ಬಗೆಗೆ ವಿಶೇಷ ಪ್ರೇಮ. ಬೆಳಗಾವಿಯಲ್ಲಿದ್ದಾಗ ಮಹಾರಾಷ್ಟ್ರೀಯನ್ನರ ಭಾಷಾ-ಸಂಸ್ಕೃತಿಗಳ ಬಗೆಗಿನ ಕಟ್ಟಾ ಅಭಿಮಾನವನ್ನು ಕಂಡಿದ್ದ ಇವರು ಕನ್ನಡಿಗರಲ್ಲಿ ಕನ್ನಡದ ಬಗೆಗೆ ಅರಿವು ಮೂಡಿಸಲು ಹಲವಾರು ಯೋಜನೆಗಳನ್ನು ಸಿದ್ಧಪಡಿಸಿ ಕಾರ್ಯರೂಪಕ್ಕೆ ತಂದರು.

ಬೆಳಗಾವಿ ಪ್ರದೇಶದಲ್ಲಿ ಕನ್ನಡ, ಕನ್ನಡಿಗರೆಂದರೆ ಕಸಕ್ಕೆ ಸಮಾನ. ಎಲ್ಲಿಯೂ ಕನ್ನಡದ ಸೊಲ್ಲು ಕೇಳಿಬರುತ್ತಿರಲಿಲ್ಲ. ಎಲ್ಲೆಡೆಗೂ ಮರಾಠಿ ವಾತಾವರಣ. ಎಲ್ಲರಿಗೂ ಮರಾಠಿ ವ್ಯಾಮೋಹ. ಅಚ್ಚಗನ್ನಡ ಪ್ರದೇಶವಾದ ಉತ್ತರ ಕರ್ನಾಟಕ ಪೂರ್ತಿ ಮರಾಠಿಮಯ. ಹುಬ್ಬಳ್ಳಿ-ಧಾರವಾಡಗಳಲ್ಲಿ ಮೊದಲು ಪ್ರಾರಂಭವಾದವುಗಳು ಮರಾಠಿ ಶಾಲೆಗಳು. ಇಂಥ ಪರಿಸ್ಥಿತಿಯಲ್ಲಿ ಕನ್ನಡ ಕಟ್ಟುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡಿದವರು ಡಾ. ನೇಗಿನಹಾಳ

ಡಾ. ನೇಗಿನಹಾಳ ಅವರ ಸಾಮಾಜಿಕ ಕಳಕಳಿ ಅನುಕರಣಯೋಗ್ಯ. ಹೀಗೆ ನಾಡು-ನುಡಿ-ಸಮಾಜಗಳ ಉತ್ಕರ್ಷಕ್ಕಾಗಿ ಮೊದಲಿಗರಾಗಿ ದುಡಿದ ಅವರನ್ನು ಕನ್ನಡಿಗರು ಅಭಿಮಾನದಿಂದ ನೆನೆಯಬೇಕು.

ಡಾ. ನೇಗಿನಹಾಳ ಕನ್ನಡದ ಒಂದು ಅಮೂಲ್ಯ ಆಸ್ತಿಯಾಗಿದ್ದರು. ಶಾಸನ, ಜಾನಪದ, ಸಂಶೋಧನೆ ಮುಂತಾದ ನಾನಾ ಸಾಹಿತ್ಯ ಪ್ರಕಾರಗಳಲ್ಲಿ ಅದ್ಭುತ

ಪ್ರಯೋಗಗಳನ್ನು ಮಾಡಿದ ಪ್ರತಿಭಾವಂತ. ಸಮಕಾಲೀನ ಪ್ರಜ್ಞೆ, ವೈಜ್ಞಾನಿಕ ದೃಷ್ಟಿಕೋನ ಹಾಗು ವೈಚಾರಿಕತೆಯ ಬೆಳಕಿನಲ್ಲಿ ಮೂರ್ತಗೊಂಡ ಆದರ್ಶಜೀವಿಯಾಗಿದ್ದರು. ದೀರ್ಘಕಾಲದ ಅಧ್ಯಯನದ ಫಲವಾಗಿ 'ಖಂಡೋಬಾ'ದಂಥ ಸಂಶೋಧನ ಕೃತಿಯೊಂದನ್ನು ಸೃಷ್ಟಿಸಿದ ದಾರ್ಶನಿಕ ಸಂಶೋಧಕ. ತಮ್ಮ ಅಪರೂಪದ ಸಂಶೋಧನೆಯಿಂದ ಕನ್ನಡದ ಪ್ರಾಚೀನತೆಯನ್ನು ಅಂತರ್‌ರಾಷ್ಟ್ರೀಯ ವೇದಿಕೆಯ ಮೇಲೆ ವಿಜೃಂಭಿಸಿದ ವಿರಾಡ್ರೂಪಿ.

ಡಾ. ನೇಗಿನಹಾಳ ಅವರ ಸಂಶೋಧನೆಯ ವ್ಯಾಪ್ತಿ ಬಲುದೊಡ್ಡದು. ಭಾಷಾಶಾಸ್ತ್ರ, ಶಾಸನ ಸಾಹಿತ್ಯದಿಂದ ಹಿಡಿದು ಜಾನಪದ ಕಾವ್ಯದವರೆಗೆ ಅದರ ವ್ಯಾಪ್ತಿ, ವಸ್ತು, ರೂಪ, ವಿಚಾರ ವೈವಿಧ್ಯಗಳಿಂದ ಅವರ ಅಧ್ಯಯನ ಅಚ್ಚರಿಹುಟ್ಟಿಸುವಂಥದು. ಅವರ ಭಾಷೆ, ಕಲ್ಪನೆ–ವಿಚಾರ ಸಂಪತ್ತುಗಳಿಂದ ಕೂಡಿದ್ದು ಅವುಗಳಲ್ಲಿ ಕನ್ನಡ ಪ್ರಾಚೀನ ಪರಂಪರೆ ಸಾಂಸ್ಕೃತಿಕ ಲೇಖನಗಳು ಸಂಪತ್ತು ತುಂಬಿ ತುಳುಕಿದೆ.

ವರ್ಣಜಾತಿ ಕೋಮುಪಂಗಡಗಳಿಗೆ ಭೇದ ಭಾವನೆಗಳ ಬಿರುಕು ಒಡಕುಗಳಿಗೆ ಮತ ಮೌಢ್ಯಗಳೇ ಕಾರಣವೆಂದೂ ಅವುಗಳನ್ನು ಸಂಪೂರ್ಣವಾಗಿ ನಿರಾಕರಿಸದಿದ್ದರೆ ಐಕ್ಯ–ಮೈತ್ರಿಗಳು ಮರೀಚಿಕೆಯಾಗುತ್ತವೆಂದೂ ನಿಜವಾದ ಪ್ರಜಾಸತ್ತೆಯಾಗಲಿ, ಸಮಾಜವಾದವಾಗಲಿ, ಸಮತಾಭಾವ ಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲವೆಂದು ಅವರು ಜಾತ್ಯತೀತರಾಗಬೇಕೆಂದು ತರುಣರಿಗೆ ಹೇಳುತ್ತಿದ್ದರು. "ಆವ ಕಾಲದ ಶಾಸ್ತ್ರವೇನು ಹೇಳಿದರೇನು? ನಿನ್ನೆದೆಯ ದನಿಯೆ ಋಷಿ, ಮನು ನಿನಗೆ ನೀನು" ಎಂದು ಕುವೆಂಪು ವಾಣಿಯನ್ನು ಅಕ್ಷರಶಃ ಪಾಲಿಸಲು ಕರೆಯಿತ್ತರು. ಸಂಶೋಧನೆಯ ಹಳೆಯ ಜಾಡು ಬದಲಿಸಿ ವೈಚಾರಿಕ ಪ್ರಖರತೆಯಿಂದ ದೀಪ್ತವಾದ ಹತ್ತಾರು ಸಂಶೋಧನಾ ಕೃತಿಗಳನ್ನು ರಚಿಸಿದರು.

ಕನ್ನಡ ಪ್ರಾಧ್ಯಾಪಕರಾಗಿ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿಯಾಗಿ ಕನ್ನಡಕ್ಕಾಗಿ ಹಗಲಿರುಳು ದುಡಿದರು. ಬರಹ–ಭಾಷಣಗಳ ಮೂಲಕ ಕನ್ನಡ ಮಾಧ್ಯಮದ ಮಹತ್ವವನ್ನು ಸಾರಿ ಹೇಳಿದರು. ಬಲಾತ್ಕಾರದ ತ್ರಿಭಾಷಾಸೂತ್ರವನ್ನು ವಿರೋಧಿಸಿದರು. ಇಂಗ್ಲೀಷಿನ ಈ ಬಲಾತ್ಕಾರ ಸಾಕು ಎಂದು ಸಾರಿ ಹೇಳಿದರು.

"ನಾನು ಅವಧೂತನಾಗಿ ಹೋಗುವುದಿಲ್ಲ. ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವ ತನಕ ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ದುಡಿಯಲು ವ್ಯಕ್ತಿಗಳನ್ನು ಪ್ರಚೋದಿಸುವುದು

ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ" ಕನ್ನಡದ ಬಗೆಗಿನ ನೇಗಿನಹಾಳರ ಪ್ರೀತಿ, ಸಂಕಲ್ಪ ಇಲ್ಲಿಯ ಮಾತುಗಳಲ್ಲಿ ವ್ಯಕ್ತವಾಗಿದೆ.

ತಮ್ಮ ಬದುಕಿನುದ್ದಕ್ಕೂ ಕನ್ನಡಕ್ಕಾಗಿ ದುಡಿದ ಡಾ. ನೇಗಿನಹಾಳ ಅವರ ಕನ್ನಡ ಸೇವೆ ಕನ್ನಡಿಗರ ಮನೆ-ಮನಗಳಲ್ಲಿ ಕನ್ನಡದ ಗುಂಜಾರವ ಕೇಳಿ ಬರಲಿ. ಕನ್ನಡ ನಾಡು-ನುಡಿಗಳ ಉದ್ಧಾರಕ್ಕಾಗಿ ಅಖಂಡ ೪೦ ವರ್ಷಗಳ ಕಾಲ ದಣಿವರಿಯದೆ ದುಡಿದ ಡಾ. ನೇಗಿನಹಾಳ ಅವರದು ವೈವಿಧ್ಯಮಯ ವ್ಯಕ್ತಿತ್ವ ಅನೇಕ ಕಷ್ಟ-ನಷ್ಟ-ಕ್ಲೇಶಗಳ ಮಧ್ಯದಲ್ಲಿಯೂ ಕಂಗೆಡದೆ ನಂಬಿದ ಆದರ್ಶಗಳನ್ನು ರಚನಾತ್ಮಕ ಕಾರ್ಯಗಳಿಂದ ಸಾಕಾರಗೊಳಿಸಿದರು. ಬಿಸಿಲಿನಿಂದ ಸುಡುವ ಜೀವಿಗಳಿಗೆ ಬೇವಿನಮರದ ತಂಪು ನೀಡಿದರು. ಶಿಕ್ಷಣ-ಸಾಹಿತ್ಯ-ಸಂಶೋಧನೆಗಳಿಂದ ಅಧ್ಯಯನದ ಆಳ-ಅಗಲ ವಿಸ್ತರಿಸಿದರು.

ನಮ್ಮ ನಾಡವರ ಬಗೆಗೆ ಡಾ. ನೇಗಿನಹಾಳ ಅವರಿಗೆ ವಿಶೇಷ ಕಾಳಜಿ. ನಮ್ಮವರು ಎಲ್ಲ ಕ್ಷೇತ್ರಗಳಲ್ಲಿ ಎದ್ದುಕಾಣಬೇಕೆನ್ನುವ ಲವಲವಿಕೆ ಅವರದು. ದುಂದು ವೆಚ್ಚಗಳಿಂದ ನಮ್ಮವರು ಭಿಕಾರಿಗಳಾಗುತ್ತಿರುವುದನ್ನು ಕಂಡು ಮಮ್ಮಲ ಮರುಗುತ್ತಿದ್ದರು. ಪರಂಪರಾಗತ ಶಿಕ್ಷಣದ ಜೊತೆಗೆ ಆಧುನಿಕ ಶಿಕ್ಷಣ, ತಾಂತ್ರಿಕ ಶಿಕ್ಷಣ ಇಂದಿನ ಅನಿವಾರ್ಯ ಆವಶ್ಯಕತೆಯೆಂಬುದು ಅವರ ಭಾವನೆಯಾಗಿತ್ತು.

ಡಾ. ನೇಗಿನಹಾಳ ಅವರು ನಾಡು-ನುಡಿಗಾಗಿ ತಮ್ಮ ಜೀವಿತ ಕಾಲವನ್ನೇ ಮುಡುಪಾಗಿಟ್ಟರೂ, ನಮ್ಮ ಬಹುದೊಡ್ಡ ಸಮಾಜ ಅದಕ್ಕೆ ಸ್ಪಂದಿಸಲಿಲ್ಲ. ನಮಗೆ ಸಂಬಂಧವಿಲ್ಲದ ಅನ್ಯಪ್ರಾಂತಗಳ ವ್ಯಕ್ತಿಗಳು ಇಲ್ಲಿ ಮೆರೆಯುತ್ತಿರುವಾಗ ನೇಗಿನಹಾಳ ಅವರ ಹೆಸರು ಕೇವಲ ಬೆಳಗಾವಿ ಜಿಲ್ಲೆಗೇ ಮಾತ್ರ ಸೀಮಿತವಾಯಿತು. ಅನೇಕ ಸಂಘ-ಸಂಸ್ಥೆಗಳ ಆಡಳಿತ ಸೂತ್ರಗಳನ್ನು ಹಿಡಿದವರಿಗೆ ನಾಡು-ನುಡಿಗಳ ಅಭಿಮಾನ ವಿಲ್ಲದ್ದರಿಂದ ಇಂಥ ಜನ ಮುದುಡಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಡಾ. ನೇಗಿನಹಾಳ ಅವರದು ಕಲಿಯುತ್ತಿರುವಾಗಲೇ ಉನ್ನತಾದರ್ಶಗಳನ್ನು ಕಟ್ಟಿಕೊಂಡ ವಿಶಿಷ್ಟ ಬದುಕು. ದೇಶಕ್ಕೆ ಪ್ರಯೋಜನಕಾರಿಯಾಗಿ ಬದುಕುವ ಕನಸು. ಅವರು ಮಿತಭಾಷಿಗಳು. ಅವರ ಮಾತುಗಳು ಅಂತಃಕರಣದ ಆಗರ. ಅಲ್ಲಿ ವ್ಯಂಗ್ಯ, ಸಿಟ್ಟು ಮತ್ಸರಗಳಿಗೆ ಆಸ್ಪದವಿಲ್ಲ. ಮಾತು ಮುತ್ತಿನಹಾರ, ಸ್ಪಟಿಕದ ಶಲಾಕೆ, ಮಾಣಿಕ್ಯದ ದೀಪ್ತಿ. ಅವರು ಮಾತನಾಡ ಹತ್ತಿದರೆ ಎಲ್ಲರೂ ತಲೆದೂಗಲೇಬೇಕು.

ರಚನಾತ್ಮಕ ಕಾರ್ಯಗಳಿಂದ ಆರೋಗ್ಯಮಯ ಹಾಗು ಉಪಯುಕ್ತ ಜೀವನವನ್ನು ಬದುಕಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟರು.

ಡಾ. ನೇಗಿನಹಾಳ ಈ ಶತಮಾನದ ಹೆಸರಾಂತ ಸಂಶೋಧಕರಲ್ಲೊಬ್ಬರು. ಬಹುದೀರ್ಘಕಾಲದ ಶ್ರದ್ಧೆಯ ವ್ಯಾಸಂಗದಿಂದ ತಮ್ಮ ಪಾಂಡಿತ್ಯಪೂರ್ಣ ಬೋಧನೆ, ಸಂಶೋಧನೆ, ಗ್ರಂಥಸಂಪಾದನೆ ಹಾಗು ಪರಾಮರ್ಶೆಗಳಿಂದ ಸಂಶೋಧನ ಕ್ಷೇತ್ರದ ವಿಶೇಷ ಅಂತಸ್ಸತ್ವವನ್ನು ಓದುಗರಿಗೆ ಎತ್ತಿ ತೋರಿದರು. ಕಾಲು ಶತಮಾನ ಅಧ್ಯಾಪನ ಕಾರ್ಯದ ಮಧ್ಯದಲ್ಲಿಯೂ ಒಬ್ಬಂಟಿಗರಾಗಿ ಸದ್ದುಗದ್ದಲವಿಲ್ಲದೆ ಹಲವಾರು ಸಂಶೋಧನೆ ಕಾರ್ಯಗಳನ್ನು ಕೈಕೊಂಡು ಅಭ್ಯಾಸಪೂರ್ಣ ದೀರ್ಘ ಪ್ರಸ್ತಾವನೆಗಳನ್ನು ಬರೆದು ಓದುಗರಿಗೆ ಅನುಕೂಲ ಮಾಡಿಕೊಟ್ಟರು.

ಅವರು ಗಂಭೀರ ಪ್ರವೃತ್ತಿಯ ಚಿಂತನಶೀಲ ವ್ಯಕ್ತಿ. ಓದು ಅವರಿಗಂಟಿದ ಹವ್ಯಾಸ. ಅದು ಅವರ ದೃಷ್ಟಿಯಲ್ಲಿ ಸದಾಶಿವನ ಪೂಜೆ. ಅವರಿಗೆ ನಾನಾ ವಿಷಯಗಳಲ್ಲಿ ಅಭಿರುಚಿ. ಸಂಗೀತದಲ್ಲೂ ವಿಶೇಷ ಒಲವು. ವ್ಯಾಕರಣ–ಛಂದಸ್ಸು–ಅಲಂಕಾರ ಶಾಸ್ತ್ರಗಳನ್ನು ಆಸಕ್ತಿಯಿಂದ ಕಲಿಸುತ್ತಿದ್ದರು. ಹಳೆಗನ್ನಡದ ತಲಸ್ಪರ್ಶಿ ಅಧ್ಯಯನದಿಂದ ಅವರ ಅಧ್ಯಯನಕ್ಕೆ ವಿಶೇಷ ಮೆರಗು ಬಂದಿತ್ತು.

ಶಾಸನ, ಸಂಶೋಧನೆ ಎಂದರೆ ಡಾ. ನೇಗಿನಹಾಳ ಅವರಿಗೆ ಪಂಚಪ್ರಾಣ. ಶಾಸನ–ಸಂಶೋಧನಾ ಪಾಠಗಳನ್ನು ಕಲಿಸುವಾಗ ತನ್ಮಯರಾಗುತ್ತಿದ್ದರು. ಕಣ್ಮುಚ್ಚಿ (ಅಂತರಂಗದ ಕಣ್ಣು ತೆರೆದು) ಪಾಠ ಹೇಳಹತ್ತಿದರೆ ಬಾಹ್ಯ ಪ್ರಪಂಚವನ್ನೇ ಮರೆತು ಬಿಡುತ್ತಿದ್ದರು.

ವ್ಯಾಸಂಗನಿಷ್ಠ ಕನ್ನಡ ಪ್ರಾಧ್ಯಾಪಕರೂ, ಕರ್ನಾಟ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಮುಖ್ಯಸ್ಥರಾಗಿ ಹಲವಾರು ಸಾಧನೆಗಳ ವಿಕ್ರಮಗಳನ್ನು ಸಾಧಿಸಿದವರೂ, ಬೆಳಗಾವಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಪ್ರಬುದ್ಧ ಬೋಧನೆ, ಶ್ರೇಷ್ಠ ಸಂಶೋಧನೆ ಹಾಗು ಸಂಶೋಧನೆ ಕನ್ನಡ ಗ್ರಂಥ ಪ್ರಕಟನೆಗಳಿಂದ ಕನ್ನಡ ವಿಭಾಗದ ಮಟ್ಟವನ್ನೆತ್ತರಿಸಿದವರೂ, ಅನೇಕ ವಿಚಾರ ಸಂಕಿರಣಗಳನ್ನು ಸಂಘಟಿಸಿ ತುಲನಾತ್ಮಕ ಅಧ್ಯಯನವಿಲ್ಲದೆ ಕೂಪ ಮಂಡೂಕರಾಗಿದ್ದ ಕನ್ನಡ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಸಾಗರದ ಆಳವನ್ನು ತೋರಿಸಿದವರೂ, ನಿರಂತರ ಚಟುವಟಿಕೆಗಳಿಂದ ಕನ್ನಡ ವಿಭಾಗವನ್ನು ಹೆಚ್ಚು ಕ್ರಿಯಾಶೀಲಗೊಳಿಸಿದವರೂ, ಸೂಕ್ಷ್ಮ ಸಂವೇದನಾಶೀಲರೂ ಹಲವಾರು ಮೌಲಿಕ ಕೃತಿಗಳ ಲೇಖಕರೂ, ಪ್ರಬುದ್ಧ ವಿಮರ್ಶಕರೂ, ಘನ ವಿದ್ವಾಂಸರೂ, ಉತ್ತಮ ಮೌಲ್ಯಾರಾಧಕರೂ, ಆದರ್ಶ ಜೀವಿಗಳೂ ಆದ ಡಾ. ಎಂ.ಬಿ.ನೇಗಿನಹಾಳ ಸದಾಸ್ಮರಣೀಯರು.

■■

# ಜನನ–ಬಾಲ್ಯ–ವಿದ್ಯಾಭ್ಯಾಸ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನೇಗಿನಹಾಳ ಒಂದು ಚಿಕ್ಕ ಗ್ರಾಮ. ರಾಷ್ಟ್ರೀಯ ಹೆದ್ದಾರಿಯ ಎಂ.ಕೆ.ಹುಬ್ಬಳ್ಳಿಯಿಂದ ೯ ಕಿ.ಮೀ. ದೂರದಲ್ಲಿರುವ ನೇಗಿನಹಾಳ ಎಲ್ಲ ಧರ್ಮದ ಸಮುದಾಯವುಳ್ಳ ಒಂದು ಸಾಂಸ್ಕೃತಿಕ ಹಳ್ಳಿ. ಹಳ್ಳಿಯ ಬದುಕಿನ ಎಲ್ಲ ಅವಶ್ಯಕಗಳನ್ನು ಪೂರೈಸುವ ಕಸಬುದಾರರು ಇಲ್ಲಿರುವುದರಿಂದ ಇದೊಂದು ಸ್ವಯಂಪೂರ್ಣಗ್ರಾಮವಾಗಿದೆ. ಮಲಾಪಹಾರಿ ನದಿಯ ತಟದಲ್ಲಿರುವ ಈ ಗ್ರಾಮ ಪ್ರತಿವರ್ಷ ಜಾತ್ರೆ–ಉತ್ಸವ ಮುಂತಾದ ಸಂದರ್ಭದಲ್ಲಿ ಬಯಲಾಟ ಆಡುತ್ತ, ಹಬ್ಬ ಹರಿದಿನಗಳಲ್ಲಿ ಜಾನಪದ ಕಲೆಗಳನ್ನು ಪ್ರದರ್ಶಿಸುತ್ತ ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ.

ಪ್ರಶಾಂತವಾದ ಈ ಹಳ್ಳಿಯಲ್ಲಿ ಪ್ರತಿದಿನ ರಾತ್ರಿ ದೇವಾಲಯಗಳಲ್ಲಿ ಭಜನಿ ಮೇಳದವರು ಸುಶ್ರಾವ್ಯವಾಗಿ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಬಯಲಾಟದ ಮೇಳದವರು ಬೇರೆ ಬೇರೆ ತೆರನಾದ ಆಟಗಳ ಪ್ರಾಕ್ಟಿಸು ಮಾಡುತ್ತಿದ್ದರು. ಕತೆಗಾರನ ಕೆಲಸ ಬಹಳ ದೊಡ್ಡದು. ಮೊದಲು ತಾವು ಆಡಬೇಕಿದ್ದ ಕಥೆಯ ಪುಸ್ತಕವನ್ನು ಇದ್ದ ಸ್ಥಳದಿಂದ ತರಿಸಿಕೊಳ್ಳಬೇಕು. ಬೇರೆ ಬೇರೆಯವರಿಗೆ ಪಾತ್ರಗಳನ್ನು ಹಂಚಿಕೊಡಬೇಕು. ಎಲ್ಲರೂ ಓದು ಬರೆಹ ಬಾರದ ನಿರಕ್ಷರಿಗಳೇ. ಸ್ತ್ರೀಪಾತ್ರಗಳನ್ನು ಪುರುಷರಿಗೇ ವಹಿಸಿಕೊಡುತ್ತಿದ್ದರು. ಅವರವರಿಗೆ ಸಂಬಂಧಪಟ್ಟ ಭಾಗಗಳನ್ನು ಬರೆಯಲು ಬಂದವರ ಕಡೆಯಿಂದ ಪ್ರತಿ ಮಾಡಿಸುತ್ತಿದ್ದರು. ಇಷ್ಟಾದ ಮೇಲೆ ಒಳ್ಳೆಯ ದಿನ ನೋಡಿ ಕತೆ ಪೂಜೆ ಮಾಡುತ್ತಿದ್ದರು. ಆಮೇಲೆ ನಿತ್ಯ ಎಲ್ಲರೂ ತಮ್ಮ ಹೊಲಮನೆಯ ಕೆಲಸ ಮುಗಿಸಿ ರಾತ್ರಿ ಆಟದ ಮನೆಗೆ (ತಾಲೀಮು ಕೋಣೆ) ಬರಬೇಕು. ಒಬ್ಬೊಬ್ಬರಿಗೆ ಅವರವರ ಮಾತುಗಳನ್ನು ಬಾಯಿಪಾಠ ಆಗುವವರಿಗೆ ಕಲಿಸಬೇಕು. ಅದನ್ನು ಅವನು ತನಗೆ ಎಷ್ಟು ಶಕ್ಯವೋ ಅಷ್ಟು ಎತ್ತರದ ದನಿಯಿಂದ ಅನ್ನಬೇಕು. ಅಲ್ಪಪ್ರಾಣ, ಮಹಾಪ್ರಾಣ, ಹ್ರಸ್ವ, ದೀರ್ಘ, ಒತ್ತಕ್ಷರ, ಸರಳಾಕ್ಷರಗಳ ಪಲ್ಲಟ ಬೇಕಾದಂತೆ ಆಗುತ್ತಿದ್ದವು. ಅದನ್ನು ಯಾರೂ ತಿದ್ದುವಂತಿಲ್ಲ. ತಿಳಿದರೆ ತಾನೇ ತಿದ್ದುವುದು. ಬಳ್ಳಿಗುರುಡರು ಸೇರಿ ಹಳ್ಳವನು ಬಿದ್ದಂತಾಗಿರುತ್ತಿತ್ತು.

ಆದರೆ ಬಯಲಾಟದ ಕತೆಗಾರ ಕುಣಿತ ಕಲಿಸುವುದರಲ್ಲಿ ಮಾತ್ರ ಹೆಚ್ಚು ಕಾಳಜಿ ವಹಿಸುತ್ತಿದ್ದ. ಆಟದಲ್ಲಿ ಪುರುಷ-ಸ್ತ್ರೀ ಪಾತ್ರಗಳೆರಡೂ ಕುಣಿತ ಕಲಿಯಬೇಕು. ಇದರಲ್ಲಿ ಹಿಮ್ಮೇಳದವರ ಕೋಚು ಬಹಳ ಮಹತ್ವದ್ದಾಗಿರುತ್ತಿತ್ತು. ಹೀಗೆ ನಾಟಕ-ಬಯಲಾಟ ಸಂಸ್ಕೃತಿ ಹಿನ್ನೆಲೆಯಿಂದ ಗ್ರಾಮದ ಜನರೆಲ್ಲ ಸೌಹಾರ್ದತೆಯಿಂದ ಬದುಕುತ್ತಿದ್ದರು.

ಈ ಗ್ರಾಮದ ಭೋಯಿ ಎಂಬ ಪರಿಶಿಷ್ಟ ಜಾತಿಯ ಮನೆತನದಲ್ಲಿ ಡಾ. ಎಂ.ಬಿ. ನೇಗಿನಹಾಳ ಅವರು ೧೯೪೦ರಲ್ಲಿ ಜನಿಸಿದರು. ತಂದೆ ಬಾಳಪ್ಪ ಮಳೆಗಾಲದ ಸಮಯದಲ್ಲಿ ಮಲಪ್ರಭಾ ನದಿಯಲ್ಲಿ ಮೀನು ಹಿಡಿಯುತ್ತಿದ್ದರು. ಅದರಿಂದಲೇ ಅವರ ಉಪಜೀವನ ಸಾಗಿತ್ತು. ಬಡತನವನ್ನೇ ಹಾಸಿಹೊದ್ದುಕೊಂಡಿದ್ದ ಮನೆತನ. ಮನೆಯಲ್ಲಿ ತುಂಬ ಬಡತನವಿದ್ದರೂ ಬಾಳಪ್ಪ ತುಂಬ ಸ್ವಾಭಿಮಾನದಿಂದ ಬದುಕಿದವರು. ತಮ್ಮ ಮಕ್ಕಳಿಗೂ ಅದನ್ನೇ ಕಲಿಸಿದವರು.

ನೇಗಿನಹಾಳ ಗ್ರಾಮದಿಂದ ದಕ್ಷಿಣಕ್ಕೆ ಹರಿಯುತ್ತಿದ್ದ ಮಲಪ್ರಭಾ ನದಿಯ ದಂಡೆಗೆ ನಿತ್ಯ ಹೋಗುತ್ತಿದ್ದರು. ಆತ್ಮೀಯ ಗೆಳೆಯ ಡಿ.ಬಿ.ತಳವಾರ ಇವರು ಕೂಡಿ ಎಮ್ಮೆ ಮೇಯಿಸಲು ಹೊಳೆ ದಂಡೆಗೆ ಹೋಗುತ್ತಿದ್ದರು. ತಿಂಗಳುಗಟ್ಟಲೆ ಸುರಿಯುವ ಸ್ವಾತಿ ಮಳೆಯಿಂದ ಹರಿಯುತ್ತಿದ ನದಿಯನ್ನು ನೋಡುವುದು ನೇಗಿನಹಾಳ ಅವರಿಗೆ ಆನಂದವನ್ನುಂಟು ಮಾಡುತ್ತಿತ್ತು. ಒಮ್ಮೆ ಜುಳುಜುಳು ಮತ್ತೊಬ್ಬ ದಭೆ ದಭೆಯಾಗಿ ಹರಿಯುತ್ತಿದ್ದ ನದಿಯನ್ನು ನೋಡಿ, ಅವರಲ್ಲಿ ಏನೋ ಒಂದು ಅಪೂರ್ವ ಆನಂದಾನುಭವವುಂಟಾಗುತ್ತಿತ್ತು. ಆ ಮಂಜುಳ ನಾದದಲ್ಲಿ ಓಂಕಾರ ನಿನಾದವನ್ನು ಕೇಳಿದಂತಾಗುತ್ತಿತ್ತು. ಹರಿವ ನೀರಲ್ಲಿ ಪೃಥಕ್ಕರಿಸಿ ಬರುತ್ತಿದ್ದ ಸೂರ್ಯನ ಸುವರ್ಣ ಕಿರಣಗಳು ಕೈಮಾಡಿ ಕರೆಯುತ್ತಿದ್ದವು. ಆ ಸೌಂದರ್ಯಸಂಪದ ಲೋಕದ ಶ್ರೀಮಂತಿಕೆಯನ್ನು, ಹೀಗಳೆದು ಪ್ರಕೃತಿಯ ಐಸಿರಿಯನ್ನು ಎತ್ತಿ ತೋರಿಸುತ್ತಿತ್ತು. ಅದನ್ನು ನೋಡುತ್ತ ಡಾ.ನೇಗಿನಹಾಳ ಅವರು 'ದೇವಗಂಗೆಯೆ ನೀನು ಆಕಾಶದಿಂ ಬಂದು ಮಂಜುಳ ನಿನಾದಗೆಯ್ವುದದೇಕೆ ಪೇಳ್ವಾಯಿ' ಎಂದು ಭಾವಸಮಾಧಿಯಲ್ಲಿ ಮುಳುಗಿ ಬಿಡುತ್ತಿದ್ದರು.

ನಾನು ಆರಂಭವ ಮಾಡುವೆನಯ್ಯಾ, ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ, ಜಂಗಮದಾಸೋಹಕ್ಕೆಂದು.
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದ ಕ್ರೀಯ ಮಾಡೆನು,

ನಿಮ್ಮ ಸೊಮ್ಮಿಂಗೆ ಸಲಿಸುವೆನು.
ನಿಮ್ಮಾಣೆ ಕೂಡಲಸಂಗಮದೇವಾ.

ಎಂದು ಅಣ್ಣನವರು ಸಾರಿದಂತೆ ನೇಗಿನಹಾಳಮನೆತನದವರು ಶರಣಮಾರ್ಗದಲ್ಲಿ ತಮ್ಮ ಜೀವನವನ್ನು ಸಾಗಿಸುತ್ತ ಬಂದವರಾಗಿದ್ದರು.

ನೇಗಿನಹಾಳ ಅವರು ಒಳ್ಳೇ ಚುರುಕು ಸ್ವಭಾವದವರು. ಸಹೋದರರ, ಆಳು ಮಕ್ಕಳ ಜೊತೆಗೆ ಹೊಲದ ಕೆಲಸಕ್ಕೆ ಹೋಗುತ್ತಿದ್ದರು. ದನಕರುಗಳನ್ನು ಮೇಯಿಸಿಕೊಂಡು ಬರುತ್ತಿದ್ದರು. ಅವುಗಳಿಗೆ ಮೇವು ಹಾಕುವುದು, ನೀರು ಕುಡಿಸುವುದು, ಮೈತೊಳೆಯುವುದು–ಇವರ ಬಾಲ್ಯದ ದಿನಚರಿಯಾದಂತಿತ್ತು. ಪ್ರಸಂಗ ಬಂದಾಗ ಜೋಡುಗಳೆಯಿದ್ದಾಗ ಸಹೋದರ ಜೊತೆಗೂಡಿ ರೆಂಟೆ, ಕುಂಟೆ, ಎಡೆ ಹೊಡ್ದ ಅನುಭವವೂ ಇವರದಾಗಿತ್ತು. ಬಿತ್ತಲೂ ಹೋಗುತ್ತಿದ್ದರು. ಹೀಗೆ ಮಣ್ಣಿನ ಮಗನಾಗಿ ಬೆಳೆದು ಬಂದ ಅವರು ನಿಸರ್ಗದ ಮಡಿಲಲ್ಲಿ ಬೆಳೆದು ಬಂದವರಾದರು. ಆ ನಿಸರ್ಗದ ಏರು–ಪೇರು, ರಮ್ಯತೆಯನ್ನು, ಚೆಲುವನ್ನು ಮೌನವಾಗಿ ಸವಿದರು. ಸುಗ್ಗಿ ಸಮಯದಲ್ಲಿ ಹಂತಿ ತುಳಿದರು, ರಾಶಿಮಾಡಿದರು. ಹೊಲದಲ್ಲಿಯೆ ಮಲಗಿದರು ಹೀಗೆ ಕೃಷಿ ಕೆಲಸ ಕಾರ್ಯಗಳಲ್ಲಿ ಸಹೋದರರ ಜೊತೆಗೂಡಿ 'ನಾಯೇನು ಕಡಿಮೆಯಿಲ್ಲ' ಎನ್ನುವ ಹಾಗೆ ಬಾಲ್ಯದಲ್ಲಿಯೆ ಒಕ್ಕಲುತನ ಮಾಡುವಲ್ಲಿಯೂ ವಿಶೇಷ ಆಸಕ್ತಿ ತಾಳಿದರು. ಓರಿಗೆಯ ಸ್ನೇಹಿತರು, ಅಣ್ಣಂದಿರು ಹೊಲ ಮನೆ ಕೆಲಸಗಳಲ್ಲಿ ಹಾಡುತ್ತಿದ್ದ ಹಾಡುಗಳನ್ನು ಕಲಿತುಕೊಂಡರು. ಅವುಗಳ ತಾಳಕ್ಕೆ ತಾವೂ ಹಾಡುತ್ತ ಕುಣಿಯುತ್ತಿದ್ದರು. ಸಂಪೂರ್ಣ ತಮ್ಮನ್ನು ಅವುಗಳಲ್ಲಿ ತೊಡಗಿಸಿಕೊಂಡರು.

ಗ್ರಾಮೀಣ ಪರಿಸರದಲ್ಲಿ ಬೆಳೆದುಬಂದ ನೇಗಿನಹಾಳರು ಮಕ್ಕಳು ಆಡುವ ಚಿಣಿಪಣಿ, ಗುಂಡು–ಗಜಗ, ಚಂಡಾಟ, ಕುಂಟಾಟ, ಲಗೋರಿ, ತಿಳ್ಳಿ, ಹುಡ್ತುತು ಮೊದಲಾದ ಹತ್ತಿಪ್ಪತ್ತು ಆಟಗಳನ್ನು ಆಡುತ್ತಾ ಓಣಿಯ ಹುಡುಗರನ್ನು ಸೋಲಿಸುತ್ತ ಬಂದರು. ಹೆಣ್ಣು ಹುಡುಗಿಯರ ಜೊತೆಗೆ, ಮಕ್ಕಳಿದ್ದಾಗ ಕೂಡಿ ಆಟವಾಡುತ್ತಿದ್ದರು. ಅವರ ಜೊತೆಗೆ ತಾವೂ ಅವರ ಹಾಡುಗಳನ್ನು ಹಾಡುತ್ತಿದ್ದರು. ಈ ಆಟಗಳನ್ನು ಮಕ್ಕಳೊಡನೆ ಆಡುವಾಗ, ಹಾಡುವಾಗ ಮನೆಯನ್ನೇ ಮರೆಯುತ್ತಿದ್ದರು. ಅವರಿಗೆ ಊಟದ ಕಡೆಗೆ ಲಕ್ಷ್ಯವೇ ಇರುತ್ತಿರಲಿಲ್ಲ. ಉಂಡರೆ ಉಂಡರು, ಇಲ್ಲವೆ ಇಲ್ಲ. ಆಟವಾಡುವುದರಲ್ಲಿ, ಆಟದ ಹಾಡುಗಳನ್ನು ಹಾಡುತ್ತ–ಹಾಡುತ್ತ ಮೆಲಕು ಹಾಕುವಲ್ಲಿ ಮಗ್ನರಾಗಿ ಓಡುತ್ತಿದ್ದರು. ಒಮ್ಮೊಮ್ಮೆ ಆ ಹಾಡುಗಳನ್ನು ತಾವೇ ಬೆಳೆಸುತ್ತ ಹಾಡು ರಚಿಸುತ್ತಿದ್ದರು. ಮಗನ ಆಟ–ಪಾಟದ ಹುಚ್ಚನ್ನು ಕಂಡು ಇವನನ್ನು ಹೀಗೇ ಬಿಡಬಾರದೆಂದುಕೊಂಡು ತಂದೆ–ತಾಯಿಗಳು ಶಾಲೆಗೆ ಹಾಕಬೇಕೆಂದು ನಿರ್ಧರಿಸಿದರು.

## ವಿದ್ಯಾಭ್ಯಾಸ

ತಂದೆತಾಯಿಗಳು ಒಂದು ದಿವಸ ಶಾಲೆಗೆ ಹೋಗಿ ಮಗನ ಹೆಸರು ನೋಂದಾಯಿಸಿ ಬಂದರು. ತಂದೆ-ತಾಯಿಗಳ ಆಜ್ಞೆಯಂತೆ ನೇಗಿನಹಾಳ ಅವರು ದಿನಾಲೂ ತಪ್ಪದೇ ಶಾಲೆಗೆ ಹೋಗುತ್ತಿದ್ದರು. ಶಾಲೆಯಲ್ಲಿ ಕಲಿಸಿದ್ದನ್ನು ಮನೆಯಲ್ಲಿ ಪಾಠ ಒಪ್ಪಿಸುತ್ತಿದ್ದರು. ಶಾಲೆಯ ಇತರ ಹುಡುಗರೊಂದಿಗೆ ಬಿಡುವಿನ ವೇಳೆಯಲ್ಲಿ ಆಡತೊಡಗಿದರು.

ಪ್ರಾಥಮಿಕ ಶಾಲೆಯಲ್ಲಿ ಸಣ್ಣಬಿನ್ನೆತ್ತೆ ಓದಿದರು. ದೊಡ್ಡಬಿನ್ನೆತ್ತೆ ಪಾಸಾದರು.(ಈಗಿನ ಎಲ್.ಕೆ.ಜಿ, ಯು.ಕೆ.ಜಿ). ಒಂದನೇ ವರ್ಗ ಓದುತ್ತ, ಪಾಸಾಗುತ್ತ ಶಾಲೆಯಲ್ಲಿ ಹೌದೆನಿಸಿಕೊಂಡರು. ಗುರುಗಳ ಪ್ರೀತಿಗೆ ಪಾತ್ರರಾದರು. ಮುತ್ತಿನಂತಹ ಅಕ್ಷರಗಳನ್ನು ಬರೆಯುತ್ತಿದ್ದ ನೇಗಿನಾಳರನ್ನು ಕಂಡು ಎಲ್ಲ ಶಿಕ್ಷಕರೂ ಸಂತೋಷಪಡುತ್ತಿದ್ದರು. ನಗೆಮುಖದಿಂದ ಇನ್ನೂ ಜಾಣನಾಗು ಎಂದು ಆಶೀರ್ವದಿಸುತ್ತಿದ್ದರು.

## ಮುಲ್ಕೀಪರೀಕ್ಷೆ

ಮುಲ್ಕೀಪರೀಕ್ಷೆಯ ತರಬೇತಿ ನೀಡಿದರು. ಪ್ರತಿಭಾಸಂಪನ್ನರಾದ ನೇಗಿನಹಾಳರು ಗಣಿತ, ಬಾಯಿಲೆಕ್ಕ, ಇತಿಹಾಸ, ಭೂಗೋಲ-ಯಾವ ವಿಷಯವೇ ಇರಲಿ, ಕೇಳಿದ ಪ್ರಶ್ನೆಗಳಿಗೆ ತತ್‌ಕ್ಷಣ ದಿಟ್ಟದತನದಿಂದ ಉತ್ತರ ನೀಡುತ್ತಿದ್ದರು. ಮುಲ್ಕೀ ಪರೀಕ್ಷೆಯೆಂದರೆ ಇಂದಿನ ಐ.ಎ.ಎಸ್., ಐ.ಸಿ.ಎಸ್.ನಷ್ಟು ಗಡುಚಾದ ಪರೀಕ್ಷೆ ಅದು; ಅಷ್ಟು ಗಡುಚಾದ ಆ ಮುಲ್ಕೀ ಪರೀಕ್ಷೆಯನ್ನು ಅವರು ಪಾಸಾದರಷ್ಟೇ ಅಲ್ಲ, ಇಡೀ ಕೇಂದ್ರಕ್ಕೆ ಪ್ರಥಮರಾಗಿ ಪಾಸಾದರು. ಹಳ್ಳಿಯ ಶಾಲೆಯಲ್ಲಿ ಓದಿದ ಅದೂ ಕೆಳವರ್ಗದ ಮಗನೊಬ್ಬನು ಮುಲ್ಕೀ ಪರೀಕ್ಷೆಯನ್ನು ರ್‍ಯಾಂಕಿನಲ್ಲಿ ಪಾಸಾದದ್ದು ಅಭಿಮಾನದ ಸಂಗತಿಯಾಯಿತು. ಊರಿಗೆ ಊರೇ ಸಂತೋಷಪಟ್ಟಿತು. ಸ್ವೀಟ್ ಹಂಚಿತು. ಕಲಿಸಿದ ಗುರುಗಳಿಗೂ ಕಲಿತ ಶಾಲೆಗೂ ಹಡೆದ ತಂದೆ-ತಾಯಿಗಳಿಗೂ ಕೀರ್ತಿ ತಂದುಕೊಟ್ಟ ನೇಗಿನಹಾಳರನ್ನು ಹಾಡಿ ಹೊಗಳಿದರು. ಅಭಿನಂದನೆಯ ಸುರಿಮಳೆಯೆ ಮಳೆ. ಅದರಿಂದ ಸಂತೋಷಭರಿತರಾದ ತಂದೆ-ತಾಯಿಗಳು ತಮ್ಮ ಮಗ ಜಾಣನಿದ್ದಾನೆ. ಅವನು ಎಷ್ಟು ಕಲಿಯುತ್ತಾನೋ ಅಷ್ಟು ಕಲಿಯಲಿ ಎಂದು ಮುಂದೆ ಓದಿಸಲು ಮುಂದಾದರು.

ಗೆಳಯರಾದ ಡಿ.ಬಿ. ತಳವಾರ ಮತ್ತು ಇವರು ಕೂಡಿ ಬೆಳಗಾವಿಗೆ ಬಂದರು. ಇಲ್ಲಿ ಶಿಕ್ಷಣ ಮುಂದುವರಿಸಿದರು. ಬೆಳಗಾವಿಯಲ್ಲಿ ಆ ಕಾಲದಲ್ಲಿ ಮಳೆ ಸುರಿಯುತ್ತಿದ್ದರೂ ದೈನಂದಿನ ವ್ಯವಹಾರ ನಡದೇ ನಡೆಯುತ್ತಿತ್ತು. ಮಳೆಗಾಲವೆಂದು

ಯಾರೂ ಮನೆಯಲ್ಲಿ ಕೂಡುತ್ತಿರಲಿಲ್ಲ. ಗಂಡು–ಹೆಣ್ಣು ಎಲ್ಲರೂ ಕಾಲಲ್ಲಿ ಗಮ್‌ಬೂಟು ಹಾಕಿಕೊಂಡು, ಮೈಮೇಲೆ ರೇನ್ ಕೋಟ್ ಧರಿಸಿ, ತಲೆಯ ಮೇಲೆ ಫೆಲ್ಟ್ ಹ್ಯಾಟ್ ಇಟ್ಟುಕೊಂಡು ಕೈಯಲ್ಲೊಂದು ಛತ್ರಿ ಹಿಡಿದುಕೊಂಡು ಡಾಂಬರ ರೋಡಿನಲ್ಲಿ ಮೆಲ್ಲಗೆ ನಡೆಯುತ್ತ ತಮ್ಮ ತಮ್ಮ ಆಫೀಸುಗಳಿಗೆ, ವ್ಯವಹಾರಕ್ಕೆ, ಸ್ಕೂಲು, ಕಾಲೇಜುಗಳಿಗೆ ಹೋಗುತ್ತಿದ್ದ ದೃಶ್ಯ ನೇಗಿನಹಾಳ ಅವರನ್ನು ವಿಶೇಷವಾಗಿ ಆಕರ್ಷಿಸಿತು. ಅವರ ಪರೇಡದಲ್ಲಿ ಆಗ ಈಗ ಸಮಯಕ್ಕೆ ತಕ್ಕಂತೆ ಭಾಗವಹಿಸುತ್ತಿದ್ದರು. ಅದೊಂದು ಮೋಜಿನ ಜಾತ್ರೆಯೆಂದೇ ಬಗೆದ ನೇಗಿನಹಾಳಅವರು ಪ್ರತಿನಿತ್ಯವೂ ಸ್ಕೂಲಿಗೆ ಹೋಗುತ್ತಿದ್ದರು.

ಶ್ರೀ ಎಂ.ಎಸ್.ನೇಗಿನಹಾಳಅವರು ಬಿಡುವಿನ ದಿನಗಳಲ್ಲಿ ತಮ್ಮ ಊರಿಗೆ ಬರುತ್ತಿದ್ದರು. ಅಲ್ಲಿ ಬಾಲ್ಯಸ್ನೇಹಿತರ ಜೊತೆಗೂಡಿ ಆಡಿದ್ದೇ ಆಡಿದ್ದು. ಗ್ರಾಮೀಣ ಕಲಾ ಸಂಪತ್ತನ್ನು ಸವಿಯುತ್ತಿದ್ದರು. ಬಯಲಾಟಗಳ ಪ್ರದರ್ಶನವಿರಲಿ, ರಂಗತಾಲಿಮ ಇಲ್ಲವೆ ತಾಲಿಮ ನಡೆದಿರಲಿ, ಅಲ್ಲಿ ಹೋಗಿ ಅವರ ಕಲಾಪ್ರದರ್ಶನದಲ್ಲಿ ಭಾಗಿಗಳಾಗುತ್ತಿದ್ದರು. ಅವರಂತೆ ತಾವೂ ಹಾಡುತ್ತಿದ್ದರು. ಅಭಿನಯಿಸುತ್ತಿದ್ದರು. ತಪ್ಪಿದಲ್ಲಿ ಮಾರ್ಗದರ್ಶನ ನೀಡುತ್ತಿದ್ದರು.

೧೯೬೩ರಲ್ಲಿ ಎಸ್.ಎಸ್.ಸಿ ಪರೀಕ್ಷೆಯಲ್ಲಿ ಇಡೀ ಕೇಂದ್ರಕ್ಕೆ ಪ್ರಥಮರಾಗಿ ತೇರ್ಗಡೆಯಾದರು. ಕೆಳವರ್ಗದ ಹುಡುಗನೊಬ್ಬ ಈ ಸ್ಥಾನವನ್ನು ಪಡೆದದ್ದು ಅನೇಕರ ಹುಬ್ಬೇರುವಂತೆ ಮಾಡಿತು.

ನಂತರ ಬೆಳಗಾವಿಯ ಶಿಕ್ಷಕ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದು ಶಿಕ್ಷಕರಾದರು. ೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಸಂಪಾದಿಸಿದರು. ೧೯೭೦ರಲ್ಲಿ ಅದೇ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು.

ನೇಗಿನಹಾಳಮನೆತನವೇ ಜನಪದ ಕಲೆಗಳ ತವರುಮನೆಯಂತಿತ್ತು. ತಂದೆ, ಸಹೋದರರು, ಆಳುಮನುಷ್ಯರು ಎಲ್ಲರೂ ಜನಪದ ಹಾಡು ಹೇಳುತ್ತಿದ್ದರು. ಬಯಲಾಟದ ವೇಷ ತೊಡುತ್ತಿದ್ದರು. ಸುಗ್ಗಿಯ ಕುಣಿತದಲ್ಲಿ ಭಾಗವಹಿಸುತ್ತಿದ್ದರು. ಸೋಬಾನ ಪದಗಳನ್ನೂ ಹಾಡುತ್ತಿದ್ದರು. ಕಥೆಗಾರರಾಗುತ್ತಿದ್ದರು. ಶ್ರೀ ನೇಗಿನಹಾಳ ಅವರು, ಅಂತೆಯೇ ಹುಟ್ಟಾ ಜನಪದ ಕಲಾಕಾರರಾಗಿದ್ದರು. ನೇಗಿನಹಾಳಅವರು ಊರಿಗೆ ಬಂದಾಗ ತಾವೂ ಬಯಲಾಟಗಳಲ್ಲಿ ವೇಷ ಹಾಕಿ ಕುಣಿಯುತ್ತಿದ್ದರು. ಕಥೆ ನಡೆಸುತ್ತಿದ್ದರು. ಹಿಮ್ಮೇಳ ಇಲ್ಲವೆ ಮುಮ್ಮೇಳಗಳಲ್ಲಿ ಭಾಗವಹಿಸುತ್ತಿದ್ದರು. ಕೋಚು ಹೊಡೆಯುವುದರಲ್ಲಂತೂ ಇವರದು ಸಿದ್ಧಹಸ್ತ.

## ನಾಟಿ ವೈದ್ಯರು

ಗ್ರಾಮೀಣ ಸಂಪತ್ತು ಬರಿಯ ಆಟ ಪಾಠಕ್ಕಷ್ಟೇ ಸೀಮಿತವಾದುದಲ್ಲ. ಬಾಯಿ ಮಾತಿನ ಶ್ರೀಸಾಮಾನ್ಯರ ತಿಳುವಳಿಕೆಯೆಲ್ಲವೂ ಜನಪದರ ತಿಳುವಳಿಕೆಯಾಗಿದೆ. ಗ್ರಾಮೀಣ ಜನರಿಗೆ ರೋಗರುಜಿನಗಳು ಬಂದಾಗ ನಾಟಿ ವೈದ್ಯರಿರುತ್ತಿದ್ದರು. ಈಗಲೂ ಅಂಥವರನ್ನು ಕಾಣಬಹುದು. ಶ್ರೀ ನೇಗಿನಹಾಳ ಅವರ ಒಡನಾಟ ಇಂಥ ನಾಟಿ ವೈದ್ಯರ ಕೂಡವೂ ಇದ್ದಿತು. ಅವರು ಕೊಟ್ಟ ಗಡ್ಡೆ, ಬೇರು, ತಪ್ಪಲಗಳನ್ನು ಚಿಕ್ಕವರಿದ್ದಾಗ ನೇಗಿನಹಾಳರು ತಿಂದ ಅನುಭವ.

## ಬಲಿ ಕೊಡುವ ಸಂಪ್ರದಾಯ

ಹದಿನೆಂಟು ದೇವರಿಗೆ ಹರಕೆ ಹೊರುವ ಸಂಪ್ರದಾಯ ಗ್ರಾಮೀಣರದು. ಕರಿಯವ್ವ, ಕಾಳವ್ವ, ದ್ಯಾಮವ್ವ, ದುರ್ಗವ್ವ, ಭರಮಪ್ಪ-ಹೀಗೆ ಒಂದೊಂದು ದೇವರಿಗೆ ಶರಣು ಹೋಗುವ ಸಂಪ್ರದಾಯ ಶ್ರೀಸಾಮಾನ್ಯರದು. ಈ ದೇವರುಗಳು ಕೋಪಗೊಳ್ಳುವುದರಿಂದ ಒಂದೊಂದು ಥರದ ರೋಗ ಬರುತ್ತದೆಂಬ ಕುರುಡ ನಂಬಿಕೆ ಜನಪದರದು.ಅಂತೆಯೇ ಆ ದೇವರುಗಳ ಪ್ರೀತ್ಯರ್ಥವಾಗಿ ಕೋಳಿ, ಕುರಿ, ಕೋಣಗಳನ್ನು ಬಲಿಕೊಡುವ ಸಂಪ್ರದಾಯವೂ ಹಳ್ಳಿಗರದು. ಉಗ್ರದೇವತೆಗಳ ಜಾತ್ರೆ ಇದ್ದರಂತೂ ದೊಡ್ಡ ದೊಡ್ಡ ಬಲಿಗಳಲ್ಲಿ. ಡಾ. ನೇಗಿನಹಾಳರು ಇಂಥ ಅನಿಷ್ಟ ಸಂಪ್ರದಾಯಗಳ ಜನರ ಮಧ್ಯದಲ್ಲಿ ಬದುಕಿಬಂದು ಅವರಿಗೆ ಹಲವಾರು ಸಲ ಬುದ್ಧಿಯ ಮಾತನ್ನು ಹೇಳಿ ತಿದ್ದಿ ತೀಡಿದವರು. ರಜಾದಿನಗಳಲ್ಲಿ ತಮ್ಮ ಊರಿಗೆ ಹೋದಾಗ ಇಂಥ ಹೇಯ ಕೃತ್ಯಗಳು ನಡೆಯುತ್ತವೆಂದು ಕೇಳಿದ ತಕ್ಷಣವೆ ಆ ಜನರ ಬಳಿ ಹೋಗಿ ಅವರ ಅಜ್ಞಾನವನ್ನು ದೂರಮಾಡುತ್ತಿದ್ದರು.

## ಮಂತ್ರ-ಮಾಟ

ಚೇಳು, ಹಾವು, ನಾಯಿ ಕಚ್ಚಿದರೆ ಮಂತ್ರಿಸಿದ ನೀರು ಹಾಕುವ, ದಾರ ಕಟ್ಟುವ ಮಂತ್ರ-ಮಾಟಗಾರರೂ ಹಳ್ಳಿಯಲ್ಲಿ ಬದುಕಿದವರು. ನೇಗಿನಹಾಳರು ಚಿಕ್ಕವರಿದ್ದಾಗ ಚೇಳು, ನಾಯಿ ಕಚ್ಚಿದಾಗ ದಾರ ಕಟ್ಟಿಸಿಕೊಂಡದ್ದನ್ನು ನೆನೆಸಿಕೊಳ್ಳುತ್ತಿದ್ದರು. ನಾಟಿ ವೈದ್ಯರು ಕೊಡುತ್ತಿದ್ದ ಮದ್ದುಗಳಷ್ಟೇ ಮಂತ್ರ ಮಾಟಗಳಿಗೂ ಗ್ರಾಮೀಣರು ಬಲಿಯಾಗಬೇಕಾಗುತ್ತಿತ್ತು. ದನಕರುಗಳು ಮೇವು ತಿನ್ನದಾದಾಗ, ನೀರು ಕುಡಿಯದಾದಾಗ, ಹಾಲು ಕರೆಯದಾದಾಗ ಮುಗ್ಧ ಜನರು ಈ ಮಂತ್ರ-ಮಾಟಗಳ ಬೆನ್ನು ಹತ್ತುತ್ತಿದ್ದರು. ಮರಿಬಸಪ್ಪನವರೂ ಚಿಕ್ಕವರಿದ್ದಾಗ ತಂದೆ-ತಾಯಿಗಳ ಅಪ್ಪಣೆಯಂತೆ ತಮ್ಮ ದನಕರುಗಳಿಗೆ ಮಂತ್ರಿಸಿದ ನೀರು ತಂದು ಸಿಂಪಡಿಸಿದ್ದುಂಟು. ತಾಯಿಯ ಅಪ್ಪಣೆಯಂತೆ ಆ ಈ ದೇವರುಗಳಿಗೆ ನೀರು ಹಾಕಿ, ಎಣ್ಣೆ-ಬತ್ತಿ,

ಕಡಲೆಕಾಳು, ದುಡ್ಡು ಇಟ್ಟು ಪ್ರದಕ್ಷಿಣೆ ಹಾಕಿ ಬಂದದ್ದುಂಟು. ಕಲ್ಲು, ಮಣ್ಣು, ಮರ ದೇವರೆಂದು ನಂಬಿ ಭಯ-ಭಕ್ತಿಯಿಂದ ಪೂಜೆ ಮಾಡಿದ್ದನ್ನು ಅವರು ನೆನಪಿಸಿಕೊಳ್ಳುತ್ತಿದ್ದರು. ನೀರ ಕಂಡಲ್ಲಿ ಮುಳುಗುವ, ಮರನ ಕಂಡಲ್ಲಿ ಸುತ್ತುವ ವಾಡಿಕೆಗೆ ನೇಗಿನಹಾಳರು ಅಂಟಿಕೊಂಡವರೇ ಆ-ಆ ಸಂದರ್ಭಗಳಲ್ಲಿ ಹಾಡುವ ಹಾಡುಗಳನ್ನು ಹಾಡುತ್ತ ಬರೆದಿಡ್ಡುಕೊಂಡವರಿವರು.

ಹಬ್ಬ ಹರಿದಿನಗಳಲ್ಲಿ ಜನಪದರು ಹೇಳುವ ಹಾಡುಗಳ ಕಡೆಗೇ ಅವರ ಒಲವು. ಹಾಡುಹೇಳುತ್ತ ಆಟವಾಡುವ ಅವರ ಕಲೆಗೂ ಮಾರುಹೋದವರಿವರು. ಜೋಕುಮಾರ, ದುರಗಮುರಗಿ, ಕೋಲೆತ್ತಿನವರು, ಸಾರುವ ಅಯ್ಯನವರು, ಗೊಗ್ಗಯ್ಯಗಳು, ಡೊಳ್ಳಿನವರು-ಹೀಗೆ ಹಲವಾರು ಆಟದವರ ಜೊತೆಗೆ ಆತ್ಮೀಯರಾಗಿ ಅವರ ಹಾಡಿನ ಗತ್ತು ಲಯಗಳನ್ನು, ಭಾಷೆಯ ಅಂದ-ಚೆಂದವನ್ನೂ ಅರಿತುಕೊಂಡವರು ಮರಿಬಸಪ್ಪನವರು. ತಮ್ಮ ಗ್ರಾಮದ ಡೊಳ್ಳಿನ ಹಾಡುಗಳನ್ನೂ ಹೆಚ್ಚಾಗಿ ಪ್ರೀತಿಸಿದ್ದರು. ತಮ್ಮ ಊರ ಕುರುಬಗೇರಿ ದೊಡ್ಡದು. ಅವರ ದೇವರು ಬೀರಪ್ಪ, ಆತನ ವಾರ ಆದಿತ್ಯವಾರ, ಅಂದು ರಾತ್ರಿ ಡೊಳ್ಳು ಬಾರಿಸುತ್ತ ಹಾಡು ಹೇಳುವ ವಾಡಿಕೆ. 'ದೇವರು ಬಂದಾವ ಬನ್ನಿರೆ...' ಹಾಡನ್ನು ಡಾ. ನೇಗಿನಹಾಳರು ಹಾಡುತ್ತಿದ್ದರು. ಅವುಗಳನ್ನು ಬರೆದುಕೊಂಡದ್ದೂ ಉಂಟು. ಹೀಗೆ ತಮ್ಮ ಸೂಟಿಯ ದಿನಗಳಲ್ಲಿ ಜನಪದ ಸಂಪತ್ತನ್ನು ತುಂಬಿಕೊಂಡು ಮತ್ತೆ ನಾಗರಿಕತೆಯ ಪರಿಸರಕ್ಕೆ ಒಗ್ಗಿಕೊಳ್ಳುತ್ತಿದ್ದರು. ಬೆಳಗಾವಿಗೆ ಅಧ್ಯಯನಕ್ಕಾಗಿ ತೆರಳುತ್ತಿದ್ದರು. ವೈಜ್ಞಾನಿಕ ಮನೋಬಲದ ಹಿನ್ನೆಲೆಯಲ್ಲಿ ವೈಚಾರಿಕ ಮನೋಭಾವದ ತಳಹದಿಯಲ್ಲಿ ಗ್ರಾಮೀಣರ ಈ ತಿಳುವಳಿಕೆಯನ್ನು, ಜ್ಞಾನವನ್ನು, ಸಂಸ್ಕೃತಿಯನ್ನು ತೂಗಿ ನೋಡಿ ಅಭಿನಯದ ಮೂಲಕ ಅದರ ವೈಶಿಷ್ಟ್ಯವನ್ನು ನಾಗರಿಕರಿಗೆ ಮಾಡಿಕೊಡುತ್ತಿದ್ದರು.

ನೇಗಿನಹಾಳ ಅವರಿಗೆ ಕಾಲೇಜ ಪ್ರಪಂಚ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಯೋಗ್ಯ ಆಯಾಮವನ್ನು ತಂದುಕೊಟ್ಟಿತು. ಕಾಲೇಜಿನ ಸ್ನೇಹ ಸಮ್ಮೇಳನಗಳಲ್ಲಿ ಇವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ವಿವಿಧ ವಿನೋದಾವಳಿಗಳಲ್ಲಿ ಇವರದೇ ಪ್ರಮುಖಪಾತ್ರ, ಇವರು ಆಶು ನಾಟಕಕಾರರೂ ಆಗಿದ್ದರು; ಅವು ಪ್ರದರ್ಶನಗೊಳ್ಳುತ್ತಿದ್ದವು. ಲಾವಣಿ, ಹರದೇಶಿ ಹಾಡು, ಸಣ್ಣಾಟ-ದೊಡ್ಡಾಟ ಬಯಲಾಟಗಳ ಮನಮೋಹಕ ದೃಶ್ಯಗಳನ್ನು ಇತರ ಜನಪದ ಕಲೆ-ಹಾಡುಗಳನ್ನೂ, ಕುಣಿತಗಳನ್ನೂ ಕಾಲೇಜಿನ ವಿವಿಧ ವಿನೋದಾವಳಿಗಳಲ್ಲಿ ಸೇರಿಸಿ ನಗರದ ಜನರಿಗೆ ಒಂದರ್ಥದಲ್ಲಿ ಹುಚ್ಚು ಹಿಡಿಸಿದರು. ಸಂಭ್ರಮದ ರಸದೂಟವನ್ನೇ ನೇಗಿನಹಾಳಅವರು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ರಸಿಕಚಕ್ರಿಯಾಗಿದ್ದರೆಂದು ಹೇಳಿದರೆ ಅತಿಶಯೋಕ್ತಿಯ ಮಾತೇನಲ್ಲ.

■■

# ಕನ್ನಡದ ಅರಿವು ಅಧ್ಯಯನದ ಹರವು

ಬೆಳಗಾವಿ ಅಚ್ಚಗನ್ನಡ ಪ್ರದೇಶವೇ ಆಗಿದ್ದರೂ ಕನ್ನಡಿಗರ ನಿರಭಿಮಾನದಿಂದಾಗಿ ಮರಾಠಿಗರ ಪ್ರಾಬಲ್ಯ ಬೆಳೆಯತೊಡಗಿತು. ಕನ್ನಡಿಗರ ಮಾನಧನವಾದ ವಿಜಯನಗರ ಸಾಮ್ರಾಜ್ಯ ಪತನವಾಗುತ್ತಲೇ ಅವರ ಅಭಿಮಾನಶೂನ್ಯತೆ ಆರಂಭವಾಯಿತು. ಅದಕ್ಕೂ ಹಿಂದೆಯೂ ಅದರ ಉಗಮವನ್ನು ಶೋಧಿಸಬಹುದು. ಕಲ್ಯಾಣ ಚಾಲುಕ್ಯ ಸಾಮ್ರಾಜ್ಯ ಒಡೆದು ದೇವಗಿರಿ ಯಾದವರು ಮತ್ತು ದ್ವಾರಸಮುದ್ರದ ಹೊಯ್ಸಳರು ಎಂದು ಎರಡು ಭಾಗವಾಯಿತು. ಕನ್ನಡಿಗರ ಅನೈಕ್ಯತೆ ಆರಂಭಗೊಂಡುದು ಅಲ್ಲಿಂದಲೇ ಎಂಬುದು ವಿದ್ವಾಂಸರ ಅಭಿಪ್ರಾಯ. ಆರಂಭದಲ್ಲಿ ಯಾದವರ (ಸೇವುಣರ) ಮಾತೃಭಾಷೆ ಕನ್ನಡವೇ ಆಗಿದ್ದಿತೆಂಬುದಕ್ಕೆ ಅವರ ಹೆಸರುಗಳೇ ಸಾಕ್ಷಿಯಾಗಿವೆ. ಅವರ ಶಾಸನಗಳು ಕನ್ನಡದಲ್ಲಿವೆ. ತಮ್ಮ ಆಳಿಕೆಯ ಕೊನೆಗೆ ಅವರು ಮರಾಠಿಯತ್ತ ಒಲವು ತೋರಿಸಿದ್ದು ಸ್ಪಷ್ಟವಾಗುತ್ತದೆ. ಕನ್ನಡಿಗರು ಅಭಿಮಾನಶೂನ್ಯರಾದುದರಿಂದಲೇ ಆಗತಾನೆ ತಲೆಯೆತ್ತಿತ್ತಿದ್ದ ಮರಾಠಿ ಭಾಷೆಯನ್ನು ಅಪ್ಪಿಕೊಂಡರು; ಒಪ್ಪಿಕೊಂಡರು. ಇಲ್ಲದಿದ್ದರೆ ಅಚ್ಚಗನ್ನಡ ನಾಡಿನಲ್ಲಿ ಮರಾಠಿ ಹೇಗೆ ಬೆಳೆಯುತ್ತಿದ್ದಿತು? ವಿಜಯನಗರ ಸಾಮ್ರಾಜ್ಯವಿರುವವರೆಗೂ ಈ ನಿರಭಿಮಾನಕ್ಕೆ ತಡೆಯುಂಟಾಗಿದ್ದಿತು. ಅದು ಅಸ್ತಂಗತವಾಗುತ್ತಲೇ ಕರ್ನಾಟಕ ಸಂಸ್ಕೃತಿಯ ಮೇಲೆ ಮರಾಠಿಯ ಕಗ್ಗತ್ತಲೆ ಕವಿಯತೊಡಗಿತು. ಮರಾಠಾ ಸಾಮ್ರಾಜ್ಯ ಉದಯವಾದ ಮೇಲೆ ಇಲ್ಲಿಯ ಜನರಿಗೆ 'ಅರೆ ಅರಸು, ಮುಸಲ್ಮಾನಿ ಸರಸ, ಕನ್ನಡ ಬಿರುಸು' ಆಯಿತು, ಬೇಡವಾಯಿತು. ಸಾವಿರಾರು ವರ್ಷಗಳ ಸಾಹಿತ್ಯದ ಪರಂಪರೆಯಿದ್ದ ಕನ್ನಡಿಗರು ಅದನ್ನೆಲ್ಲ ಮರೆತುಬಿಟ್ಟರು. ಅಂಕಿತಕ್ಕಾಗಿ ಸಹ ಮೋಡಿ ಲಿಪಿಗೆ ಮಾರುಹೋದರು. ಇದಕ್ಕೆಲ್ಲ ಮಾತೃಭಾಷೆ, ಮಾತೃಸಂಸ್ಕೃತಿಗಳ ಬಗೆಗೆ ಉಂಟಾಗಿದ್ದ ಅಭಿಮಾನಶೂನ್ಯತೆ ಕಾರಣ. ಪೇಶ್ವೆಯವರ ಆಳಿಕೆ ಮುಗಿದು ಬ್ರಿಟಿಷರ ಆಳಿಕೆ ಪ್ರಾರಂಭವಾದ ಮೇಲೆ ಭಾರತದ ನಕ್ಷೆಯಲ್ಲಿ ಕರ್ನಾಟಕದ ಅಸ್ತಿತ್ವವಿರಲಿಲ್ಲ. ಅದು ಹರಿದು ಹಂಚಿಹೋಗಿ ೨೭ ರಾಜ್ಯಗಳಲ್ಲಿ ಚಲ್ಲವರಿಯಿತು. ಕನ್ನಡ ಮಾತನಾಡುವವರಿಗೇ ತಮ್ಮ ಭಾಷೆಯ ಬಗೆಗೆ ಅಭಿಮಾನವಿಲ್ಲದ ಮೇಲೆ ಅದನ್ನು ಕೇಳುವವರಾರು?

ಕನ್ನಡ ನಿರುಪಯುಕ್ತ ಭಾಷೆ; ಅದನ್ನೇಕೆ ಕಲಿಯಬೇಕು? ಎಂಬ ವಾದ

ಬೆಳಗಾವಿಯಲ್ಲಿ ಪ್ರಬಲವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಬೆಳಗಾವಿಯಲ್ಲಿ ನೇಗಿನಹಾಳರ ವಿದ್ಯಾರ್ಥಿ ಜೀವನ ಸಾಗಿತು. ಅನ್ಯಭಾಷಿಕರ ಕನ್ನಡ ತಾತ್ಸಾರ ಪರಿಸ್ಥಿತಿ ಅವರೊಳಗೆ ಕನ್ನಡ ಪ್ರೀತಿಯನ್ನು ಕುದುರಿಸಿತು. ಅವರ ಪ್ರೀತಿ ಕನ್ನಡ ನಾಡ–ನುಡಿಯ ಚರಿತ್ರೆಯನ್ನು ಅರಿಯಲು ಶಾಸನಗಳತ್ತ ಹೊರಳಿತು. ಅಲ್ಲಿಂದ ಹಳೆಗನ್ನಡ, ಕಾವ್ಯ, ಜನಪದ ಸಂಸ್ಕೃತಿ ಅರಿವು ಬೆಳೆಯುತ್ತ ಜೊತೆಗೆ ಅಧ್ಯಯನದ ಹರವು ವಿಸ್ತರಿಸುತ್ತ ನಡೆಯಿತು.

೧೯೭೦ರಲ್ಲಿ ಎಂ.ಎ. ಪದವಿ ಸಂಪಾದಿಸಿದ ಇವರ ವ್ಯಕ್ತಿತ್ವವನ್ನು ಊರಿನ ಹಿರಿಯರು ಗಮನಿಸಿದ್ದರು. ಕುಗ್ರಾಮವೊಂದರ ಕೆಳವರ್ಗದ ಹುಡುಗ ಎಂ.ಎ. ಪದವಿ ಸಂಪಾದಿಸಿದ್ದು ಗ್ರಾಮದ ಹಿರಿಯ ಮುಖಂಡರಿಗೆ ಹೆಮ್ಮೆಯ ವಿಷಯವಾಗಿತ್ತು. ನೇಗಿನಹಾಳ ಗ್ರಾಮದ ಮುಖಂಡರೂ, ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರೂ ಆಗಿದ್ದ ಶ್ರೀ ಡಿ.ಬಿ. ಇನಾಮದಾರ ಅವರನ್ನು ಊರ ಹಿರಿಯರು ಭೇಟಿಯಾಗಿ ಕೆ.ಎಲ್.ಇ. ಸಂಸ್ಥೆಯಲ್ಲಿ ಎಂ.ಬಿ. ನೇಗಿನಹಾಳ ಅವರಿಗೆ ನೌಕರಿ ಕೊಡಿಸಬೇಕೆಂದು ಕೇಳಿಕೊಂಡರು. ಇನಾಮದಾರರು ಸ್ವತಃ ಇವರನ್ನು ಕರೆದುಕೊಂಡು ಹೋಗಿ ಹುಬ್ಬಳ್ಳಿಯಲ್ಲಿರುವ ಕೆ.ಎಲ್.ಇ ಸಂಸ್ಥೆಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿ ನಿಯುಕ್ತಿ ಹೊಂದುವಂತೆ ಮಾಡಿದರು. ೧೯೭೦ರಿಂದ ೧೯೮೮ರವರೆಗೆ ಡಾ. ನೇಗಿನಹಾಳರು ಅಲ್ಲಿ ಸೇವೆ ಸಲ್ಲಿಸಿದರು. ಮಧ್ಯದಲ್ಲಿ ಹಾವೇರಿಯಲ್ಲಿರುವ ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು.

೧೯೮೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರೀಡರ್ ಹುದ್ದೆ ಖಾಲಿಯಾಗಿತ್ತು. ಡಾ. ಎಂ.ಎಂ. ಕಲಬುರ್ಗಿ ಅವರ ಸಲಹೆಯಂತೆ ಸಂದರ್ಶನ ಕೊಟ್ಟರು. ರೀಡರ್ ಹುದ್ದೆಗೆ ಆಯ್ಕೆಯಾದರು. ಕರ್ನಾಟಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ಮುಂದಾಯಿತು. ಬೆಳಗಾವಿ ಸಮೀಪದ ಭೂತರಾಮನ ಹಟ್ಟಿಯಲ್ಲಿ ಸ್ನಾತಕೋತ್ತರ ಕೇಂದ್ರ ೧೯೯೨ರಲ್ಲಿ ಪ್ರಾರಂಭವಾಯಿತು. ಇದರ ಮೊದಲ ಆಡಳಿತಾಧಿಕಾರಿಯಾಗಿ ಬಂದವರು ಡಾ. ಎಂ.ಬಿ. ನೇಗಿನಹಾಳ ಅವರು.

ಶೂನ್ಯದಂತಿದ್ದ ಇಲ್ಲಿ ಎಲ್ಲವನ್ನು ಹೊಸದಾಗಿ ಸೃಷ್ಟಿಸಬೇಕಾಗಿತ್ತು. ಡಾ. ನೇಗಿನಹಾಳ ಅವರ ಕಾರ್ಯಕ್ಷಮತೆ–ಶ್ರದ್ಧೆಯ ದುಡಿಮೆಗಳು ಇಲ್ಲಿ ಸಾರ್ಥಕವಾಗಬೇಕಾಗಿತ್ತು. ಸ್ನಾತಕೋತ್ತರ ಕೇಂದ್ರ ಒಂದು ಶೈಕ್ಷಣಿಕ ಕೇಂದ್ರವಾಗಿ ರೂಪಗೊಳ್ಳಬೇಕಾಗಿತ್ತು. ಹಲವಾರು ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಅಧಿಕಾರ ಸ್ವೀಕರಿಸಿದ ಡಾ. ನೇಗಿನಹಾಳ ಅವರು ತಮ್ಮ ಸ್ವಾರ್ಥತ್ಯಾಗ ಮನೋಭಾವದಿಂದ ಅಲ್ಪಾವಧಿಯಲ್ಲಿಯೇ ಸ್ನಾತಕೋತ್ತರ ಕೇಂದ್ರಕ್ಕೆ ಕಾಯಕಲ್ಪ ನೀಡಿದರು. ಹೊಸ

ಹೊಸ ವಿಭಾಗಗಳನ್ನು ತೆರೆದರು. ಕಟ್ಟಡ ನಿರ್ಮಾಣ ಕಾರ್ಯದ ಮೇಲ್ವಿಚಾರಣೆಯನ್ನೂ ನೋಡಿಕೊಂಡರು.

ಡಾ. ನೇಗಿನಹಾಳ ತುಂಬ ಬಿಗುವಿನ ಆಡಳಿತ. ಇಂದಿನ ಅಧಿಕಾರಿಗಳಂತೆ ಕೇಳುತ್ತೇನೆ, ಹೇಳುತ್ತೇನೆ ಎಂಬ ಮಾತೇ ಇರಲಿಲ್ಲ. 'ಅಧಿಕಾರಿ ಕಣ್ಣಾಗ ಕಟ್ಟಿಟ್ಟು ನೋಡಬೇಕು, ಕಿವ್ಯಾಗ ಕಿವಿಯಟ್ಟು, ಕೇಳಬಾರದು' ಎಂಬ ನೀತಿ ಅವರದಾಗಿತ್ತು. ಅವರು ಪ್ರತ್ಯಕ್ಷ ಪರಿಶೀಲಿಸಿ, ಸಾರಾಸಾರ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಒಮ್ಮೆ ತೆಗೆದುಕೊಂಡ ನಿರ್ಣಯ ಯಾವ ಕಾಲಕ್ಕೂ ಬದಲಾಗುತ್ತಿರಲಿಲ್ಲ. ಸ್ನಾಕೋತ್ತರ ಕೇಂದ್ರದ ಪ್ರಾಧ್ಯಾಪಕರು ತಮ್ಮ ದೈನಂದಿನ ಕೆಲಸಕಾರ್ಯಗಳಲ್ಲಿ ನಿರ್ಲಕ್ಷ್ಯ ತೋರಿದರೆ ಇವರಿಗೆ ವಿಶ್ವಾಮಿತ್ರನ ಕೋಪ. ಅಂಥ ಬಿಗುವಿನ ಆಡಳಿತ ಇಂದೆಲ್ಲಿ ಕಾಣುವುದು?

೧೯೯೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಹುದ್ದೆಗೆ ಆಯ್ಕೆಯಾದರು. ಮೇಲ್ಜಾತಿಯ ಕೆಲವು ಪ್ರಾಧ್ಯಾಪಕರು ಇವರಿಗೆ ಬಹಳಷ್ಟು ಕಿರುಕುಳ ಕೊಟ್ಟರು. ಎಲ್ಲವರನ್ನು ಸಮಚಿತ್ತದಿಂದ ಸ್ವೀಕರಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರು ೧೯೯೩ರಿಂದ ೧೯೯೯ರವರೆಗೆ ಸೆನೆಟ್ಟಿನ ಸದಸ್ಯರಾಗಿದ್ದರು. ೧೯೯೫ರಿಂದ ೯೭ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ನಿರ್ದೇಶಕರಾಗಿ ಕೆಲಸ ಮಾಡಿದರು. ೧೯೯೫–೯೮ರ ಅವಧಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರೀ ಮಂಡಲಿಯಲ್ಲಿಸ (ಸೆನೆಟ್) ಸದಸ್ಯರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಕಲಾನಿಕಾಯದ ಡೀನರೆಂದು ಕಾರ್ಯನಿರ್ವಹಿಸಿದ್ದ ಡಾ. ನೇಗಿನಹಾಳ ಆ ವಿಶ್ವವಿದ್ಯಾಲಯದ ಅಕಾಡೆಮಿಕ ಕೌನ್ಸಿಲ್ಲಿನ ಸದಸ್ಯರಾಗಿಯೂ ಕೆಲವು ಕಾಲ ಕೆಲಸ ಮಾಡಿದ್ದರು. ಕರ್ನಾಟಕ ಇತಿಹಾಸ ಅಕಾಡೆಮಿಯ ಬೆಳಗಾವಿ ಜಿಲ್ಲಾ ಘಟಕಕ್ಕೆ ಅವರು ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದ ಅವರ ಅವಧಿ ೨೦೦೧ಕ್ಕೆ ಮುಗಿಯುವುದಿತ್ತು! 'ಶತಮಾನದ ಕನ್ನಡ ಸಾಹಿತ್ಯ' ಎಂಬ ಯೋಜನೆಯಲ್ಲಿ ಅವರು 'ಕನ್ನಡ ಸಂಶೋಧನೆ'ಯನ್ನು ಕುರಿತು ಗ್ರಂಥವನ್ನು ಸಂಪಾದಿಸುತ್ತಿದ್ದರು. ಅವರ 'ಮೈಲಾರಲಿಂಗ: ಖಂಡೋಬಾ' ಎಂಬ ಸಾಂಸ್ಕೃತಿಕ ಅಧ್ಯಯನ ಕುರಿತ ಗ್ರಂಥಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಜಾನಪದ-ಯಕ್ಷಗಾನ ಅಕಾಡೆಮಿ ಎರಡೂ ಸಂಸ್ಥೆಗಳು ಪುರಸ್ಕಾರವಿತ್ತು ಗೌರವಿಸಿವೆ.

■■

# ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ

ಶಾಸನಗಳು ಕರ್ನಾಟಕದ ಪ್ರಾಚೀನತೆಯನ್ನು ಸ್ಪಷ್ಟವಾಗಿ ತೋರಿಸಿದ ಪ್ರಮುಖ ಆಕರ ಸಾಮಗ್ರಿಗಳಾಗಿವೆ. ಶಾಸನಗಳನ್ನು ಅನೇಕ ವಿದ್ವಾಂಸರು ಇತಿಹಾಸದ ಹಿನ್ನೆಲೆಯಲ್ಲಿ ಮಾತ್ರ ಅವಲೋಕಿಸಿದ್ದರು. ಆದರೆ ಡಾ. ನೇಗಿನಹಾಳ ಅವರು ಮೊಟ್ಟಮೊದಲ ಬಾರಿಗೆ ಸಮಗ್ರವೂ ಪರಿಪೂರ್ಣವೂ ಆದ ರೀತಿಯಲ್ಲಿ ಶಾಸನಗಳಲ್ಲಿರುವ ಭಾಷಿಕ ಅಧ್ಯಯನವನ್ನು ಪೂರ್ಣಗೊಳಿಸಿದರು.

ಕನ್ನಡ ಶಾಸನಗಳಲ್ಲಿರುವ ಭಾಷಿಕ ಅಧ್ಯಯನ ಕುರಿತಂತೆ ಡಾ. ನೇಗಿನಹಾಳರ ಪೂರ್ವದಲ್ಲಿ ಡಾ. ಎನ್. ನರಸಿಂಹಯ್ಯ ಮತ್ತು ಡಾ. ಜಿ.ಎಸ್. ಗಾಯಿ ಅವರು ತಕ್ಕಮಟ್ಟಿನ ಕಾರ್ಯ ಮಾಡಿದ್ದರು. ಅವರು ೬ನೇ ಶತಮಾನದಿಂದ ೧೦ನೇ ಶತಮಾನದ ವರೆಗಿನ ಶಾಸನಗಳನ್ನು ಮಾತ್ರ ತಮ್ಮ ಅಧ್ಯಯನ ವ್ಯಾಪ್ತಿಗೆ ತೆಗೆದುಕೊಂಡಿದ್ದಾರೆ. ಕ್ರಿ.ಶ. ೪೫೦-೮೫೦ ರ ಅವಧಿಗೆ ಸೇರಿದ ಕೇವಲ ೧೩೭ ಶಾಸನಗಳು ಅವರ ಅಧ್ಯಯನಕ್ಕೆ ಒಳಗಾಗಿರುವುದರಿಂದ ಉಳಿದ ೪೦೦ ರಷ್ಟು ಶಾಸನಗಳನ್ನು ಅಧ್ಯಯನ ಮಾಡದೆ ಆ ಕಾಲಘಟ್ಟದ ಭಾಷಿಕ ಅಧ್ಯಯನ ಪೂರ್ಣಗೊಳಿಸಲಾಗದೆಂದು ಭಾವಿಸಿದ ಡಾ. ನೇಗಿನಹಾಳ ಹೀಗೆ ಹೇಳುತ್ತಾರೆ : 'ಉಪಲಬ್ಧ ಸಾಮಗ್ರಿಯ ೧/೩ರಷ್ಟು ದಷ್ಟನ್ನು ಮಾತ್ರ ಡಾ. ನರಸಿಂಹಯ್ಯ ಮತ್ತು ಡಾ. ಗಾಯಿಯವರು ಬಳಸಿಕೊಂಡಂತಾಗಿದೆ. ಈ ಕಾರಣ ಇವರೀರ್ವರು ಇತ್ತ ನಿರ್ಣಯಗಳಲ್ಲಿ ಓರೆಕೋರೆಗಳಿರುವುದು ಸಹಜ. (ಹಲ್ಮಿಡಿ ಶಾಸನದಂಥ ಕೆಲವು ಶಾಸನಗಳು ತಡವಾಗಿ ಸಂಶೋಧಿಸಲ್ಪಟ್ಟಿವೆ.) ಈ ಮಾತಿಗೆ ಸಾಕ್ಷಿ ಎಂಬಂತೆ ಡಾ. ಡಿ.ಎಲ್.ನರಸಿಂಹಾಚಾರ್ಯರು ತಮ್ಮ ವಡ್ಡಾರಾಧನೆಯ (೧೯೭೫ನೆ ವರ್ಷದ ಆವೃತ್ತಿ) ಮುನ್ನುಡಿಯಲ್ಲಿ ಪ-ಹ ಪರಿವರ್ತನೆಯು ೧೦ನೇ ಶತಮಾನಕ್ಕಿಂತಲೂ ಹಿಂದಿನ ಶಾಸನಗಳಲ್ಲಿ ತೋರಿ ಬರುವ ಉದಾಹರಣೆಗಳನ್ನು ಎತ್ತಿ ತೋರಿಸಿದ್ದಾರೆ. ಇದಲ್ಲದೆ ಆಧುನಿಕ ಭಾಷಾ ವಿಜ್ಞಾನಿಗಳು ಇಂದು ದಕ್ಷಿಣ ದ್ರಾವಿಡದಲ್ಲಿ ಆದಿತಾಲವ್ಯವು ಲೋಪಿಸಿದೆ ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಈ ಅವಧಿಯ ಕನ್ನಡ ಶಾಸನಗಳಲ್ಲಿ ಇಂಥ ಪರಿವರ್ತನೆಯ ಅವಶೇಷಗಳು ಅಲ್ಲಲ್ಲಿ ಉಳಿದು ಬಂದಿರುವುದನ್ನು ಕಾಣಬಹುದಾಗಿದೆ. ಇಂಥ ಇನ್ನೂ ಹಲವು ಸಿದ್ಧಾಂತಗಳು ದ್ರಾವಿಡಭಾಷಾ

ವಿಜ್ಞಾನದಲ್ಲಿ ಪ್ರಚಲಿತವಾಗಿವೆ. ಈ ಸಿದ್ಧಾಂತಗಳ ಬೆಳಕಿನಲ್ಲಿ ಈ ಶಾಸನಗಳ ಭಾಷೆಯನ್ನು ನೋಡುವುದು ಅವಶ್ಯಕವಾಗಿತ್ತು' (ಪ್ರಸ್ತಾವನೆ ಪು. ೧)

ಪೂರ್ವದ ಹಳಹನ್ನಡ ಎಂಬ ಅವಸ್ಥೆಯನ್ನು ವಿದ್ವಾಂಸರು ೯ನೇ ಶತಮಾನದ ವರೆಗೆ ನಿರ್ಧರಿಸಿದ್ದಾರೆ. ಕವಿರಾಜಮಾರ್ಗವು ಈ ಸಂಧಿಕಾಲದಲ್ಲಿ ಹುಟ್ಟಿದೆ ಎಂಬ ಅಭಿಪ್ರಾಯಕ್ಕನುಗುಣವಾಗಿ ಡಾ. ನೇಗಿನಹಾಳ ಅವರು ತಮ್ಮ ಶಾಸನಗಳ ಅವಧಿಯನ್ನು ಕ್ರಿ.ಶ. ೮೫೦ಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ.

ಈ ಅಧ್ಯಯನದ ಅನೇಕ ಹೊಸ ಹೊಸ ಸಂಗತಿಗಳನ್ನು ಡಾ. ನೇಗಿನಹಾಳ ಕನ್ನಡ ಸಾರಸ್ವತಲೋಕಕ್ಕೆ ನೀಡಿದರು. ಕನ್ನಡ ಕಟ್ಟುವ ಕೆಲಸವನ್ನು ಡಾ. ನೇಗಿನಹಾಳರು ಕನ್ನಡದ ಪ್ರಾಚೀನತೆಯನ್ನು ತೋರಿಸಿಕೊಡುವ ಮೂಲಕ ಕನ್ನಡ ಪರಂಪರೆಯನ್ನು ಪುನರುಜ್ಜೀವನಗೊಳಿಸುವ ಕಾರ್ಯ ಮಾಡಿದರು.

ಅಲ್ಪಶಿಕ್ಷಿತ, ಅಶಿಕ್ಷಿತ ವ್ಯಕ್ತಿಗಳಿಂದಲೂ ಶಾಸನಗಳನ್ನು ಬರೆಯಿಸುವ ಕಾರ್ಯ ಜರುಗುತ್ತಿತ್ತು. ಹೀಗಾಗಿ ಲೇಖನ ಸ್ಖಾಲಿತ್ಯಗಳನ್ನು ನುಸುಳಿರುವ ಸಂಭವ ಹೆಚ್ಚು, ಸ್ಖಾಲಿತ್ಯಗಳು ಆಡುಮಾತಿನ ಶೈಲಿಯಲ್ಲಿಯೂ ಇರಬಹುದಾಗಿದ್ದು, ಆಧುನಿಕ ಶಾಸನ ಸಂಪಾದಕರಿಂದ ಈ ತಪ್ಪುಗಳನ್ನು ಸರಿಪಡಿಸುವ ಪ್ರಯತ್ನ ತಕ್ಕಮಟ್ಟಿಗೆ ನಡೆಯಿತು. ಅನೇಕ ಸಂದರ್ಭಗಳಲ್ಲಿ ತಪ್ಪು ಸರಿಪಡಿಸುವ ನೆಪದಲ್ಲಿ ಇನ್ನೊಂದು ತಪ್ಪನ್ನು ಶಾಸನ ಸಂಪಾದಕರು ಮಾಡಿದರು. ಈ ಕಾರಣವಾಗಿ ಡಾ. ನೇಗಿನಹಾಳ ಅವರು ಶಾಸನಗಳ ಬರವಣಿಗೆ ಬಗ್ಗೆ ಹೀಗೆ ಹೇಳುತ್ತಾರೆ:

'ಎ ಮತ್ತು ಒ ಸ್ವರಗಳ ಲಿಪಿ ಸ್ವರೂಪ ನಮಗೆ ಇಲ್ಲಿ ಮುಖ್ಯವೆಂದು ಭಾವಿಸಬಹುದು. ಶಾಸನಗಳಲ್ಲಿ ಇವುಗಳಿಗೆ ಪ್ರತ್ಯೇಕವಾದ ಸಂಜ್ಞೆಗಳಿಲ್ಲ. ಇದರಿಂದ ತಮಗೆ ಅಪರಿಚಿತವಾದ ಎಷ್ಟೋ ಶಬ್ದಗಳನ್ನು ಸಂಪಾದಕರು ತಪ್ಪಾಗಿ ಕೊಟ್ಟಿದ್ದಾರೆ. ಉದಾಹರಣೆಗೆ ತೊೞುಗೋಳ್, ತುೞುಗೋಳ್ ಎಂಬ ಪದವನ್ನು ನೋಡಬಹುದು. ಇದರಲ್ಲಿ 'ಗೋಳ್' ಎಂದು ದೀರ್ಘವಿರಬೇಕಾದುದು ಅವಶ್ಯಕ. ಆದರೆ ಶಾಸನಗಳಲ್ಲಿ ತೋರಿಬರುವ ಸಂದರ್ಭಗಳಲ್ಲೆಲ್ಲ ಸಂಪಾದಕರು ಹ್ರಸ್ವವನ್ನೇ ಕೊಟ್ಟಿದ್ದಾರೆ. ಕೆಲವು ಶಾಸನಗಳ ಪಾಠದಲ್ಲಿ ಕೊಟ್ಟೆ, ತೊಟ್ಟ ಎಂಬ ರೂಪುಗಳನ್ನು ಕೊಡಲಾಗಿದೆ. ಇವೂ ಮೇಲಿನಂತೆ ಕೋಟ್ಟೆ, ತೋಟ್ಟ ಎಂದು ದೀರ್ಘಯುಕ್ತವಾಗಿರಬೇಕು. ಫ್ಲೀಟರು ತಾವು ಸಂಪಾದಿಸಿದ ಬ್ರಿಟಿಷ್ ಮ್ಯುಜಿಯಂ ಶಾಸನದಲ್ಲಿ 'ಮೆಪ್ಪು' ಎಂಬ ಪ್ರಯೋಗವನ್ನಿತ್ತದ್ದಾರೆ. ಇದು 'ಮೇಪ್ಪು' ಎಂದಿರಬೇಕು. ಆರ್. ನರಸಿಂಹಾಚಾರ್ಯರು ನರಸಿಂಹರಾಜಪುರ ಶಾಸನದಲ್ಲಿ 'ಕರಿಮಾನಾಖ್ಯಮಾನ್ ಒತ್ತುಕೊಟ್ಟನ್' ಎಂಬ ಪಾಠಕೊಟ್ಟಿದ್ದಾರೆ. ಇಲ್ಲಿ 'ಒತ್ತು' ಎಂದರೆ ಸರಿಯಾದ ಅರ್ಥ ಏನೆಂದು ತಿಳಿಯುವುದಿಲ್ಲ. ಇದು ನಿಜವಾಗಿ 'ಓತ್ತು' (ಓವು ಇದರ ಭೂತನ್ಯೂನ ರೂಪ, ಓತ್ತು>ಹ.ಗ, ಓತು)

ಎಂದಿರಬೇಕು. ಮಾವಳಿ ಶಾಸನದಲ್ಲಿ 'ಏಸುವೆತ್ತು' ಎಂದಿರಬೇಕಾದುದನ್ನು 'ಎಸುವೆತ್ತು' ಎಂದು ಕೊಡಲಾಗಿದೆ. ಇನ್ನುಳಿದ ಸಂದರ್ಭಗಳಲ್ಲಿ ಸಂಪಾದಕರು ಕೊಡುವ ಸಂದೋನ್, ಸಂದೊನ್ ಎಂಬ ರೂಪಗಳಲ್ಲಿ ಯಾವುದು ನಿಜವಾದುದೆಂದು ನಿರ್ಧರಿಸಿ ಹೇಳುವುದು ಶಕ್ಯವಿಲ್ಲ. ಆದುದರಿಂದ ಇಂಥ ಪ್ರಸಂಗಗಳಲ್ಲಿ ಪ್ರಕಟವಾಗಿರುವ ಶಾಸನಪಾಠವನ್ನು ಇದ್ದಕ್ಕಿದ್ದಂತೆ ನಂಬಿ ಮುಂದುವರಿಯಲಾಗಿದೆ. ತೀರಾ ಸ್ಪಷ್ಟ ಮತ್ತು ಆವಶ್ಯಕವೆನಿಸಿದ ಕೆಲವು ಸ್ಥಳಗಳಲ್ಲಿ, ಅದೂ ಶಾಸನ ಸಂಪಾದಕರು ತಿದ್ದುಪಡಿ ಸೂಚಿಸದೆ ಇದ್ದ ಪಕ್ಷದಲ್ಲಿ ಊಹಾಪಾಠವನ್ನು ಕೊಡಲಾಗಿದೆ.

ಒಟ್ಟು ಎಂಟು ಅಧ್ಯಾಯನಗಳನ್ನು ಒಳಗೊಂಡಿರುವ ಈ ಸಂಶೋಧನ ಪ್ರಬಂಧದಲ್ಲಿ ಡಾ. ನೇಗಿನಹಾಳ ಅವರು ಕರ್ನಾಟಕದ ಶಾಸನಗಳಲ್ಲಿ ಪ್ರಾಕೃತ-ಸಂಸ್ಕೃತ-ಕನ್ನಡ ಪ್ರಭೇದಗಳನ್ನು ಸ್ಪಷ್ಟವಾಗಿ ಗುರುತಿಸುವ ಸಾಹಸ ಮಾಡಿದ್ದಾರೆ. ಕನ್ನಡ ವರ್ಣಗಳು, ಶಬ್ದರೂಪ ವಿಚಾರ, ಸ್ವೀಕರಣ ವಿಚಾರ, ನಾಮಪದ ವಿಚಾರ, ಕ್ರಿಯಾಪದ ವಿಚಾರ, ವಾಕ್ಯ ವಿಚಾರ ಮುಂತಾದ ವಿಷಯಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಕೊನೆಗೆ ಕೆಲವು ನಿರ್ಣಯಗಳನ್ನು ಕೊಟ್ಟಿದ್ದಾರೆ.

ಡಾ. ನೇಗಿನಹಾಳ ಅವರು ಕನ್ನಡ ಶಾಸನಗಳಲ್ಲಿ ತಮಿಳಿನ ಪ್ರಭಾವವೂ ಕೆಲಮಟ್ಟಿಗೆ ಆಗಿರುವುದನ್ನು ತೋರಿಸಿದ್ದಾರೆ. ಆದರೆ ಇದು ಪ್ರಭಾವಸ್ವರೂಪದವಾಗಿವೆಯೆ ಹೊರತು ಪರಿಣಾಮ ಸ್ವರೂಪವಾಗಿಲ್ಲ ಎಂಬ ನಿರ್ಣಯಕ್ಕೆ ಬಂದಿದ್ದಾರೆ.

ಕನ್ನಡ ಭಾಷೆಯು ಪ್ರಪ್ರಥಮ ಆಧಾರಗಳು ಎರಡನೆಯ ಶತಮಾನದ ಮಳವಳ್ಳಿ ಮತ್ತು ಸನ್ನತಿಯ ಪ್ರಾಕೃತಶಾಸನಗಳಲ್ಲಿ ಕಂಡುಬರುವುದನ್ನು ಅವರು ಗುರುತಿಸಿ ಕನ್ನಡದ ಪ್ರಾಚೀನತೆಯನ್ನು ಸ್ಪಷ್ಟಪಡಿಸಿದ್ದಾರೆ.

ದ್ವಿತೀಯಾಕ್ಷರದಲ್ಲಿ (೧) ಅಕಾರವಾಗಲಿ (೨) ಮಧ್ಯಸ್ವರ ಎಕಾರವಾಗಲಿ (೩) ದ್ವಿತ್ವವಾಗಲೀ ಇದ್ದರೆ ಮೂಲ ಕನ್ನಡದಲ್ಲಿದ್ದ ಪ್ರಥಮ ಮಧ್ಯಸ್ವರಗಳು ಯಾವ ವ್ಯತ್ಯಾಸವೂ ಇಲ್ಲದೆ ಕ್ರಿ.ಶ. ೮೫೦ರವರೆಗೂ ಉಳಿದು ಬಂದಿವೆ.

ಪ್ರಥಮಸ್ವರವು ಮಧ್ಯವಾಗಿದ್ದು, ದ್ವಿತೀಯಾಕ್ಷರದಲ್ಲಿ ಉಚ್ಚಸ್ವರ ಬಂದಿದ್ದರೆ ಅಂಥ ಶಬ್ದಗಳ ಪ್ರಥಮ ಮಧ್ಯಸ್ವರವು ೭ನೇ ಶತಮಾನದಲ್ಲಿ ಒಂದು ಉದಾಹರಣೆಯಲ್ಲಿಯೂ ೮ನೇ ಶತಮಾನದಲ್ಲಿ ಸಾಕಷ್ಟು ಉದಾಹರಣೆಗಳಲ್ಲಿಯೂ ಉಚ್ಚವಾಗಿ ಪರಿವರ್ತಿಸಿದ್ದು ಕಂಡು ಬರುತ್ತದೆ. ಹೀಗೆ ಪರಿವರ್ತಿತ ರೂಪಗಳೂ ಮೂಲದರೂಪಗಳೂ ಜೊತೆಜೊತೆಗೆ ಇವೆಯಾದರೂ ೯ನೇ ಶತಮಾನದಲ್ಲಿ ಪರಿವರ್ತಿತರೂಪಗಳೆ ವಿಶೇಷವಾಗಿವೆ.

ಒಂದು ಉದಾಹರಣೆಯಲ್ಲಿ ಆದಿಸ್ವರವೆ ಉಚ್ಚವಾಗಿದ್ದು ದ್ವಿತೀಯಸ್ವರವು ಮಧ್ಯವಾಗಿದ್ದುದು ೭ನೇ ಶತಕದಲ್ಲಿ ಕಂಡುಬಂದಿದೆ. ಅನಂತರ ಕಾಲದಲ್ಲಿ ಈ ಉದಾಹರಣೆಯ ಆದಿಸ್ವರವೇ ಮಧ್ಯ(ಎಕಾರ)ವಾಗಿ ಮಾರ್ಪಟ್ಟಿದೆ. (ಉದಾ: ಶಿವ'ನಿಲೆ'> ಶಿವನೆಲೆ) ಆದಿ–ಮಧ್ಯ–ಅಂತ್ಯ ಎಕಾರದ ಬದಲು ಕೆಲವು ಪದಗಳಲ್ಲಿ ಅಕಾರವೂ ಕಂಡು ಬರುತ್ತದೆ.

ಹೀಗೆ ಅನೇಕ ಹೊಸ ಹೊಸ ವಿಷಯಗಳನ್ನು ಭಾಷಿಕ ನೆಲೆಯಲ್ಲಿ ಮೊಟ್ಟಮೊದಲು ಶೋಧಿಸಿದ ಕೀರ್ತಿ ಡಾ. ನೇಗಿನಹಾಳ ಅವರಿಗೆ ಸಲ್ಲುತ್ತದೆ.

■■

# ಕನ್ನಡ ನಾಡು-ನುಡಿ
# ಇತಿಹಾಸದ ಅವಲೋಕನ ವರ್ತಮಾನದ ನವೀಕರಣ

ಕನ್ನಡ ನಾಡು-ನುಡಿಗಳು ಎಷ್ಟು ಪ್ರಾಚೀನ ಎಂಬುದನ್ನು ಅನೇಕ ಸಂಶೋಧಕರು ಶೋಧಿಸುತ್ತ ಬಂದಿದ್ದಾರೆ. ಡಾ. ನೇಗಿನಹಾಳ ಅವರು ಈ ವಿಷಯವಾಗಿ ಇನ್ನೂ ಖಚಿತವಾದ ಆಧಾರಗಳನ್ನು ಒದಗಿಸುವ ಮೂಲಕ ಕನ್ನಡ ಪರಂಪರೆಯನ್ನು ವಿಸ್ತಾರ-ವಿಸ್ತಾರೋನ್ನತವಾಗಿ ಬೆಳೆಸಿದ್ದಾರೆ.

ಕರ್ನಾಟಕದಲ್ಲಿ ದೊರೆಯುವ ನಿರ್ದಿಷ್ಟವಾದ ಐತಿಹಾಸಿಕ ದಾಖಲೆಗಳಲ್ಲಿ ಮೌರ್ಯ ಅಶೋಕನ ಪ್ರಾಕೃತ ಲಿಪಿಗಳೇ ಮೊದಲಿನವು. ಅವುಗಳ ತರುವಾಯ ಶಾಸವಾಹನ, ಪಲ್ಲವ ಮತ್ತು ಕದಂಬ ರಾಜಮನೆತನಗಳಿಗೆ ಸೇರಿದ ಪ್ರಾಕೃತ ಶಾಸನಗಳು ಅಲ್ಲಲ್ಲಿ ತೋರಿಬಂದಿವೆ. ಕ್ರಿಶ. ಪೂರ್ವ ಮೂರನೆಯ ಶತಮಾನದಿಂದ ಕ್ರಿಶ. ನಾಲ್ಕನೆಯ ಶತಮಾನದವರೆಗಿನ ಸುಮಾರು ಏಳನೂರು ವರ್ಷಗಳ ಕಾಲಾವಧಿಯಲ್ಲಿ ಇವು ಹುಟ್ಟಿವೆ. ಪ್ರದೇಶವ್ಯಾಪ್ತಿಯ ದೃಷ್ಟಿಯಿಂದ ಇವು ಉತ್ತರದಲ್ಲಿ ಕಲಬುರ್ಗಿ ಜಿಲ್ಲೆಯ ಸನ್ನತಿಯಿಂದ ಪ್ರಾರಂಭಿಸಿ (ಬೆಳಗಾವಿ ಸಮೀಪದ) ವಡಗಾವಿ, ಬನವಾಸಿ, ಮಳವಳ್ಳಿಗಳಲ್ಲೂ ತುಂಗಭದ್ರೆಯ ಎಡಬಲದ ಮಸ್ಕಿ, ಕೊಪ್ಪಳ, ನಿಟ್ಟೂರು ಮೊದಲಾದೆಡೆಗಳಲ್ಲಿಯೂ ದಕ್ಷಿಣ ಕರ್ನಾಟಕದ ಹಿರೇಮಗಳೂರಿನಲ್ಲಿಯೂ ದೊರೆತಿವೆ. ತುಂಗದ್ರೆಯ ಎಡಬಲದ ಪ್ರದೇಶದಲ್ಲಿಯೇ ಪ್ರಾಕೃತ ಶಾಸನಗಳ ಸಂಖ್ಯೆ ವಿಶೇಷವಾಗಿದ್ದು ದಕ್ಷಿಣ ಕರ್ನಾಟಕದಲ್ಲಿ ತೀರ ಕಡಿಮೆಯಾಗಿದೆ. ಕರ್ನಾಟಕದ ಮೇಲೆ ಆದ ಆರ್ಯಮೂಲ ಸಂಸ್ಕೃತಿಯ ಪ್ರಭಾವದ ದೃಷ್ಟಿಯಿಂದ ಈ ಸಂಗತಿ ಗಮನಾರ್ಹವಾಗಿದೆ. ಕರ್ನಾಟಕ ಸಂಸ್ಕೃತಿಯ ವಿಕಾಸದ ಈ ಹಂತದಲ್ಲಿ ತುಂಗಭದ್ರಾ ನದಿಯೂ ವಿಶಿಷ್ಟ ಪಾತ್ರವಹಿಸಿದೆಯೆಂದು ಇದರಿಂದ ಶ್ರುತ ಪಡುತ್ತದೆ.

ಈವರೆಗೆ ಒಟ್ಟು ಇಪ್ಪತ್ತೊಂದು ಕಡೆ ಪ್ರಾಕೃತ ಶಾಸನಗಳು ಕರ್ನಾಟಕದಲ್ಲಿ ಕಂಡುಬಂದಿವೆ. ಇತ್ತೀಚೆಗೆ ಅಶೋಕನ ಮತ್ತೆರಡು ಸಾಸನಗಳು ದೊರೆತಿದ್ದು, ಕರ್ನಾಟಕದಲ್ಲಿ ಅವನ ಶಾಸನಗಳ ಸಂಖ್ಯೆ ಹತ್ತಕ್ಕೇರಿದೆ. ಧರ್ಮದ ದೃಷ್ಟಿಯಿಂದ ಇವುಗಳಲ್ಲಿ ಸನ್ನತಿಯ ಬಿಡಿಬರಹಗಳು ಬೌದ್ಧ ಧರ್ಮಕ್ಕೆ ಸಂಬಂಧಿಸಿದ್ದರೆ,

ಮಳವಳ್ಳಿಯ ಶಾಸನಗಳು ಶೈವಪರವಾಗಿವೆ. ಮಾಧವಪೂರ-ವಡಗಾವಿ, ಹಿರೇಮಗಳೂರು ಮತ್ತು ಹಿರೇಹಡಗಲಿಯ ಪಲ್ಲವ ಶಾಸನಗಳು ವೈದಿಕಮತಕ್ಕೆ ಸಂಬಂಧಿಸಿವೆ. ಇದರಿಂದ ಕನ್ನಡ ಜನಪದವು ವೈದಿಕ-ಅವೈದಿಕವಾದ ಎರಡೂ ಸಂಪ್ರದಾಯಗಳ ಪ್ರಭಾವವಲಯದಲ್ಲಿ ಅಂದು ಬಾಳುತ್ತಿದ್ದುದು ಸ್ಪಷ್ಟವಿದೆ. ಉತ್ತರದವರಾದ ಮೌರ್ಯರು ತಮ್ಮ ಅಡಳಿತವನ್ನು ನೇರವಾಗಿ ಕರ್ನಾಟಕದ ಮೇಲೆ ಹೇರಿದ್ದರಿಂದ ಅವರ ಕಾಲದಲ್ಲಿ ಕನ್ನಡ ಜನಪದರ ಮೇಲೆ ಆರ್ಯ ಸಂಸ್ಕೃತಿಯ ಪ್ರಭಾವ ಮುದ್ರೆ ದಟ್ಟವಾಗಿ ಮೂಡಿರಬೇಕೆಂದು ತೋರುತ್ತದೆ.

ಖ್ಯಾತ ಶಾಸನ ಸಂಶೋಧಕ ಡಾ. ಪಿ.ಬಿ. ದೇಸಾಯಿ ಅವರು ಸನ್ನತಿಯ ಶಾಸನವೊಂದರಲ್ಲಿ 'ಸಂಬಲೀವ ಊರ ವಾಸಿನೋ' ಎಂಬ ಪಾಠವಿರುವುದಾಗಿ ಹೇಳಿದ್ದರು. ಅದನ್ನು ಗಮನಿಸಿ ಡಾ. ನೇಗಿನಹಾಳ ಅವರು 'ಸಂಬಲೀವಊರ' ಎಂಬುದರ ಅಂತ್ಯದಲ್ಲಿ 'ಊರ್' ಎಂಬ ಕನ್ನಡ ಆಕೃತಿಮಾ ಇದ್ದುದು ಸ್ಪಷ್ಟ 'ಸಂಬಲೀವಊರ' ಎಂಬುದನ್ನು 'ಸಂಬಲ+ಈವ+ಊರ' ಎಂಬುದ ವಿಭಾಗಿಸಬಹುದೇನೋ?' ಎಂದು ಊಹಿಸಿದ್ದರು. ಸಂಶೋಧಕನಾದವನು ತನ್ನ ಅಭಿಪ್ರಾಯಗಳಿಗೆ ಅಂಟಿಕೊಳ್ಳದೆ ಕಾಲಕಾಲಕ್ಕೆ ಬದಲಾದ ಸಿದ್ಧಾಂತಗಳಿಗೆ ಒಲವು ತೋರಿಸಬೇಕೆಂಬುದನ್ನು ಅವರು ತೋರಿಸಿದರು. ಅವರೇ ಈ ವಿಷಯವಾಗಿ ಹೀಗೆ ಹೇಳುತ್ತಾರೆ:

'ಸನ್ನತಿಯ ಶಸನವೊಂದರಲ್ಲಿ 'ಸಂಬಲೀವ ಊರ ವಾಸಿನೋ' ಎಂಬ ಪಾಠ ವಿರುವುದಾಗಿ ಡಾ॥ ಪಿ.ಬಿ.ದೇಸಾಯಿ ಹೇಳಿದ್ದರು. ಅವರ ಈ ಪಾಠವನ್ನಿಟ್ಟು ಕೊಂಡು (ನಾನು ಅದೊಂದು ಸ್ಥಳವಾಚಕವೆಂದು ಗ್ರಹಿಸಿ) 'ಕನ್ನಡ ನಾಡು-ನುಡಿಗಳು ಎಷ್ಟು ಪ್ರಾಚೀನ?' ಎಂಬ ಲೇಖನದಲ್ಲಿ ಆ ಕುರಿತು ಚರ್ಚಿಸಿದ್ದೆ. ಇತ್ತೀಚೆ ಡಾ॥ ಐ.ಕೆ. ಶರ್ಮಾ ಮತ್ತು ಜೆ. ವರಪ್ರಸಾದರಾದ ಅವರು ಆ ಶಾಸನದಲ್ಲಿನ 'ಸಂಬಲೀವ ಊರ' ಎಂಬ ಪಾಠಕ್ಕೆ ಪ್ರತಿಯಾಗಿ'ಬಲಿವದಾರ' ಎಂಬ ಓದು ಕೊಟ್ಟಿದ್ದಾರೆ. ಈ ಇಬ್ಬರು ವಿದ್ವಾಂಸರಿತ್ತ ಶಾಸನ ಪಡಿಯಚ್ಚುಗಳನ್ನು ಪರೀಕ್ಷಿಸಲಾಗಿ 'ಬಲಿದಾರ' ಎಂಬ ಪಾಠವೇ ಅಲ್ಲಿ ಕಂಡು ಬರುತ್ತಿದೆ. ಕಾರಣ ಪ್ರಸ್ತುತ ಲೇಖನದ ಚರ್ಚೆಯಲ್ಲಿ 'ಸಂಬಲೀವ ಊರ' ಎಂಬುದನ್ನು ಅಲಕ್ಷಿಸಬೇಕಾಗಿ ಓದುಗರಲ್ಲಿ ಕೋರಿಕೆ.'

ಕಾಲಕಾಲಕ್ಕೆ ಹೊಸಹೊಸ ವಿಷಯಗಳು, ಸಮಸ್ಯೆಗಳು ಹುಟ್ಟಿಕೊಂಡಂತೆ, ಸಂಶೋಧನ ಕ್ಷೇತ್ರದಲ್ಲಿ ಅವುಗಳನ್ನು ಕುರಿತ ಚರ್ಚೆಗಳು ನಡೆಯುವುದು ಸ್ವಾಭಾವಿಕ. ನಮ್ಮ ಹಿಂದಿನ ತಲೆಮಾರಿನಲ್ಲಿ ಕವಿ-ಕಾಲ-ಕಾವ್ಯಗಳು, ಅವುಗಳಲ್ಲಿ ಪ್ರಯೋಗಗೊಂಡ ಶಬ್ದವಿಶೇಷಗಳು ಹೆಚ್ಚಾಗಿ ವಿದ್ವಾಂಸರ ಚರ್ಚೆಯ ವಿಷಯಗಳಾಗಿದ್ದವು. ಕನ್ನಡನಾಡು

ಆರು ತುಂಡುಗಳಲ್ಲಿ ಹಂಚಿ ಹೋಗಿದ್ದಿತು. ದೇಶದ ಪಾರತಂತ್ರ್ಯ ಮತ್ತು ಪಾಶ್ಚಾತ್ಯ ವಿಚಾರಗಳು ಅಂದು ಇತರ ಕ್ಷೇತ್ರಗಳಂತೆ ಕನ್ನಡ ಸಂಶೋಧನಕ್ಷೇತ್ರದ ಮೇಲೆ ಕೂಡ ತೀವ್ರ ಪ್ರಭಾವ ಬೀರಿದ್ದವು. ೧೯೫೬ರ ತರುವಾಯ ಈ ಪರಿಸ್ಥಿತಿ ಬದಲಾಯಿಸಿ, ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಬಹು ದೊಡ್ಡ ಪ್ರಮಾಣದ ಕೆಲಸ ನಡೆಯತೊಡಗಿತು. ಹೆಚ್ಚು ಹೆಚ್ಚು ಸಮಾಜಮುಖಿಯಾದ ಅಂತರಶಿಸ್ತೀ ಚಿಂತನೆಗಳು ಕೂಡ ಈ ಕ್ಷೇತ್ರದಲ್ಲಿ ಕಾಲಿಟ್ಟವು. ಜಾನಪದ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತರಾದ ಅನೇಕ ವಿದ್ವಾಂಸರು ಹೊಸ ಹೊಸ ಆಯಾಮಗಳನ್ನು ತೆರೆದಿಟ್ಟರು.

ಡಾ. ನೇಗಿನಹಾಳ ಅವರು ಕನ್ನಡ ನಾಡು-ನುಡಿಗಳು ಎಷ್ಟು ಪ್ರಾಚೀನ ಎಂಬುದಕ್ಕೆ ಒಂದು ನಿರ್ಣಯ ಕೊಡುತ್ತಾರೆ. 'ಕ್ರಿ.ಶ. ಎರಡನೆಯ ಶತಮಾನದ ಬೌದ್ಧಗ್ರಂಥ ಲಲಿತ ವಿಸ್ತರದ 'ಕನಾರಿ' ಎಂಬ ಲಿಪಿಯ ಹೆಸರು, ಶೂದ್ರಕ ಕವಿಯ ಮೃಚ್ಛಕಟಕದಲ್ಲಿ ಬಂದಿರುವ 'ಕಣ್ಣಾಡಕಲಹ' ಪ್ರಯೋಗ', ಹಾಲರಾಜನ ಗಾಥಾಸಪ್ತಶತಿಯಲ್ಲಿ ಬಂದಿರುವ 'ತೀರ್' ಮುಂತಾದ ಶಬ್ದಗಳು-ಇವೇ ಮೊದಲಾದುವನ್ನು ಗಮನಕ್ಕೆ ತೆಗೆದುಕೊಂಡರೆ 'ಕರ್ನಾಟಕ' ಎಂಬ ಜನಪದವು ಕ್ರಿ.ಶ. ಪೂರ್ವ ಮೂರು ಅಥವಾ ಎರಡನೆಯ ಶತಮಾನದ ಅವಧಿಯಲ್ಲಿ ಅಸ್ತಿತ್ವದಲ್ಲಿತ್ತು ಎಂದು ತಿಯುತ್ತದೆ. ಅದರ ಸ್ವತಂತ್ರ ಅಸ್ತಿತ್ವ ನಿರ್ಮಾಣದಲ್ಲಿ ಪ್ರಾಕೃತವು ಸಾಕಷ್ಟು ಪ್ರಭಾವ ಬೀರಿದೆ. ಅನೇಕರಿಗೆ ಅದೂ ಒಂದು ಪ್ರಾಕೃತವೇ ಎಂಬ ಭ್ರಮೆ ಉಂಟಾಗುವಂತಾಗಿದೆ. ಕನಿಷ್ಟಪಕ್ಷ ಕೆಲವರಾದರೂ ಆ ರೀತಿ ಭಾವಿಸುತ್ತಿದ್ದರೆಂಬುದಕ್ಕೆ ಶಾಸಧಾರ ಕೂಡ ಇದೆ. ಆದ್ದರಿಂದ ಕನ್ನಡವು ತಮಿಳಿನಿಂದ ಪ್ರತ್ಯೇಕಗೊಂಡದ್ದು ಪ್ರಾಕೃತ ಶಾಸನಗಳ ಅವಧಿಯಲ್ಲಿಯೇ-ಅಂದರೆ ಮೊದಲ ಹಂತದಲ್ಲಿಯೇ ಎಂದು ಹೇಳಬಹುದು.' (ನೇಗಿನಹಾಳ ಪ್ರಬಂಧಗಳು ಪುಟ,೩೧)

* * *

ಬಿಂಜ ಶಬ್ದ ವಿಂಧ್ಯದ ತದ್ಭವವೆಂದು ಕೇಶಿರಾಜ ಹೇಳುತ್ತಾನೆ.ವಿಂಧ್ಯವು ಉತ್ತರ ಮತ್ತು ದಕ್ಷಿಣ ಭಾರತಗಳನ್ನು ವಿಭಾಗಿಸುವ ಪರಂಪರಾಗತ ಪರ್ವತಶ್ರೇಣಿ. ಪ್ರಾಚೀನ ಕನ್ನಡ ಶಬ್ದಗಳಲ್ಲಿ ವಿಂಧ್ಯವು ಬಿಂಜ ಎಂಬರ್ಥದಲ್ಲಿ ಉಲ್ಲೇಖವಾಗಿದೆ. ಅದನ್ನು ಶಾಸನಗಳಲ್ಲಿ ಹುಡುಕಿದ ಡಾ. ನೇಗಿನಹಾಳ ಅವರು ಕನ್ನಡದ ಮೂಲ ಖ್ಯಾತ ಸಂಶೋಧಕ ಶಂಬಾ ಅವರ ಊಹೆಯಂತೆ ನಿಜವಾಗಿದೆ ಎಂಬುದನ್ನು ಸಿದ್ಧಪಡಿಸಿದ್ದಾರೆ.

ಶಂಬಾ ಅವರು ಕನ್ನಡದ ಮೂಲನೆಲೆ ಗೋದಾವರಿಯ ಉತ್ತರದಲ್ಲಿ ಎಂದು ಹೇಳುತ್ತಾರೆ. ನರ್ಮದಾ ನದಿಯದಡದಲ್ಲಿದ್ದ ಕರ್ನಾಟಕ ರಾಕ್ಷಸನನ್ನು ಆರ್ಯರು

ಓಡಿಸಿದರೆಂದು ಹೇಳುವಲ್ಲಿ ಐತಿಹಾಸಿಕ ಘಟನೆಯೊಂದು ಅಡಗಿದೆ ಎಂದೂ, ಈಗಿನ ಗುಜರಾತ ಪ್ರದೇಶದಲ್ಲಿ ಹಲವಾರು ಕನ್ನಡ ಮೂಲದ ಸ್ಥಳನಾಮಗಳಿವೆ ಎಂದೂ ಅವರು ತೋರಿಸಿಕೊಟ್ಟಿದ್ದಾರೆ. ಅವರೇ ಒಂದು ಕಡೆ ಗೋದಾವರಿಯ ಆಸುಪಾಸಿನಲ್ಲಿ ಬೀಡ್ ಎಂಬ ಅಚ್ಚಕನ್ನಡ ಊರ ಹೆಸರಿರುವುದನ್ನು ಇನ್ನೊಂದೆಡೆ ಇಂದಿನ ಮಾಳವಕ್ಕೆ ಮಲಯ ಎಂಬ ದ್ರಾವಿಡ ಮೂಲದ ಹೆಸರಿರುವುದನ್ನು ಉಲ್ಲೇಖಿಸಿದ್ದಾರೆ. ಕನ್ನಡಿಗರ ಮೂಲ ನೆಲೆ ವಿಂಧ್ಯದ ದಕ್ಷಿಣ ಬದಿಯಲ್ಲಿ ಇದ್ದುದರಿಂದಲೇ ಅವರು ಅದನ್ನು ಮಲೆ, ಕಾಡು, ವಿಂಜ । ಬಿಂಜ ಎಂದೂ ಕರೆಯುತ್ತಿದ್ದರು. ಶಂಬಾ ಅವರ ಪ್ರಮೇಯ ಬರಿ ಊಹೆಯಲ್ಲ ಎನ್ನಲು ಇದೂ ಒಂದು ಹೊಸ ಆಧಾರ.(ನೇಗಿನಹಾಳ ಪ್ರಬಂಧಗಳು ಪುಟ.೩೩.)

* * *

ಪ್ರಾಚೀನ ಕರ್ನಾಟಕದ ಭಾಷೆ ಮತ್ತು ಸಾಹಿತ್ಯ ಕುರಿತು ಅಂದರೆ ಮೌರ್ಯ–ಸಾತವಾಹನ–ಗಂಗ–ಕದಂಬರ ಕಾಲದ ಸಂಸ್ಕೃತಿಯನ್ನು ಕುರಿತು ಡಾ. ನೇಗಿನಹಾಳ ತುಂಬ ಮಹತ್ವದ ದಾಖಲೆಗಳನ್ನು ಒದಗಿಸಿಕೊಟ್ಟಿದ್ದಾರೆ.

ದಕ್ಷಿಣ ದ್ರಾವಿಡದಿಂದ ಕನ್ನಡವು ಪ್ರತ್ಯೇಕಗೊಂಡು ತನ್ನ ಸ್ವತಂತ್ರ ಸ್ವರೂಪ ಪಡೆಯುವಲ್ಲಿ ಪ್ರಾದೇಶಿಕತೆಯ ಜೊತೆಗೆ ಆರ್ಯಮೂಲದ ಬೌದ್ಧ–ಜೈನ ಧರ್ಮಗಳ ಪ್ರಭಾವ ಮತ್ತು ನಂದ–ಮೌರ್ಯರ ಆಳ್ವಿಕೆಗಳು ಕೂಡ ಕಾರಣೀಭೂತವಾಗಿವೆ. ಮೌರ್ಯರು ಇಡೀ ಉತ್ತರ ಕರ್ನಾಟಕವನ್ನು ತಮ್ಮ ಆಧೀನಕ್ಕೆ ಒಳಪಡಿಸಿ ಆಡಳಿತಾತ್ಮಕವಾಗಿ ಅಷ್ಟೇ ಅಲ್ಲದೆ ಧಾರ್ಮಿಕವಾಗಿ ಕೂಡ ಪ್ರಭಾವ ಬೀರಿದರು. ಈವರೆಗೆ ಅಶೋಕ ಚಕ್ರವರ್ತಿಯ ಹದಿನಾಲ್ಕು ಶಾಸನಗಳು ಕರ್ನಾಟಕದಲ್ಲಿ ಸಿಕ್ಕಿವೆ. ಇತ್ತೀಚೆಗೆ ಸನ್ನತಿಯಲ್ಲಿ ದೊರೆತ ನಾಲ್ಕು ಅಶೋಕ ಲಿಪಿಗಳಲ್ಲಿ ಎರಡು ಓಡಿಸಾದ ಧೌಲಿ–ಜೌಗಡಾ ಹೊರತು ಇತರತ್ರ ದೊರೆಯದ ಪ್ರತ್ಯೇಕ ಪಾಠವುಳ್ಳವಾಗಿವೆ. ಎಂದರೆ ಅಶೋಕ ಈ ಭಾಗದ ಜನತೆಯ ಸಾಮಾಜಿಕ–ಧಾರ್ಮಿಕ ವಿಚಾರಗಳ ಬಗ್ಗೆ ಸಾಕಷ್ಟು ಆಸ್ಥೆ ವಹಿಸಿದ್ದನೆಂಬುದು ಅವುಗಳಿಂದ ಸ್ಪಷ್ಟವಾಗುತ್ತದೆ. ಸುವರ್ಣಗಿರಿ ಮತ್ತು ಇಸಿಲ ಎಂಬ ಆಡಳಿತ ಕೇಂದ್ರಗಳ ಮೂಲಕ ಅವನು ಕರ್ನಾಟಕದ ರಾಜಕೀಯ, ಧಾರ್ಮಿಕ ಮತ್ತು ಆಡಳಿತ ವಿಷಯಗಳನ್ನು ನಿಯಂತ್ರಿಸುತ್ತಿದ್ದನೆಂದು ತಿಳಿಯಬಹುದು. ಇದರಿಂದ ಕನ್ನಡವು ಸಾವಕಾಶವಾಗಿ ಪ್ರತ್ಯೇಕಗೊಳ್ಳತೊಡಗಿ ಕ್ರಿ.ಶ.ದ ಪ್ರಾರಂಭದ ಹೊತ್ತಿಗೆ ಎಂದರೆ ಸಾತವಾಹನರ ಆಳ್ವಿಕೆಯಲ್ಲಿ ಅದೊಂದು, ಪ್ರತ್ಯೇಕ ಹಾಗೂ ವಿಸ್ತೃತ, ಜನಪದವಾಗಿ ರೂಪಗೊಳ್ಳತೊಡಗಿತು. ಈ ಊಹೆಯನ್ನು ಸಿದ್ಧಪಡಿಸುವಲ್ಲಿ ಕರ್ನಾಟಕದಲ್ಲಿ ದೊರೆಯುವ ಪ್ರಾಕೃತ ಶಾಸನಗಳು, ಸಂಸ್ಕೃತ ಪ್ರಾಕೃತ ಕೃತಿಗಳಲ್ಲಿನ ಉಲ್ಲೇಖಗಳು ಮತ್ತು ವಿದೇಶಿ ಪ್ರವಾಸಿಗರ ಬರಹಗಳು ಆಧಾರಗಳಾಗಿವೆ. (ನೇಗಿನಹಾಳ ಪ್ರಬಂಧಗಳು ಪುಟ.೩೪–೩೫.)

ಇನ್ನು ಮೌರ್ಯರ ತರುವಾಯ ಕರ್ನಾಟಕದ ಭಾಗಗಳಲ್ಲಿ ಅಧಿಕಾರಕ್ಕೆ ಬಂದ ಸಾತವಾಹನರು ಹಿಂದೂ ಮತ್ತು ಬೌದ್ಧ ಮತಗಳಿಗೆ ಆಶ್ರಯವೀಯುವುದರ ಜೊತೆಗೆ ಪ್ರಾಕೃತವನ್ನೇ ಅವರು ತಮ್ಮ ರಾಜಭಾಷೆ ಮಾಡಿಕೊಂಡರು; ಅವರ ಅನುವರ್ತಿಗಳಾದ ಚುಟುಗಳು ಅದನ್ನೇ ಮುಂದುವರೆಸಿದರು. ತರುವಾಯ ಬಂದ ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ ಮನೆತನಗಳವರೂ ಸೇಂದ್ರಕ, ಸಾಂತರ, ಸೇನವಾರ, ಪನ್ನಾಟ, ಬಾಣ ಮೊದಲಾದ ಸಾಮಂತ ವರ್ಗದವರೂ ಪ್ರಾಕೃತದಿಂದ ಬದಲಾಯಿಸಿ ಕನ್ನಡ ಮತ್ತು ಸಂಸ್ಕೃತಗಳನ್ನು ತಮ್ಮ ಆಡಳಿತದಲ್ಲಿ ಬಳಸಿದರು. ಮೊದಮೊದಲು ಕದಂಬರು ಪ್ರಾಕೃತವನ್ನು ಬಳಸಿದರೂ ತರುವಾಯ ಅದನ್ನು ದೂರಮಾಡಿ ಕನ್ನಡ ಮತ್ತು ಸಂಸ್ಕೃತಗಳನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು. ಅವರ ಕಾಲಾವಧಿಯಲ್ಲಿ ಕನಿಷ್ಠ ನಾಲ್ಕು ಕನ್ನಡ ಶಾಸನಗಳು ಹುಟ್ಟಿವೆ. ಕಾಕುಸ್ಥವರ್ಮನ ಹಲ್ಮಿಡಿಶಾಸನ, ರವಿರ್ಮನ ಕೆಲಗುಂದ್ಲಿ ಶಾಸನ, ಅಜವರ್ಮನ (ಇಮ್ಮಡಿ ಕೃಷ್ಣವರ್ಮನ ಮಗ)ನ ಕಂಪ್ಲಿಶಾಸನ ಮತ್ತು ಭೋಗಿವರ್ಮನ ತಗರೆಯ ತಾಮ್ರಪಟದ ಅಂತ್ಯದ ಅಯ್ದು ಸಾಲುಗಳ ಬರಹ. ಇವು ಕನ್ನಡದಲ್ಲಿವೆ. ಕನ್ನಡವನ್ನು ದ್ವಿತೀಯ ರಾಜ್ಯಭಾಷೆಯಾಗಿ ಬಳಕೆಗೆ ತಂದದ್ದು ಕದಂಬ ಮನೆತನದ ಹೆಮ್ಮೆಯ ವಿಷಯ, ಹೀಗೆ ಕುಂತಲೇಶ್ವರರೆಂದು ಅವರನ್ನು ಕರೆದುದನ್ನು ಸಾರ್ಥಕಗೊಳಿಸಿದ ಮನೆತನ ಕದಂಬರದು. ಇವರು ಅಚ್ಚ ಕನ್ನಡಿಗರಾಗಿದ್ದು ಇದೇ ನೆಲದಲ್ಲಿ ಹುಟ್ಟಿ ಬೆಳೆದರು ತರುವಾಯ ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರು ಕನ್ನಡದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದರು. ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಪ್ರಯೋಗಿಸಿದರು. ರಾಷ್ಟ್ರಕೂಟರು ತಾಮ್ರಪಟಕ್ಕೂ ಕನ್ನಡವನ್ನು ಬಳಸಿದ್ದೊಂದು ವಿಶೇಷ ಸಂಗತಿಯೇ ಸೈ. ಗುಜರಾತದಲ್ಲಿ ದೊರೆತ ತಾಮ್ರ ಪಟಗಳಲ್ಲಿ ರಾಷ್ಟ್ರಕೂಟರು ಅಂದಿನ ಕನ್ನಡ ಲಿಪಿಯಲ್ಲಿ ತಮ್ಮ ಅಂಕಿತ ಹಾಕುತ್ತಿದ್ದ ಸಂಗತಿಯನ್ನು ಡಾ. ಅಳ್ತೇಕರ ಎತ್ತಿತೋರಿಸಿದ್ದಾರೆ.

ಹೀಗೆ ರಾಜಕೀಯವು ಕನ್ನಡ ಭಾಷೆ, ಕರ್ನಾಟಕತ್ವದ ಬೆಳೆವಣಿಗೆಗೆ ಪ್ರಧಾನ ಶಕ್ತಿಯಾಗಿ ವರ್ತಿಸಿರುವಂತೆ ಧರ್ಮಗಳು ಈ ದಿಸೆಯಲ್ಲಿ ತಮ್ಮ ಅಚ್ಚಳಿಯದ ಪ್ರಭಾವ ಬೀರಿವೆ ಎಂಬುದನ್ನು ಈಗಾಗಲೇ ಹೇಳಿದೆ. ಮೌರ್ಯ–ಸಾತವಾನಹರ ಕಾಲದ ಬೌದ್ಧಧರ್ಮ ಕರ್ನಾಟಕದಲ್ಲಿ ಹಲವು ನೆಲೆಗಳನ್ನು ಸ್ಥಾಪಿಸಿತ್ತು. ಅವುಗಳಲ್ಲಿ ಸನ್ನತಿ ತುಂಬ ಮುಖ್ಯವಾದುದು. ಸನ್ನತಿ ಮತ್ತು ಅದರ ಪರಿಸರದಲ್ಲಿ ಈಗ ಸು.೭೭ರಷ್ಟು ಪ್ರಾಕೃತ ಶಾಸನಗಳು ಸಿಕ್ಕಿವೆ. ಬೌದ್ಧರಿಗಿಂತ ಜೈನರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹಲವಾರು ರಾಜಮನೆತನಗಳನ್ನು ಮತಾಂತರಸಿದರು. ಹಾಗೂ ಕೊಪ್ಪಳ, ಹಲಸಿಗೆ, ಬನವಾಸಿ, ಶ್ರವಣಬೆಳ್ಗೊಳ, ಲಕ್ಷ್ಮೇಶ್ವರ, ಬಸ್ತಿಪೂರ

ಮೊದಲಾದಡೆಗಳಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿದರು. ಹಲವು ಜನ ಜೈನಾಚಾರ್ಯರು ಕನ್ನಡ, ಪ್ರಾಕೃತ ಮತ್ತು ಸಂಸ್ಕೃತಗಳಲ್ಲಿ ಕೃತಿ ರಚನೆ ಮಾಡಿದರು. ಇದರಿಂದಾಗಿ ಕನ್ನಡ ಭಾಷೆ-ಸಾಹಿತ್ಯಗಳು ವಿಕಾಸಗೊಳ್ಳಲು ಅಪಾರ ಸಹಾಯವುಂಟಾಯಿತು. ಇಂತು ನಮ್ಮ ನಾಡಿಗೆ ಮಹತ್ತರವಾದ ಸಂಸ್ಕೃತಿ ಸಂಪದವನ್ನು ತಂದ ಹಿರಿಮೆ ಪ್ರಾಕೃತದ್ದೆ. ಈ ದೃಷ್ಟಿಯಿಂದ ಪ್ರಾಕೃತ ಸಾಹಿತ್ಯ ಮತ್ತು ಶಾಸನಗಳನ್ನು ಅಧ್ಯಯನ ಮಾಡಬೇಕಾದುದು ಬಹಳಷ್ಟು ಇದೆ. ಕರ್ನಾಟಕತ್ವದ ವಿಕಾಸದಲ್ಲಿ ಪ್ರಾಕೃತವು ನೀಡಿದ ಕೊಡುಗೆಯನ್ನು ನಿಖರವಾಗಿ ಗುರುತಿಸುವಲ್ಲಿ ನಮ್ಮ ವಿದ್ವಾಂಸರು ಇನ್ನೂ ಕಾರ್ಯ ಪ್ರವರ್ತಗೊಳ್ಳಬೇಕಿದೆ.

ತರುವಾಯದ ಮಾಧವಪುರ ವಡಗಾವಿ (ಬೆಳಗಾವಿ) ಶಾಸನದಲ್ಲಿ ಕಂಡು ಬರುವ '(ಸ)ಣಾಟಪತಿಸ' ಎಂಬ ಪ್ರಯೋಗ ಕಂಡು ಬರುತ್ತದೆ. ಇಲ್ಲಿ 'ಣಾಟಪತಿ' ಎಂಬ ಪ್ರಾತಿಪದಿಕಕ್ಕೆ 'ಸ' ಎಂಬ ಷಷ್ಠಿ ವಿಭಕ್ತಿ ಪ್ರತ್ಯಯ ಸೇರಿದೆ. ಪ್ರಾಕೃತ ಶಾಸನಗಳಲ್ಲಿ ನಕಾರಕ್ಕೆ ಬದಲು ಣಕಾರ ಬರುವುದು ಅಪರೂಪವೇನಲ್ಲ. ಆದುದರಿಂದ ಇದು 'ನಾಟಪತಿ' ಎಂಬ ಅರಿಸಮಾಸ. 'ನಾಟ' ಎಂದರೆ 'ನಾಡು' ಎಂಬುದರ ಪ್ರಾಚೀನ ರೂಪ. ಪುನ್ನಾಟ, ಕರ್ನಾಟ ಎಂಬ ರೂಪಗಳಲ್ಲಿಯೂ 'ನಾಟ' ಎಂಬುದು ಉತ್ತರಪದವಾಗಿರುವುದನ್ನು ನೋಡಬಹುದು. ಅದುದರಿಂದ ಕನ್ನಡ ಭಾಷೆಯ ನಿರ್ದಿಷ್ಟಪದವೆಂದು ಇದನ್ನು ಸ್ವೀಕರಿಸಬಹುದು. (ನೇಗಿನಹಾಳ ಪ್ರಬಂಧಗಳು ಪುಟ.೩೮-೩೯,)

ಹೀಗೆ ಸ್ಪಷ್ಟವಾದ ಇತಿಹಾಸವನ್ನು ಅವಲೋಕಿಸುವ ಡಾ. ನೇಗಿನಹಾಳ ಅವರು ಕ್ರಿ.ಶ. ೨ನೇ ಶತಮಾನದಲ್ಲಿಯೇ ಕರ್ನಾಟಕದ ವಾಣಿಜ್ಯ-ವ್ಯಾಪಾರ ಸಂಬಂಧಗಳು ಪ್ರಾಚೀನ ಗ್ರೀಸಿನೊಂದಿಗೆ ಸಂಬಂಧಪಡೆದಿದ್ದವು ಎಂಬುದನ್ನು ಶೋಧಿಸುತ್ತಾರೆ. ಸಾಗರೋತ್ತರ ವಾಣಿಜ್ಯ ವ್ಯವಹಾರ ಕಾರಣವಾಗಿಯೂ ಪ್ರಾಚೀನ ಕನ್ನಡ ಭಾಷೆ ಬಳಕೆಯಲ್ಲಿತ್ತು ಎಂಬುದು ಅವರ ಸಂಶೋಧನೆಯಲ್ಲಿ ಇನ್ನಷ್ಟು ಸಾಕ್ಷ್ಯಾಧಾರಗಳನ್ನು ಒದಗಿಸಿಕೊಟ್ಟಿವೆ.

ಕ್ರಿ.ಶ. ಸು. ಒಂದನೆಯ ಶತಮಾನದಿಂದಲೂ ಕನ್ನಡ ಸಾಹಿತ್ಯದ ನಿರಂತರ ಬೆಳವಣಿಗೆಯಾಗುತ್ತಲೇ ಬಂದಿದೆ ಎಂಬುದನ್ನು ಶಾಸನಾಧಾರಗಳಿಂದ ಡಾ. ನೇಗಿನಹಾಳ ಅವರು ಹೀಗೆ ವಿವರಿಸುತ್ತಾರೆ:

'ಕ್ರಿ.ಶ. ಸುಮಾರು ಒಂದನೆಯ ಶತಮಾನದಲ್ಲಿದ್ದ ಗುಣಾಢ್ಯ ಪೈಶಾಚಿ ಪ್ರಾಕೃತದಲ್ಲಿ ಬೃಹತ್ಕಥೆ ಅಥವಾ ವಡ್ಡಕತೆಯನ್ನು ರಚಿಸಿದ. ವ್ಯಾಸ ವಾಲ್ಮೀಕಿಗಳಂತೆ ಅಸಾಮಾನ್ಯ ಪ್ರತಿಭೆಯ ಕವಿಯೀತ. ಮೂಲ ಬೃಹತ್ಕಥೆ ಕಳೆದು ಹೋಗಿದೆ. ಸಾತವಾಹನರೊಡನೆ

ಇತನಿಗಿದ್ದ ಸಂಬಂಧವನ್ನು ಬಹುಶಃ ಒಪ್ಪಿಕೊಳ್ಳಲಾಗಿದೆ. ಸಾತವಾಹನ ಸಾಮ್ರಾಜ್ಯದಲ್ಲಿ ಅಂದಿನ ಕರ್ನಾಟಕದ ಬಹುಭಾಗ ಸಮಾವಿಷ್ಟವಾಗಿದ್ದುದರಿಂದ ಬೃಹತ್ಕಥೆಯ ಪ್ರಭಾವ ಕರ್ನಾಟಕದ ಜನತೆಯ ಮೇಲೆ ಅಂದು ತೀವ್ರ ಪ್ರಭಾವ ಬೀರಿತು. ೬ನೆಯ ಶತಮಾನದಲ್ಲಿದ್ದ ಗಂಗದೊರೆ ದುರ್ವಿನೀತ ಅದನ್ನು ಸಂಸ್ಕೃತಕ್ಕೆ ಅನುವಾದಿಸಿದ್ದನೆಂದು ಗಂಗರ ಉತ್ತನೂರು ಮೊದಲಾದ ತಾಮ್ರ ಪಟಗಳಲ್ಲಿ ಹೇಳಿದೆ.

ದುರ್ವಿನೀತ ಕನ್ನಡದಲ್ಲಿ ಗದ್ಯ ಕೃತಿ ರಚಿಸಿದ ಪ್ರಸಿದ್ಧ ಲೇಖಕ. ಈತ ಕಿರಾತಾರ್ಜುನೀಯ ಟೀಕೆ, ಶಬ್ದಾವತಾರ ವ್ಯಾಕರಣ ಮತ್ತು ವಡ್ಡ ಕಥೆಗಳನ್ನು ಬರೆದ ನೆಂಬುದನ್ನು ಮೇಲೆ ತಿಳಿಸಿದ ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ. ಬಹುಶಃ ವಡ್ಡಕಥೆಯನ್ನು ಆತ ಸಂಸ್ಕೃತ (ದೇವ ಭಾರತೀನಿಬದ್ಧ)ದಲ್ಲಿ ಅನುವಾದಿಸಿದಂತೆ ಕನ್ನಡದಲ್ಲೂ ಅನುವಾದಿಸಿರಬಹುದು.'( ನೇಗಿನಹಾಳ ಪ್ರಬಂಧಗಳು ಪುಟ೪೭)

ಗುಣಾಢ್ಯ ತರುವಾಯ ಹೆಸರಿಸಬೇಕಾದ ಇನ್ನೊಬ್ಬ ಪ್ರಸಿದ್ಧ ಜೈನ ಲೇಖಕನೆಂದರೆ ಸಿವಜ್ಜ ಅಥವಾ ಶಿವಾರ್ಯ. ಯಾಪನೀಯನಾದ ಈತ ಗಿರಿ ನಗರದಲ್ಲಿ ಜಿನ ನಂದಿ ಗಣಿ, ಸರ್ವ ಗುಪ್ತ ಗಣಿ ಮತ್ತು ಆರ್ಯ ಮಿತ್ರನಂದಿ ಇವರ ಪಾದ ಮೂಲದಲ್ಲಿ ಮೂಲ ಸೂತ್ರರ್ಥಗಳನ್ನು ಓದಿ ಕಲಿತು ಮೂಲಾಧಾರನೆ ಅಥವಾ ಭಗವತೀ ಆರಾಧನಾ ಎಂಬ ಜೈನ ಆಚಾರ ಸಂಹಿತೆಯ ಒಂದು ದೊಡ್ಡ ಭಾಗವನ್ನು ಶೌರಸೇನಿಯಲ್ಲಿ ಸೂತ್ರೀಕರಿಸಿದ. ಯಾಪನೀಯನಾದುದರಿಂದ ಕರ್ನಾಟಕದ ಸಂಬಂಧ ಈತನಿಗೆ ಇದ್ದುದು ಸಹಜ. ಯಾಪನೀಯ ಜೈನಿ ಪಂಥ ಕರ್ನಾಟಕ ಮೂಲದ್ದು. ಭಗವತೀ ಆರಾಧನೆಯ ಮೇಲೆ ಹುಟ್ಟಿದ ಟೀಕಾಗ್ರಂಥಗಳ ಪರಂಪರೆಯೊಂದು ಕನ್ನಡದಲ್ಲಿಯೇ ಬೆಳೆದು ಬಂದಿದೆ. ಈಗನಮಗೆ ತಿಳಿದು ಬಂದಿರುವಂತೆ ಭ್ರಾಜಿಷ್ಣುಎಂಬವನು 'ಆರಾಧನಾ ಕರ್ನಾಟಟೀಕೆ' ಎಂಬ ಹೆಸರಿನ ಕಥಾ ರೂಪದ ಟೀಕೆಯನ್ನು ಕ್ರಿ.ಶ. ಹತ್ತನೆಯ ಶತಮಾನ ಹಿಂದೆ, ಬಹುಶಃ ಒಂಬತ್ತನೆಯ ಶತಮಾನದಲ್ಲಿ ರಚಿಸಿದ. ಇದು ಇಂದು ನಮಗೆ ಉಪಲಬ್ಧವಾದ 'ವಡ್ಡಾರಾಧನೆ' ಎಂಬ ಕೃತಿಯೇ ಎಂದು. ಡಾ. ಎಂ.ಎಂ. ಕಲಬುರ್ಗಿ ಮತ್ತು ಡಾ. ಹಂ ಪಂ. ನಾಗರಾಜಯ್ಯನವರು ಹೇಳುವರಾದರೂ ಇವೆರಡೂ ಒಂದೇ ಎಂಬ ಸಂಗತಿಯನ್ನು ಒಪ್ಪಲು ಹೆಚ್ಚಿನ ಆಧಾರಗಳು ಬೇಕು. ವಡ್ಡಾರಾಧನೆಯನ್ನು ಕಥಾರೂಪದ ಟೀಕೆಯನ್ನಾಗಿ ಶಿವಕೋಟಿಯೆಂಬವನು ಕನ್ನಡದಲ್ಲಿ ರಚಿಸಿದನೆಂದು ಡಾ. 'ದೊಲನ'ರು ಹೇಳಿದ್ದಾರೆ. ೧೧ನೆಯ ಶತಮಾನದ ಶಾಂತಿನಾಥ ಕವಿಯ ಸುಕುಮಾರ ಚರಿತೆಯು ಮೂಲತಃ ಒಂದು ಆರಾಧಾನಾ ಕಥೆಯೇ ಸುಮಾರು

ಇದೇ ಅವಧಿಯ ರತ್ನ ಕರಂಡಕದ ಕಥೆಗಳು ಆರಾಧನಾ ಕಥೆಗಳ ಪ್ರಭಾವದಿಂದಲೇ ಕನ್ನಡದಲ್ಲಿ ಹುಟ್ಟಿದ ಇನ್ನೊಂದು ಕಥಾ ಸಂಗ್ರಹ. (ಪುಟ.೪೮)

ಡಾ. ನೇಗಿನಹಾಳ ಅವರು ಹೀಗೆ ಕನ್ನಡ ಸಾಹಿತ್ಯದ ಬೇರುಗಳನ್ನು ಹುಡುಕಿ ತೆಗೆಯುವ ಕಾರ್ಯ ಮಾಡಿದ್ದಾರೆ. ಕೊನೆಯಲ್ಲಿ ಅವರು ಹೇಳುವಂತೆ :

೫ನೆಯ ಶತಮಾನದಿಂದ ೯ನೆಯ ಶತಮಾನದ (ಕ್ರಿ.ಶ.೮೫೦ರ) ಅವಧಿಯ ವರೆಗೆ ಸು. ೬೪ ಕನ್ನಡ ಪದ್ಯಗಳು ಕಂಡು ಬಂದಿವೆ. ಇವುಗಲಲ್ಲಿ ನಾನಾ ರೀತಿಯ ಪ್ರಾಸಗಳು, ಸಂಸ್ಕೃತದ ಚಂಪಕಮಾಲೆ, ಉತ್ಪಲಮಾಲೆ ಇತ್ಯಾದಿ ಆರು ಖ್ಯಾತ ಕರ್ನಾಟಕಗಳು, ಕನಕಾಬ್ಜಿನಿ ಮಲ್ಲಿಮಾಮಾಲೆ, ರಥೋದ್ಧತ ವಂಶಸ್ಥ, ಶ್ಲೋಕಗಳು, ಆರ್ಯಾಗೀತಿಯಿಂದ ಬೆಳೆದು ಬಂದ ಕಂದ ಪದ್ಯಗಳು, ಅಚ್ಚಗನ್ನಡದ ತ್ರಿಪದಿ, ಪಿರಿಯಕ್ಕರ ಮತ್ತು ೯ ಗಣ ಸಂಖ್ಯೆಯುಳ್ಳ ಅಂಶಗಣದ ಪದ್ಯ ಕ್ರಿ.ಶ. ೭೫೮ ರ ಗುಂಡ್ಲಹಳ್ಳಿ ಶಾಸನದಲ್ಲಿ ಮಿಶ್ರ ಛಂದಸ್ಸಿನ ಲಯ ವೃತ್ತ ಹಾಗೂ ಚಿಕ್ಕಬಳ್ಳಾಪುರ ಶಾಸನ (ಕ್ರಿ.ಶ. ೮೧೦) ದಲ್ಲಿ ಸಂಕೀರ್ಣ ಯೋಜನೆಯ ಎರಡು ಸಮಸ್ಕೃತ ಮಿಶ್ರ ಕನ್ನಡದಲ್ಲಿರುವ ಮಣಿ ಪ್ರವಾಳ ಶೈಲಿಯ ಪದ್ಯಗಳಯ ಈ ಅವಧಿಯಲ್ಲಿ ಕಂಡು ಬಂದಿವೆ. ತಾಳಗುಂದ ಕುಬ್ಜನ ಕದಂಬ ಶಾಸನದಲ್ಲೂ ಅಯ್ ಹೊಳೆಯ ರವಿಕೀರ್ತಿ ಶಾಸನದಲ್ಲೂ ಮೇಲೆ ನೋಡಿದ ಸಂಸ್ಕೃತ ವೃತ್ತಗಳೆ ಇವೆ. ಕುಬ್ಜ, ರವಿಕೀರ್ತಿಗಳ ತರುವಾಯ ಕ್ರಿ.ಶ. ಸು೭೬೦ ರಲ್ಲಿದ್ದ ದಿವ್ಯಭಾಷಾಕಲನ್' ಎಂಬ ಕನ್ನಡ ಕವಿ ಗುಂಡ್ಲಹಳ್ಳಿ ಶಾಸನದಲ್ಲಿ ತೋರಿ ಬಂದಿದ್ದಾನೆ. ಈ ಕಾಲಾವಧಿಯಲ್ಲಿಯೇ ಸ್ವತಃ ಕರ್ನಾಟರಾಜ ಪ್ರಿಯೆಯಾಗಿದ್ದ ವಿಜ್ಜಕೆ (ವಿಜಯಾಂಬಿಕೆ) ಸಂಸ್ಕೃತದಲ್ಲಿ 'ಕೌಮುದೀ ಮಹೋತ್ಸ" ವ ಎಂಬ ನಾಟಕ ರಚಿಸಿದ್ದಾಳೆ. ಗಂಗ, ಕದಂಬ, ಬಾದಾಮಿ ಚಾಲುಕ್ಯ ಮತ್ತು ರಾಷ್ಟಕೂಟರು ಉದಾರಾಶ್ರಯ ವಿತ್ತುದರಿಂದ ಕನ್ನಡ ಭಾಷೆ, ಸಾಹಿತ್ಯ ಸಮಸ್ಕೃತಗಳು ಅನೂಚಾನವಾಗಿ ಬೆಳೆದು ಬಂದವು. ಈ ಮನೆತನಗಳ ಪೈಕಿ ಬನವಾಸಿ ಕದಂಬರ ಆಶ್ರಯದಲ್ಲಿ ಕನ್ನಡ ಕಾವ್ಯ ಹುಟ್ಟಿದ ಬಗ್ಗೆ ಮಾತ್ರ ನೇರ ಪುರಾವೆಯಿಲ್ಲ. ಇತರೆಲ್ಲ ಮನೆತನಗಳ ಆಶ್ರಯದಲ್ಲಿ ಒಂದಿಲ್ಲೊಂದು ಕೃತಿ ಅಥವಾ ಪದ್ಯ ಶಾಸನ ರಚನೆಗೊಂಡಿದೆ. ಈ ಅವಧಿಯ ಕವಿ ಕೃತಿಗಳು ನಮ್ಮ ವರೆಗೆ ಉಳಿದು ಬರಲಿಲ್ಲ ಎಂಬುದು ಡಾ. ನೇಗಿನಹಾಳ ಅವರ ಕೊರಗಾಗಿತ್ತು.

■■

# ಕಟ್ಟಿಕೊಟ್ಟ ಬೆಳಗಾವಿ ಇತಿಹಾಸ

ಬೆಳಗಾವಿ ಹಲವು ಕಾರಣಗಳಿಂದ ಮೇಲಿಂದ ಮೇಲೆ ಚರ್ಚೆಗೆ ಬರುವ ನಗರವಾಗಿದೆ. ಮಹಾರಾಷ್ಟ್ರದವರು ಬೆಳಗಾವಿ ನಮ್ಮ ಪ್ರದೇಶವೆಂದು ಸ್ವಾತಂತ್ರ್ಯೋತ್ತರ ಕಾಲದಿಂದಲೂ ಪ್ರಲಾಪಿಸುತ್ತಲೇ ಬಂದಿದ್ದಾರೆ. ಈ ಕಾರಣವಾಗಿ ಬೆಳಗಾವಿ ಪ್ರದೇಶದ ಇತಿಹಾಸವನ್ನು ಅವಲೋಕಿಸಿದರೆ ಅದು ಕನ್ನಡದ ಪ್ರದೇಶವಾಗಿತ್ತು ಎಂಬುದು ನಿಚ್ಚಳವಾಗುತ್ತದೆ. ಈ ನಿಟ್ಟಿನಲ್ಲಿ ಅತ್ಯಂತ ಆಸಕ್ತಿಯಿಂದ ತೊಡಗಿಸಿಕೊಂಡವರು ಡಾ. ಎಂ.ಬಿ. ನೇಗಿನಹಾಳ ಅವರು.

ಯಾರು ತಮ್ಮ ಗತ ಇತಿಹಾಸವನ್ನು ಅರಿಯಲಾರರೋ ಅವರು ವರ್ತಮಾನದ ಇತಿಹಾಸವನ್ನು ನಿರ್ಮಿಸಲಾರರು ಎಂಬ ಉಕ್ತಿಯಂತೆ, ಡಾ. ನೇಗಿನಹಾಳ ಅವರು ತಮ್ಮ ಸಮಗ್ರ ಸಂಶೋಧನೆ–ಅಧ್ಯಯನ–ಅಧ್ಯಾಪನಗಳ ಜೊತೆ ಜೊತೆಯಲ್ಲಿಯೇ ತಮ್ಮ ಭಾಗದ ಚರಿತ್ರೆಯನ್ನು ಶೋಧಿಸುವ ಪ್ರಯತ್ನ ಮಾಡಿದ್ದು ಗಮನಾರ್ಹವಾದುದು.

ಬೆಳಗಾವಿ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವುಳ್ಳ ಕರ್ನಾಟಕದ ಕೆಲವೇ ನಗರಗಳಲ್ಲಿ ಒಂದು. ಈಗ ಬೆಂಗಳೂರು ಮತ್ತು ಹುಬ್ಬಳ್ಳಿಗಳ ತರುವಾಯ ರಾಜ್ಯದ ಮೂರನೆಯ ದೈತ್ಯ ನಗರ. ಇದರ ಬೆಳವಣಿಗೆ ಶತಶತಮಾನಗಳಿಂದ ಹೆಚ್ಚುತ್ತಲೇ ಬಂದಿದೆ. ಒಂದು ಶತಮಾನ ಮುಂಚೆ ವಡಗಾಂವಿ, ಶಹಾಪೂರ ಮತ್ತು ಬೆಳಗಾವಿಗಳು ಪ್ರತ್ಯೇಕ ಪಟ್ಟಣಗಳೆನಿಸಿದ್ದರೆ ಇಂದು ಈ ಮೂರು ಪಟ್ಟಣಗಳು ಏಕೀಭವಿಸಿ ಒಂದು ಮಹಾನಗರವಾಗಿ ರೂಪುಗೊಂಡಿವೆ. ಈಗಲೂ ಈ ನಗರ ಗರ್ಭದಲ್ಲಿ ಕನಿಷ್ಠ ಎಂಟು ಹರಿಜನ ಕೇರಿಗಳನ್ನು ಗುರುತಿಸಬಹುದು. ಚವಾಟಗಲ್ಲಿ, ಕಂಗ್ರಾಳಿ, ಗೋಂದಳಿಗಲ್ಲಿ, ಕೋನವಾಳ ಗಲ್ಲಿ, ಭಾಂಧೂರ ಗಲ್ಲಿ, ಹೊಸೂರ ಅಥವಾ ಹೊಸಟ್ಟಿ, ಖಾಸಭಾಗ, ಶಹಾಪೂರ (ಸರಾಫ–ಆಚಾರ ಗಲ್ಲಿಗಳಿಗೆ ಹೊಂದಿಕೊಂಡಿರುವ ಪೂರ್ವಭಾಗ) ಮತ್ತು ವಡಗಾವಿ–ಇವುಗಳಲ್ಲಿ ಪ್ರತ್ಯೇಕವಾಗಿ ಒಂದೊಂದು ದಲಿತರ ಕೇರಿಗಳು ಈಗಲೂ ಅಸ್ತಿತ್ವದಲ್ಲಿವೆ ಎಂದರೆ ಕನಿಷ್ಠ ಎಂಟು ಊರುಗಳಾದರೂ ಇಂದಿನ ಬೆಳಗಾವಿಯಲ್ಲಿ ಸಮಾವೇಶಗೊಂಡಿರುವುದು ಖಚಿತವಾಗುತ್ತದೆ. ಇಂದಿನ ಹೊಸ ಊರು ಕಣಬರಗಿ, ಕುಡಚಿ, ಹಳೆಬೆಳೆಗಾವಿ, ವೈತಾಕವಾಡಿ, ಅನಿಗೋಳ, ಮಚ್ಛೆ ಮಜಗಾವ, ನಾನಾವಾಡಿ, ಸಾವಗಾಂವ,

ಗಣೇಶಪುರ, ಹಿಂಡಲಗಿ ಎರಡು ಕಂಗ್ರಾಳಿಗಳು ಯಮುನಾಪುರ, ಅಲತಗೆ, ಕಾಕತಿ, ಈ ಎಲ್ಲ ಹಳ್ಳಿಗಳನ್ನು ತನ್ನ ಮಹಾಗರ್ಭದಲ್ಲಿ ಸೇರಿಸಿಕೊಂಡಿದೆ. ಈಗ ಗುರುತಿಸಬಹುದಾದ ಮೂಲ ಬೆಳಗಾವಿ ನಗರವೆಂದರೆ ಈಗಿರುವ ಶನಿದೇವರ ಗುಡಿಯಿಂದ ಉತ್ತರ ವೆಂಕಟರಮಣನ ಗುಡಿ, ಪೂರ್ವದ ಮಠಬೀದಿಯ ತುದಿಯಲ್ಲಿರುವ ವೀರಶೈವ ಮಠದಿಂದ ಪಶ್ಚಿಮದ ಹನುಮಂತದೇವರ ಗುಡಿ (ಮಾರುತಿ ಬೀದಿಯ ಪಶ್ಚಿಮ ತುದಿ) ವರೆಗಿನ ಪ್ರದೇಶ ಮಾತ್ರ. ಈಗಲೂ ಈ ಪ್ರದೇಶ ಪ್ರತಿಶತ ೮೦ ರಷ್ಟು ಕನ್ನಡಿಗರಿಂದಲೇ ತುಂಬಿರುವುದನ್ನು ಯಾರಾದರೂ ನೋಡಬಹುದು.

ಹೀಗೆ ಬೆಳೆದ ಬೆಳಗಾವಿ ಯಾವ ಯಾವ ಅರಸರ ಸುಪರ್ದಿಗೆ ಒಳಪಟ್ಟಿತು. ಅದು ಕನ್ನಡಿಗರಿಂದಲೇ ಆಳಿಸಿಕೊಂಡ ಪ್ರದೇಶವೆಂಬುದನ್ನು ಡಾ. ನೇಗಿನಹಾಳ ಹೀಗೆ ಹೇಳುತ್ತಾರೆ:

'ತರುವಾಯದಲ್ಲಿ ಕಲ್ಯಾಣ ಚಾಳುಕ್ಯರು, ರಟ್ಟರು, ಗೋವೆಯ ಕದಂಬರು, ದೇವಗಿರಿಯ ಯಾದವರು, ವಿಜಯನಗರದವರು ಬೆಳಗಾವಿಯನ್ನು ರಕ್ಷಿಸಿ ಅದನ್ನು ಬೆಳೆಸುತ್ತ ಬಂದಿದ್ದಾರೆ. ಕ್ರಿ. ಶ.೧೪೭೨-೭೩ ರಲ್ಲಿ ಬೆಳಗಾವಿಯ ಕೋಟೆ ವಿಜಯನಗರದವರ ಕೈತಪ್ಪಿ ಬಹಮನಿ ಮತ್ತು ತರುವಾಯ ವಿಜಾಪುರದವರ ಕೈ ಸೇರಿತು. ಪ್ರಸಿದ್ಧ ಬಹಮನಿ ಮಂತ್ರಿ ಮಹಮ್ಮದ ಗವಾನನ ನೇತೃತ್ವದಲ್ಲಿ ಬಹಮನಿ ಸೈನ್ಯ ಬೆಳಗಾವಿ ಕೋಟೆಯನ್ನು ವಶಪಡಿಕೊಂಡಿತು. ಇದಲ್ಲದೆ ಮಹಮ್ಮದ ತಘಲಖ್, ಆದಿಲಶಾಹಿಗಳು ಶಿವಾಜಿ ಮತ್ತು ಪೇಶ್ವೆಗಳು ಬ್ರಿಟಿಶರು, ಹೀಗೆ ಒಬ್ಬರಾದ ಮೇಲೆ ಒಬ್ಬರಂತೆ ಬೆಳಗಾವಿಯ ಮೇಲೆ ದಾಳಿ ಮಾಡಿ ಲೂಟಿ ಮಾಡುತ್ತ ವಶಪಡಿಸಿಕೋಂಡು ತಮ್ಮ ಆಡಳಿತ ನಡೆಸುತ್ತ ಬಂದರು. ಬೆಳಗಾವಿಯ ಇತಿಹಾಸದಲ್ಲಿ ಅಸದಖಾನನೆಂಬ ವಿಜಾಪೂರ ಸರದಾರನ ಹೆಸರು ಎತ್ತಿ ಹೇಳುವಂಥದು. ಈಗ ಕೋಟೆಯಲ್ಲಿ ಕಟ್ಟಿಸಿರುವ ಸಫಾಮಸೀದೆ ಮತ್ತು ದಂಡಿನ ಪ್ರದೇಶದಲ್ಲಿರುವ ಈಗಿನ ಗೋರಿಗಳು ಉಲ್ಲೇಖನೀಯವಾಗಿವೆ. ಬೆಳಗಾವಿಗೆ ಹಿಂದಿನ ಮುಸಲ್ಮಾನರು ಮುಸ್ತಫಾಬಾದ ಎಂದೂ ದಿಲ್ಲಿಯ ಮೊಘಲರು ಗೆದ್ದ ಮೇಲೆ ಆಜಂನಗರವೆಂದೂ ಹೆಸರಿಟ್ಟರೆಂದು ತಿಳಿಯುತ್ತದೆ. ಆದರೆ ಆ ಹೆಸರುಗಳು ನಿಲ್ಲದೆ ಬೆಳಗಾವಿ ಎಂಬ ಹೆಸರು ಸುಮಾರು ಎರಡು ಸಾವಿರ ವರ್ಷಗಳವರೆಗೆ ಅನೂಚಾನವಾಗಿ ಉಳಿದು ಬಂದಿದ್ದು ನಗರ ಕೂಡ ಕಾಲನ ದಾಳಿಯನ್ನು ಸೈರಿಸಿಯೂ ಕುಂದಿಲ್ಲದೆ ತನ್ನ ಏಳಿಗೆಯನ್ನು ಮುಂದುವರಿಸಿಕೊಂಡು ಬಂದಿದೆ. ಇಂದು ರಾಜ್ಯದ ಮೂರನೆಯ ಮಹಾನಗರವಾಗಿದೆ.(ಪುಟ,೫೫-೫೬)

* * *

ಬೆಳಗಾವಿ ಪ್ರದೇಶವು ಪ್ರಾಚೀನವಾಗಿರುವಂತೆ ಪ್ರಾಚೀನ ಬೌದ್ಧಕ್ಷೇತ್ರಕ್ಕೂ ನೆಲೆಯಾಗಿದೆ ಎಂಬುದನ್ನು ಮೊಟ್ಟಮೊದಲ ಬಾರಿಗೆ ಶೋಧಿಸಿದವರು ಡಾ. ನೇಗಿನಹಾಳ ಅವರು.

ಡಾ. ನೇಗಿನಹಾಳ ಅವರಿಗೆ ಬೆಳಗಾವಿ ಜಿಲ್ಲೆಯ ಬಗೆಗೆ ವಿಶೇಷ ಅಭಿಮಾನ. ಇವುಗಳ ಬಗೆಗೆ ಸಾಕಷ್ಟು ಶ್ರಮಿಸಿ ವಿಷಯ ಸಂಗ್ರಹಿಸಿ ಬರೆದು ಪ್ರಕಟಿಸಿದರು. ಹಲವಾರು ಯೋಜನೆಗಳನ್ನು ಹಾಕಿಕೊಂಡು ದುಡಿಯುತ್ತಿರುವಾಗ, ಆಕಸ್ಮಿಕವಾಗಿ ನಿಧನರಾದುದು ಇದು ಬೆಳಗಾವಿ ಜಿಲ್ಲೆಗೆ ಆದ ದೊಡ್ಡ ನಷ್ಟ.

■■

# ಮಹಾರಾಷ್ಟ್ರದಲ್ಲಿ ಕನ್ನಡ ದೇವರ ಅಗ್ರಪೂಜೆ

ಮಹಾರಾಷ್ಟ್ರದ ಜಾನಪದ ಮತ್ತು ಮಾರ್ಗ ಸಂಪ್ರದಾಯದ ಹಲವಾರು ದೇವತೆಗಳು ಮೊದಲಲ್ಲಿ ಕನ್ನಡಿಗರ ದೇವತೆಗಳೆಂದೇ ಖ್ಯಾತರಾದವರು. ಪಂಡರಪುರದ ವಿಠೋಬಾನ ಸಂಗತಿ ಎಲ್ಲರಿಗೆ ತಿಳಿದೇ ಇದೆ. ಜ್ಞಾನೇಶ್ವರಿಯಲ್ಲಿನ ಕನ್ನಡ ಓವಿ ಮತ್ತು ಕನ್ನಡ ಭಾಷಾ ಪ್ರಭಾವ ಕುರಿತಾದ ವಾದ–ವಿವಾದ ಈಗ ಒಂದು ನಿಲುಗಡೆಗೆ ಬಂದಿದೆ. ಆ ಗ್ರಂಥದ ಮೇಲೆ ಆದ ಕನ್ನಡದ ಪ್ರಭಾವವನ್ನು ಈಗ ಒಪ್ಪಲಾಗಿದೆ. ಎಂದರೆ ವಿಠೋಬಾ ಮೂಲತಃ ಕನ್ನಡಿಗರ ದೇವರೆಂಬ ವಿಷಯ ಮಹಾರಾಷ್ಟ್ರದಲ್ಲಿ ಸರ್ವಮಾನ್ಯವಾಗಿದೆ. ಅದೇ ರೀತಿ ಸವದತ್ತಿ ಮತ್ತು ಇತರೆಡೆಯಲ್ಲಿ ದೇವಾಲಯ ಹೊಂದಿರುವ ರೇಣುಕೆಯ ಪ್ರಭಾವ ದಕ್ಷಿಣ ಮಹಾರಾಷ್ಟ್ರದ ಬಹುಭಾಗದಲ್ಲಿ ಕಂಡು ಬರುತ್ತದೆ. ಕೊಲ್ಹಾಪುರ ಅಚ್ಚಗನ್ನಡ ಪ್ರದೇಶವಾಗಿತ್ತೆಂಬ ಬಗೆಗೆ ಅನುಮಾನವಿಲ್ಲ. ಅಲ್ಲಿಯ ಅಧಿದೇವತೆಯಾದ ಮಹಾಲಕ್ಷ್ಮೀ ಒಂದು ಕಾಲದಲ್ಲಿ ಕನ್ನಡಿಗರಿಗೆ ಜನಪ್ರಿಯ ದೇವತೆಯೆನಿಸಿದ್ದಳು. ಇದೇ ದೇವತಾ ಪರಂಪರೆಯಲ್ಲಿ ಬರುವ ಇನ್ನೊಬ್ಬ ದೇವರೆಂದರೆ ಮೈಲಾರದೇವರು ಅಥವಾ ಮೈಲಾರಲಿಂಗ.

ವಿಠೋಬಾನ ಕನ್ನಡತನದ ಬಗ್ಗೆ ಮಹಾರಾಷ್ಟ್ರದಲ್ಲಿ ಕಂಡು ಬಂದ ಭಿನ್ನಭಿಪ್ರಾಯ ಮೈಲಾರಲಿಂಗನ ಬಗ್ಗೆ ಕಂಡು ಬರಲೇ ಇಲ್ಲ. ಮಹಾರಾಷ್ಟ್ರದ ವಿದ್ವಾಂಸರಿಗೆ ಬಹುಬೇಗನೆ ಈತ ಕರ್ನಾಟಕದ ಜಾನಪದ ದೇವರು ಎಂಬ ವಿಷಯ ತಿಳಿದು ಬಂತು. ತತ್ಸಂಬದ್ಧವಾಗಿ ದೊರೆಯುವ ದಾಕ್ಷ್ಯಾಧಾರಗಳು ಮೈಲಾರಲಿಂಗನ ಕನ್ನಡತನವನ್ನು ನಿಸ್ಸಂಶಯವಾಗಿ ಸಿದ್ಧಪಡಿಸುವುದು ವಿದ್ವಾಂಸರ ಗಮನಕ್ಕೆ ಬಂತು. ಹಾಗಾಗಿ ಈ ದೇವರನ್ನು ಕುರಿತಾದ ಹೆಚ್ಚಿನ ಅನ್ವೇಷಣೆ ಕರ್ನಾಟಕದಲ್ಲಿ ನಡೆಯಬೇಕೆಂದು ಖಚಿತವಾಗಿ ಸೂಚಿಸಿದರು.

ದೇವತಾ ಸ್ವರೂಪ ಮಹಾರಾಷ್ಟ್ರದಲ್ಲಿ ಈ ದೇವರನ್ನು ಮೈರಾಳ, ಮೈಳಾರ, ಖಂಡೋಬಾ, ಮೇಂಗನಾಥ, ಹಯಪತಿ, ಮಾರ್ತಾಂಡಭೈರವ, ಮಲ್ಹಾರ(ರಿ), ಮಲುದೇವ, ಮಲ್ಲೇಶ್ವರ ಮಲ್ಲುಖಾನ ಅಜಮತಖಾನ ಎಂದು ಮುಂತಾಗಿ ಕರೆಯಲಾಗುತ್ತದೆ. ಅದರಲ್ಲೂ ಖಂಡೋಬಾ ಅಥವಾ ಖಂಡೇರಾಯ ಎಂಬ

ಹೆಸರು ಸರ್ವಜನಪ್ರಿಯವಾಗಿದೆ. ಜತೆಗೆ ಏಳುಕೋಟಿ ಎಂಬ ಅವನ ಹೆಸರು ಅಥವಾ ಬಿರುದು ಅಲ್ಲಿನ ಎಲ್ಲ ದೇವಾಲಯಗಳಲ್ಲಿ ಈಗಲೂ ಉದ್ಘೋಷಿಸಲ್ಪಡುತ್ತದೆ. ಅಷ್ಟೇ ಅಲ್ಲದೆ ಮಹಾರಾಷ್ಟ್ರದ ಭಕ್ತಕೋಟಿಯಲ್ಲಿ ಪ್ರಚಲಿತವಿರುವ ಗ್ರಂಥಗಳಲ್ಲಿ ಈ ದೇವರ ಮೂಲಪೀಠ ಬೀದರ ಜಿಲ್ಲೆಯ ಪೇಂಬರ ಅಥವಾ ಪ್ರೇಮಪುರ ಅಥವಾ ಪ್ರೇಮಪುರಮೈಲಾರವೇ ಎಂದು ಖಂಡಿತವಾದ ಶಬ್ದಗಳಲ್ಲಿ ಹೇಳಿದೆ. ಮಹಾರಾಷ್ಟ್ರದ ಇತರತ್ರ ಈ ದೇವರ ದೇವಾಲಯಗಳು ನಿರ್ಮಾಣವಾಗುವಲ್ಲಿ ಪೇಂಬರದ ಈ ಪಾಠವೇ ಪ್ರೇರಣಾ ಸ್ಥಾನವೆಂದು ನಂಬಿಕೆಗಳು ಐತಿಹ್ಯಗಳು ಕೈಯೆತ್ತಿ ಸಾರುತ್ತಿವೆ. ಪ್ರೇಮಪುರ ಅಥವಾ ಪೇಂಬರದ ದೇವರು ಗೌಳಿಗಿತ್ತಿಯೊಬ್ಬಳ ಭಕ್ತಿ ಕಾರಣವಾಗಿ ಮೊದಲು ಸಾತಾರಾ ಜಿಲ್ಲೆಯ ಪಾಲಿಗೆ ಹೋದನಂತೆ. ಅಲ್ಲಿಂದ ನಳದುರ್ಗ (ಉಸ್ಮಾನಾಬಾದ ಜಿಲ್ಲೆ)ಕ್ಕೆ ತರುವಾಯ ಜೇಜೂರಿಗೆ ಹೋಗಿ ನೆಲಸಿದನಂತೆ. ಇನ್ನೊಂದು ನಂಬಿಕೆಯ ಪ್ರಕಾರ ಮೊದಲು ಬೀಡ ಜಿಲ್ಲೆಯ ಮಾಲೆಗಾಂವಕ್ಕೆ ತರುವಾಯ ನಳದುರ್ಗಕ್ಕೆ, ಆಮೇಲೆ ಪಾಲಿಗೆ, ಆನಂತರ ಜೆಜೂರಿಗೆ ಹೋದನೆಂದು ಹೇಳಲಾಗುತ್ತದೆ. ಒಟ್ಟಿನಲ್ಲಿ ಸಾತಾರಾ ಜಿಲ್ಲೆಯ ಪಾಲಿ, ಉಸ್ಮಾನಾಬಾದ ಜಿಲ್ಲೆಯ ನಳದುರ್ಗ, ಪುಣೆ ಜಿಲ್ಲೆಯ ಜೇಜೂರಿ ಮತ್ತು ನಿಮಗಾಂವ, ಔರಂಗಾಬಾದ ಜಿಲ್ಲೆಯ ಸಾತಾರೆ, ಅಹಮ್ಮದ ನಗರ ಜಿಲ್ಲೆಯ ಶೇಗುಡ್ಡ ಮತ್ತು ನೇವಾಎಗಳು ಈ ದೇವರು ವಾಸಿಸುವ ಸ್ಥಾನಗಳೆಂದು ಪ್ರಖ್ಯಾತವಾಗಿವೆ. ಜಾಗ್ರತಸ್ಥಾನಗಳೆಂದು ಇವುಗಳ ಬಗ್ಗೆ ಜನತೆ ಬಹುಗೌರವ ಪ್ರದರ್ಶಿಸುತ್ತದೆ. ಪ್ರಸಿದ್ಧವಾದ ಈ ದೇವಾಲಯಗಳಲ್ಲದೆ ಇತರ ಸ್ಥಾನಿಕ ಮಹತ್ವದ ದೇವಾಲಯಗಳು ಬಹಳ ಸಂಖ್ಯೆಯಲ್ಲಿವೆ. ಅಂಥ ಸಣ್ಣ ದೊಡ್ಡ ಎಲ್ಲ ದೇವಾಲಯಗಳ ಸಂಖ್ಯೆ ಮಹಾರಾಷ್ಟ್ರದಲ್ಲಿ ಸು. ನಾನ್ನೂರ ಅಯ್ವತ್ತಕ್ಕೂ ಹೆಚ್ಚು ಎಂದು ಅಂದಾಜು ಮಾಡಲಾಗಿದೆ. ವ್ಯಾಪ್ತಿಯ ದೃಷ್ಟಿಯಿಂದ ಕೊಂಕಣ, ದಕ್ಷಿಣ ಮಹಾರಾಷ್ಟ್ರ, ಮರಾಠವಾಡಾ, ವಿದರ್ಭ ಈ ಎಲ್ಲ ಪ್ರದೇಶಗಳಲ್ಲಿ ದೇವಾಲಯಗಳೂ ಆಚರಣೆಗಳೂ ಭಕ್ತಕೋಟಿಯೂ ಬೆಳೆದು ನಿಂತಿವೆ.

ಪ್ರಾದೇಶಿಕತೆ ಜಾನಪದದ ವೈಶಿಷ್ಟ್ಯಗಳಲ್ಲಿ ಒಂದು. ದೇವರ ಮೂಲಪೀಠ ಪ್ರೇಮಪುರವೆಂದು ಒಪ್ಪಿದರೂ ಆಯಾ ಭಾಗದ ಜನತೆ ದೇವರು ತಮ್ಮಲ್ಲಿ ಅವಿನಾಭಾವಿಯಾದ ಸಂಬಂಧವುಳ್ಳವನು ಎಂದು ಭಾವಿಸುತ್ತದೆ. ಆ ಕಾರಣದಿಂದಾಗಿ ಆಯಾ ಪ್ರದೇಶದ ಜನರು ದೇವರಿಗೆ ಸಂಬಂಧಿಸಿದ ಐತಿಹ್ಯಗಳನ್ನು ಸ್ಥಾನೀಕರಿಸಿದ್ದು ಕಂಡು ಬರುತ್ತದೆ. ಉದಾಹರಣೆಗೆ ದೇವರ ಪಟ್ಟದ ಹೆಂಡತಿಯಾದ ಮಾಳಸಾದೇವಿ ಅಥವಾ ಗಂಗಿಮಾಳಮ್ಮನ ತವರು ಮನೆ ಅಹಮ್ಮದ ನಗರ ಜಿಲ್ಲೆಯ ನೇವಾಸೆ ಕ್ಷೇತ್ರವಂತೆ. ಅವಳು ಅಲ್ಲಿಯ ಲಿಂಗಾಯತ ಬಣಜಿಗನಾದ ತಿಮ್ಮಶೆಟ್ಟಿಯ ಮಗಳಂತೆ. ಮೈಲಾರಲಿಂಗ–ಖಂಡೇರಾಯ ಅವಳನ್ನು ಪಾಲಿಯಲ್ಲಿ ಲಗ್ನವಾದ ಬಾಣಾಯಿ

ಅಥವಾ ಕುರುಬತೆವ್ವ ಚಂದನಪುರದ ಕುರುಬನ ಮನೆಯಲ್ಲಿ ಬೆಳೆದಳು. ಅವಳು ಜೇಜೂರಿಗೆ ಹೋಗಿ ದೇವರನ್ನು ನೋಡಿದ ಕೂಡಲೇ ಪರಸ್ಪರರು ಮೋಹಗೊಂಡರು. ಅವರಿಬ್ಬರ ಲಗ್ನ ನಳದುರ್ಗದಲ್ಲಿ ಜರುಗಿತು. ದೇವರು ಅವಳನ್ನು ಜೆಜೂರಿಗೆ ಕರೆದೊಯ್ದು ಅಲ್ಲಿ ತನ್ನ ಪಟ್ಟದರಸಿ ವಾಸವಾಗಿರುವ ಕೋಟೆಯ ಕೆಳಗಡೆ ಒಂದು ಸ್ಥಾನದಲ್ಲಿ ಇಟ್ಟ, ಮತ್ತು ಮೇಲಿಂದ ಮೇಲೆ ಅಲ್ಲಿಗೆ ಹೋಗಿ ಬರತೊಡಗಿದ. ಇಂಥ ಹಲವಾರು ಐತಿಹ್ಯಗಳು ಮಹಾರಾಷ್ಟ್ರದಲ್ಲಿ ಪ್ರಚುರವಾಗಿರುವುದು ಕಂಡು ಬರುತ್ತದೆ.

ದೇವತಾ ಸ್ವರೂಪದಲ್ಲಿ ಮಹಾರಾಷ್ಟ್ರಕ್ಕೂ ಕರ್ನಾಟಕಕ್ಕೂ ವಿಶೇಷ ಭಿನ್ನತೆಗಳು ಕಂಡು ಬರುವುದಿಲ್ಲ. ಮೈಲಾರಲಿಂಗನ ಮೂರ್ತಿಗಳೆಲ್ಲ ಅಲ್ಲಿಯು ಚತುರ್ಭುಜಗಳುಳ್ಳವಾಗಿದ್ದು ಅವುಗಳಲ್ಲಿರುವ ಸಂಕೇತಗಳು ಒಂದೇ ಬಗೆಯಾಗಿವೆ. ಎಂದರೆ ಕ್ರಮವಾಗಿ ಖಡ್ಗ, ತ್ರಿಶೂಲ, ಡಮರು ಮತ್ತು ಪಾನಪಾತ್ರಗಳು ಇರುವುದು ಕಂಡು ಬರುತ್ತದೆ. ಇಲ್ಲಿಯಂತೆ ಅಲ್ಲಿಯೂ ಆನಂದಾಸನದ ಮೂರ್ತಿಗಳು, ಅಶ್ವಾರೋಹಿ ಮೂರ್ತಿಗಳು, ನಿಂತ ಭಂಗಿಯ ಮೂರ್ತಿಗಳು ಎಲ್ಲೆಡೆ ಕಂಡು ಬರುತ್ತವೆ. ಮೂರ್ತಿ ಅಶ್ವಾರೋಹಿಯಾಗಿದ್ದಾಗ ಹೆಚ್ಚಿನ ಸಂದರ್ಭಗಳಲ್ಲಿ ಬೆನ್ನು ಹಿಂದೆ ಗಂಗಿಮಾಳಮ್ಮ ಸಹಿತವಾಗಿರುವ ಪದ್ಧತಿ ಅಲ್ಲಿಯೂ ಇದೆ. ಭಕ್ತರ ಮನೆಗಳಲ್ಲಿ ಪೂಜೆಗೊಳ್ಳುವ ದೇವರ ಅಚ್ಚುಗಳು ಕರ್ನಾಟಕ ಮಹಾರಾಷ್ಟ್ರದ ಎಲ್ಲೆಡೆ ಒಂದೇ ಬಗೆಯಾಗಿವೆ. ದೇವರ ವಾಹನ ಕುದುರೆ ಎಂಬುದು ಅಲ್ಲಿಯೂ ಸರ್ವಮಾನ್ಯವಾಗಿದೆ. ಜತೆಯಲ್ಲಿ ನಾಯಿಯೂ ಇರುತ್ತದೆ.

ದೇವಿಯ ಮೂರ್ತಿಗಳು ಮಾತ್ರ ಕರ್ನಾಟಕಕ್ಕಿಂತ ಹೆಚ್ಚು ಭಿನ್ನತೆಯ ಲಕ್ಷಣವುಳ್ಳವಾಗಿವೆ. ಕರ್ನಾಟಕದಲ್ಲಿ ಚತುರ್ಭುಜಗಳು ದೇವಿಗೆ ಸಾಮಾನ್ಯವಾಗಿದ್ದರೆ ಅಲ್ಲಿ ದ್ವಿಭುಜವುಳ್ಳ ಮೂರ್ತಿಗಳ ದೊಡ್ಡ ಸಮುದಾಯವೇ ಇದೆ. ಹಸ್ತಗಳಲ್ಲಿನ ಸಂಕೇತಗಳು ಭಿನ್ನತರದವಿವೆ. ಕೆಲವೆಡೆ ಕಮಲ ಕಲಿಕೆ, ಗಜಹಸ್ತ ಮುದ್ರೆಗಳು ಕಂಡು ಬರುತ್ತವೆ. ದೇವಿಯನ್ನು ಮೂಲ ಮಲ್ಲಾರಿ ಮಹಾತ್ಮ್ಯದಲ್ಲಿ ಗಂಗಾ–ಮ್ಹಾಲಸಿಕಾ ಎಂದಿದ್ದರೂ ಮರಾಠಿಗರು 'ಮ್ಹಾಳಸಾ' ಎಂದು ಕರೆಯುವುದೇ ವಿಶೇಷ. ಕೆಲವೆಡೆ ಅವಳನ್ನು ಜೋಗೇಶ್ವರಿ ಎಂದಿರುವುದೂ ಉಂಟು. ಲೀಳಾಚರಿತ್ರದಲ್ಲಿ ಇವಳನ್ನು 'ಮಾಳಸೀ' ಎಂದು ಕರೆದಿರುವುದಾಗಿ ತಿಳಿದುಬರುತ್ತದೆ. ಇದು ಹಳಗನ್ನಡ ನಡುಗನ್ನಡ ಸಾಹಿತ್ಯದಲ್ಲಿ ದೊರೆಯುವ 'ಮಾಳಚಿ' ಎಂಬುದರಿಂದ ನೇರವಾಗಿ ನಿಷ್ಪನ್ನವಾದುದು ಎಂದು ಬೇರೆ ಹೇಳಬೇಕಾಗಿಲ್ಲ. ಜ್ಞಾನೇಶ್ವರಿಯಲ್ಲಿ 'ಮಹಾಲಸಾ' ಎಂದಿದೆ. ಕೆಲವೆಡೆ ಇದನ್ನು ಹೆಚ್ಚು ಸಂಸ್ಕೃತೀಕರಿಸುವ ಪ್ರಯತ್ನವಾಗಿ 'ಮಹಾಲಯಾ' ಎಂದೂ ಪರಿವರ್ತಿಸಲಾಗಿದೆ. ಇವಳು ಕರ್ನಾಟಕದಲ್ಲಿಯಂತೆ ಉಚ್ಚ ಕುಲದವಳು

ಎಂದರೆ ಲಿಂಗಾಯತ ಬಣಜಿಗರವಳು ಎಂಬ ನಂಬಿಕೆ ಅಲ್ಲಿಯೂ ಇದೆ. ನೇವಾಸೆ ಇವಳ ತವರು ಮನೆಯಂತೆ. ಪ್ರಸ್ತುತ ನೇವಾಸೆಯಲ್ಲಿ ಇವಳ ಪ್ರತ್ಯೇಕ ದೇವಾಲಯ ಕ್ರಿ.ಶ. ೧೨೯೮ರ ಕಾಲಕ್ಕಾಗಲೇ ಇತ್ತು ಈಗಲೂ ಇದೆ. ಆದರೆ ಈಗಿನ ಮೂರ್ತಿ ಸ್ವರೂಪ ಮಾತ್ರ ಬೇರೆಯಾಗಿದೆ.

ಕುರುಬರ ಮಾಳವ್ವ ಅಥವಾ ಕುರುಬತೆವ್ವನನ್ನು ಅಲ್ಲಿ ಈಗ 'ಬಾಣಾಯಿ' ಎಂದು ಹೇಳುವುದು ಹೆಚ್ಚು ರೂಢವಾಗಿದೆ. ಬನು, ಬಾನಾ, ಬಾಣಾ ಇತ್ಯಾದಿ ಪರ್ಯಾಯಗಳು ಈ ಹೆಸರಿಗೆ ಇರುವುದು ಕಂಡು ಬರುತ್ತದೆ. ಇವಳು ಕುರುಬ ಕನ್ನೆ ಎಂಬಲ್ಲಿ ಭಿನ್ನಾಭಿಪ್ರಾಯವಿಲ್ಲ. ಅಷ್ಟೇ ಅಲ್ಲ ಇವಳ ಮೂರ್ತಿ ಶಿಲ್ಪದ ಜತೆಗೆ ಕುರಿಮರಿಯೊಂದನ್ನು ತೋರಿಸಿರುವುದು ಕೆಲವೆಡೆ ಕಂಡು ಬರುತ್ತದೆ. ಹರಕೆ ಹೊತ್ತವರು ಇವಳಿಗೆ ಕಟ್ಟಿಗೆಯ ಕುರಿಯನ್ನು ಅರ್ಪಿಸುವ ಆಚರಣೆಯೂ ಉಂಟು. ಪಾಲಿಯಲ್ಲಿ ಇವಳ ಮೂರತ್ತಿ ಕೈಮುಗಿದು ನಿಂತ ಭಂಗಿಯಲ್ಲಿದೆ. ಇತರತ್ರ ಇವಳ ದ್ವಿಭುಜ ಮೂರ್ತಿಗಳು ಕಂಡುಬರುತ್ತವೆ. ಲಾಂಛನಗಳಲ್ಲಿ ಕಮಲ ಕುಟ್ಮಲ, ಕುರಿ ಮುಂತಾದುವು ಕಂಡು ಬರುತ್ತವೆ. ಕರ್ನಾಟಕದಲ್ಲಿ ಇವಳಿಗಾಗಿ ಪ್ರತ್ಯೇಕ ಹಬ್ಬವೊಂದು ಇದ್ದರೆ ಮಹಾರಾಷ್ಟ್ರದಲ್ಲಿ ಈಗ ಅದು ಕಂಡು ಬರುವುದಿಲ್ಲ. ಮಾಂಸದ ನೈವೇದ್ಯ ಇವುಗಳಿಗಾಗಿ ಮಾತ್ರ ಅರ್ಪಿಸಲ್ಪಡುತ್ತದೆ. ಅದೂ ಮುಖ್ಯ ದೇವಾಲಯದಿಂದ ಹೊರಗಡೆ.

ಹೆಗ್ಗಡೆ ಅಥವಾ ಹೆಗ್ಗಣ್ಣ ಪ್ರಧಾನಿ ಮಹಾರಾಷ್ಟ್ರದಲ್ಲಿ 'ಹೇಗಡಿ' ಎಂದೇ ಪ್ರಸಿದ್ಧನಾಗಿದ್ದಾನೆ. ಎಲ್ಲ ದೇವಾಲಯಗಳಲ್ಲಿ ಈತನಿಗೆ ಪ್ರತ್ಯೇಕ ದೇವಾಲಯ ಅಥವಾ ಸ್ಥಾನವೊಂದು ಇದ್ದೇ ಇರುತ್ತದೆ. ಮಹಾರಾಷ್ಟ್ರದ ಭಕ್ತರೂ ಈತ ಮೈಲಾರಲಿಮಗನ ಭಾವ-ಮೈದ ಎಂದೇ ನಂಬುತ್ತಾರೆ ಮತ್ತು ಶಿವನ ದೈತ್ಯ ವಹಿಸಿದ ವಿಷ್ಣು ಎಂದು ತಿಳಿಯುತ್ತಾರೆ. ಜೆಜೂರಿಯಲ್ಲಿ ಪದ್ಮಾಸನ ಹಾಕಿದ ದ್ವಿಭುಜ ಮೂರ್ತಿಯಿದೆ. ಎಡಗೈಪಾನ ಬಟ್ಟಲು ಹೊಂದಿದ್ದು ಬಲಗೈ ಖಾಲಿ ಇದೆ. ತಲೆಗೆ ಸಾಮಾನ್ಯ ರೈತರಂತೆ ಬಟ್ಟೆಯೊಂದನ್ನು ಸುತ್ತಿದ್ದಾನೆ. ಇಂಥದೇ ಒಂದು ಮೂರ್ತಿ ಪಾಲಿಯಲ್ಲಿಯೂ ಇದೆ. ಕರ್ನಾಟಕದಲ್ಲಿ ಈತನ ಮೂರ್ತಿಗಳು ಚತುರ್ಭುಜ ಹೊಂದಿರುವುದೇ ಹೆಚ್ಚು.

ಮಹಾರಾಷ್ಟ್ರದ ದೇವಾಲಯಗಳಲ್ಲಿ ತುಪ್ಪದ ಮಾಳವ್ವ ಅಥವಾ ಘೃತಮಾರಿಯ ದೇವಾಲಯಗಳು ಕಂಡು ಬರುವುದಿಲ್ಲ. ಬದಲು ಕೆಲವು ದೇವಾಲಯಗಳ ಪರಿಸರದಲ್ಲಿ ಈ ದೇವತೆಯ ಸ್ಥಾನ ಮಾತ್ರ ಇವೆ. ಜೆಜೂರಿಯಲ್ಲಿ ಮುಖ್ಯ ದೇವಾಲಯದ ಹಿಂದೆ ಇರುವ ದೊಡ್ಡ ಬಡ್ಡೆಗಲ್ಲನ್ನು ಇವಳ ಸಂಕೇತವೆಂದು ನಂಬುತ್ತಾರೆ. ಅಲ್ಲಿನ ಜಾನಪದರಿಗೆ ಇವಳ ಬಗ್ಗೆ ಹೆಚ್ಚಿನ ತಿಳುವಳಿಕೆಯಿಲ್ಲ.

ಕರ್ನಾಟಕದಲ್ಲಿ ಚಿಕ್ಕಯ್ಯ ಮತ್ತು ಜುಂಜಯ್ಯರು ಮೈಲಾರಲಿಂಗ ಗಂಗಿ ಮಾಳಮ್ಮರ ಮಕ್ಕಳೆಂದು ತಿಳಿಯಲಾಗುತ್ತದೆ. ಇವರ ಬಗ್ಗೆ ಮಹಾರಾಷ್ಟ್ರದಲ್ಲಿ ಯಾವ ತಿಳುವಳಿಕೆಯೂ ಇಲ್ಲ. ಮಲ್ಲಾರಿ ಮಹಾತ್ಮ್ಯದಲ್ಲಿ ಷಣ್ಮುಖ ಮತ್ತು ಗಣಪತಿಯರ ಉಲ್ಲೇಖವೇನೋ ಇದೆ. ಆದರೆ ಅವರ ಜಾನಪದ ಅವತಾರವಾದ ಈ ದೇವರುಗಳು ಅಲ್ಲಿ ನೆಲೆಸಿಲ್ಲ.

ಕುದುರೆ ನಾಯಿಗಳ ಜತೆಗೆ ಭಂಡಾರ ಮತ್ತು ಕವಡೆಗಳಿಗೆ ಅಲ್ಲಿಯೂ ಮಹತ್ವದ ಸ್ಥಾನವಿದೆ. ಕರ್ನಾಟಕದಲ್ಲಿರುವುದಕ್ಕಿಂತ ಒಂದು ಕೈ ಮಿಗಿಲಾಗಿಯೇ ಇದೆ. ದೇವರಿಗೆ ಭಕ್ತರು ಪ್ರತಿನಿತ್ಯ ಭಂಡಾರ ಏರಿಸುತ್ತಾರೆ. ಜೆಜೂರಿಯಲ್ಲಿ ಭಮಡಾರ ಏರಿಸುವಾಗ ಕಾಗದದಲ್ಲಿ ಪೊಟ್ಟನಾಕಟ್ಟಿ ಒಯ್ಯುವುದಿಲ್ಲ. ಬದಲು ಬಟ್ಟೆಯ ಚೀಲಗಳಲ್ಲಿ ಕಿಲೋಗಟ್ಟಲೆಯಾಗಿ ತುಂಬಿ ಒಯ್ದು ದೇವರಿಗೆ ಅರ್ಪಿಸುವ ಪದ್ಧತಿ ರೂಢಿಗೆ ಬಂದಿದೆ. ಮೇಲಿನ ಸಂಕೇತಗಳ ಜತೆಗೆ ಕತ್ತೆ ಮತ್ತು ಕುದುರೆಗಳ ಬಗ್ಗೆ ಅಲ್ಲಿ ಹೆಚ್ಚಿನ ಸ್ಥಾನವಿದ್ದಂತೆ ಕಂಡುಬರುತ್ತದೆ. ಜೆಜೂರಿಯಲ್ಲಿ ಕತ್ತೆಗಳ ಸಂತೆ ನಡೆಯುತ್ತದೆ. ಮಾಲೆಗಾವದಲ್ಲಿ ಕುದುರೆಗಳ ಜಾತ್ರೆ ಸೇರುತ್ತದೆ. ಇತರ ದೇವಾಲಯಗಳಲ್ಲಿ ದನಗಳ ಜಾತ್ರೆ ನಡೆಯುವುದು ಉಂಟು.

ಕರ್ನಾಟಕ ಪ್ರದೇಶದಲ್ಲಿ ಸ್ವಯಂಭೂ ಲಿಂಗವಷ್ಟೇ ಅಲ್ಲದೆ ಆಲದಮರ ಮತ್ತು ಹುತ್ತುಗಳಿಗೆ ವಿಶೇಷ ಮಹತ್ವವಿದೆ. ಇವುಗಳ ಜತೆಗೆ ಎಕ್ಕೆಯ ಗಿಡಕ್ಕೂ ಗೌರವ ಸಲ್ಲುತ್ತದೆ. ದೇವರು ಹುತ್ತದಲ್ಲಿ ವಾಸವಾಗಿರುತ್ತಾನೆ ಎಂದೂ ಕರಿಯಾಲದಲ್ಲಿ ವಾಸವಾಗಿರುತ್ತಾನೆಂದೂ ಇತ್ತಲಿನ ಭಕ್ತರು ನಂಬುತ್ತಾರೆ. ಕೆಲವರು ಎಕ್ಕೆಯ ಮರದಲ್ಲಿ ಮಲ್ಲಯ್ಯನಿರುತ್ತಾನೆಂದು ಭಾವಿಸುತ್ತಾರೆ. ಈ ಕುಲಸಂಕೇತ(totems)ಗಳ ಜತೆಗೆ ತ್ರಿಶೂಲ ಸಹಿತವಾದ ಶಿಬಾರಕ್ಕೂ ಅಗ್ರಸ್ಥಾನವಿದೆ. ಮಹಾರಾಷ್ಟ್ರದಲ್ಲಿ ಇವುಗಳ ಪರಿಚಯವಿಲ್ಲ. ಮಲ್ಲಾರಿ ಮಹಾತ್ಮ್ಯ ಮತ್ತು ಇತರ ಗ್ರಂಥಗಳಲ್ಲಿ ಆಲದ ಮರದ ಉಲ್ಲೇಖ ಎಡೆಪಡೆದಿರುವುದಾದರೂ ಜನಮನದಲ್ಲಿ ಕರಿಯಾಲ ಮತ್ತು ಇತರ ಸಂಕೇತಗಳಿಗೆ ಹೆಚ್ಚಿನ ಗೌರವ ಇಲ್ಲ. ನಳದುರ್ಗ ಮತ್ತು ಪ್ರೇಮಪುರ ದೇವಾಲಯಗಳಲ್ಲಿ ಮಾತ್ರ ದೇವರು ಕರಿಯಾಲದಲ್ಲಿ ವಾಸಿಸುತ್ತಾನೆಂಬ ನಂಬಿಕೆ ಪ್ರಚಲಿತವಾಗಿದೆ. ಆದರೆ ತ್ರಿಶೂಲ ಮತ್ತು ಖಡ್ಗಗಳಿಗೆ ಅಲ್ಲಿಯೂ ವಿಶೇಷ ಮಹತ್ವವಿದೆ. ಜೆಜೂರಿಯಲ್ಲಿರುವ ಒಂದು ಖಡ್ಗ ೩೫ ಕಿಲೋ ಭಾರದ್ದಿದೆ. ಅದೇ ರೀತಿ ಅಲ್ಲಿ ಪ್ರತ್ಯೇಕವಾದಹಿತ್ತಾಳೆಯ ತ್ರಿಶೂಲವೊಂದು ದೊಡ್ಡಗಾತ್ರದ್ದಿದ್ದು ದಿನನಿತ್ಯ ಪೂಜೆಗೊಳ್ಳುತ್ತದೆ. ಇಲ್ಲಿಯಂತೆ ಅಲ್ಲಿಯೂ ನಾಯಿ ಎಂದರೆ ಮಲ್ಲಯ್ಯನೆಂದೂ ಶಿವನು ಶಿವಲಿಂಗರೂಪಧರಿಸಿದ್ದು ಮಲ್ಲಾಸುರನ ಅಪೇಕ್ಷೆಯ ಮೇರೆಗೆ ಎಂದೂ ನಂಬಿಕೆ ಪ್ರಬಲವಾಗಿದೆ. ಮಲ್ಲಾಸುರನ ತಮ್ಮ ಮಣಿಕಾಸುರನೇ ದೇವರ ವಾಹನವಾದ

ಕುದುರೆ ಎಂಬ ತಿಳುವಳಿಕೆ ಅಲ್ಲಿ ಕೂಡ ಇಂಬು ಪಡೆದಿದೆ. ದೇವರ ಹೆಸರು ಅಥವಾ ಬಿರುದು ಏಳುಕೋಟಿ ಎನ್ನುವಲ್ಲಿ ಮಹಾರಾಷ್ಟ್ರದ ಭಕ್ತರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅಲ್ಲಿನ ಎಲ್ಲ ದೇವಾಲಯಗಳಲ್ಲಿ ಘೋಷಿಸುವಾಗ ಎಂದರೆ ಉಗ್ಗಡಿಸುವಾಗ ಈ ಏಳುಕೋಟಿ ಎಂಬ ಶಬ್ದ ಬಂದೇ ತೀರುತ್ತದೆ.

**ಆಚರಣೆ :** ಗೊರವ ಗೊರವಿಯರಲ್ಲಿ ಕರ್ನಾಟಕದಲ್ಲಿರುವ ವೈವಿಧ್ಯ ಮಾತ್ರ ಮಹಾರಾಷ್ಟ್ರದಲ್ಲಿ ಕಂಡು ಬರುವುದಿಲ್ಲ. ಇಲ್ಲಿರುವಂತೆ ನಾಯಿಗೊರವರು, ಕರಡಿಗೊರವರು, ಪಾರಿಗೊರವರು, ಕುದುರೆಕಾರರು ಕಂಚಾವೀರರು ಇತ್ಯಾದಿ ಭೇದ ಅವರಲಿಲ್ಲ. ಎಲ್ಲ ಗೊರವರು ಅಲ್ಲಿ ವಾಘ್ಯಾಗಳೆಂದೇ ಕರೆಯಲ್ಪಡುತ್ತಾರೆ. ಸಧ್ಯದ ಗೊರವರು ಕೋರಿಯ ಅಂಗಿ ತೊಡುವ ಪದ್ಧತಿಯೂ ಅಲ್ಲಿ ಉಳಿದಿಲ್ಲ. ನಳದುರ್ಗ ಮತ್ತು ಪಾರ್ಲಿಗಳಲ್ಲಿ ಮಾತ್ರ ಕುದುರೆಕಾರರು ಈಗಲೂ ಇದ್ದು ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಇವರು ಸಂಶೋಧಕರ ಗಮನಕ್ಕೆ ಅಷ್ಟಾಗಿ ಬಂದಿಲ್ಲ. ಕಂಚಾವೀರರನ್ನು ಹೋಲುವ ವೀರರು ಮುಂಚೆ ಪಾಲಿ ಮತ್ತು ಜೆಜೂರಿಗಳಲಿ ಇದ್ದ ಬಗ್ಗೆ ಉಲ್ಲೇಖಗಳಿವೆ. ಈಗ ಈ ಪ್ರದೇಶದಲ್ಲಿ ಕಂಡುಬರುವುದಿಲ್ಲ.

ಅಲ್ಲಿನ ಗೊರವಿಯರೆಂದರೆ ಮುರಳಿಯರು. ಇವರು ತಪ್ಪದೇ ದೇವದಾಸಿ ಸಂಪ್ರದಾಯ ಅನುಸರಿಸುವವರು. ಕರ್ನಾಟಕದಲ್ಲಿ ಈ ಪರಿಸ್ಥಿತಿಯಿಲ್ಲ. ಗೊರವಿಯರು ದೇವದಾಸಿಯರಾಗಿರಲೇಬೇಕೆಂಬ ನಿಯಮ ಇಲ್ಲಿ ಇಲ್ಲ. ಪ್ರತಿವರ್ಷ ಚೈತ್ರದಲ್ಲಿ ಮುರುಳಿಯರಾಗುವುದು ಸಾಮಾನ್ಯ. ಈಗ ಮುರಳಿಯರಾಗುವ ಪದ್ಧತಿ ತೀರ ಕ್ಷೀಣವಾಗಿದೆ.

ವಾಘೆ-ಮುರಳಿಯರಲ್ಲಿ ದೋಣಿ, ಗಂಟೆ, ಭಂಡಾರಚೀಲ, ತ್ರಿಶೂಲ ಅಥವಾ ಶೂಲ ಮತ್ತು ಒಂದು ಜೋಳಿಗೆ ಇರುವುದು ಸಾಮಾನ್ಯ. ಡಮರುವಿನ ಬದಲು ಇವರು ಘೋಳ ವಾದ್ಯ ಇರುವುದೇ ಹೆಚ್ಚು. ತುಂತುಣಿ ಇವರ ಪ್ರಮುಖ ಸಂಗೀತವಾದ್ಯ. ತಾಳಗಳು ಇರುವುದೂ ಉಂಟು. ಬಹಳಷ್ಟು ಜನ ವಾಘ್ಯಾಗಳಲ್ಲಿ ಸರಪಣಿಗಳಿರುತ್ತವೆ.

ಚಂಪಾಷಷ್ಠಿ ಅಥವಾ ವಾಂಗೀಸಟಿಯ ಆರಾಧನೆ ಮಹಾರಾಷ್ಟ್ರದಲ್ಲಿಯೂ ಪ್ರಾಮುಖ್ಯ ಪಡೆದಿದೆ. ಸಣ್ಣ-ದೊಡ್ಡ ಎಲ್ಲ ದೇವಾಲಯಗಳಲ್ಲಿ ಭಟ್ಟಿಯಂದು ದೇವರಿಗೆ ಭಂಡಾರ ಪೂಜೆ ವೈಭವದಿಂದ ನಡೆಯುತ್ತದೆ. ಜೆಜೂರಿಯಲ್ಲಿ ಈ ಸಂದರ್ಭದಲ್ಲಿ 'ತಿಳವಣಾಚಾ ಹಂಡಾ' ಅರ್ಪಿಸುವ ಕಾರ್ಯಕ್ರಮ ವೈಭವಪೂರ್ಣವಾಗಿ ಸಾಂಗಗೊಳ್ಳುತ್ತದೆ. ದೇವಸ್ಥಾನದಿಂದ ಮೆರವಣಿಗೆಯಲ್ಲಿ ದೊಡ್ಡ ಹಂಡೆಯೊಂದನ್ನು ಕೋಟೆಯಿಂದ ಕೆಳಗೆ ತಮದು ಇಟ್ಟು ಊರವರೆಲ್ಲ ಅದರಲ್ಲಿ ಒಳ್ಳೆಣ್ಣೆ ಹಾಕುತ್ತಾರೆ. ತರುವಾಯ ಅದನ್ನು ಮೆರವಣಿಗೆಯಲ್ಲಿ ಒಯ್ದು

ದೇವರಿಗೆ ಅರ್ಪಿಸುತ್ತಾರೆ. ಮಹಾನವಮಿಯ ನವರಾತ್ರಿಯಂತೆ ಈಗಲೂ ೬ ದಿನಗಳ ನವರಾತ್ರಿಯ ಕಾರ್ಯ ನಡೆಯುತ್ತದೆ. ಇದೇ ರೀತಿ ಮಹಾರಾಷ್ಟ್ರದ ಪ್ರತಿಯೊಬ್ಬ ಭಕ್ತರೂ ತಮ್ಮ ಮನೆಗಳಲ್ಲಿ ಭಟ್ಟಿಯ ನವರಾತ್ರಿ ಮತ್ತು ಭಂಡಾರ ಪೂಜೆಯ ಕಾರ್ಯಕ್ರಮ ಇಟ್ಟುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ದೋಣಿ ತುಂಬುವ ಪರಿಪಾಠ ಇದ್ದೇ ಇರುತ್ತದೆ. ಹೊರನಾದ ಅಡಿಗೆಯ ಜತೆಗೆ ಹಸಿಯ ಉಳ್ಳೇಗಡ್ಡಿ. ಬದನೆಯ ಕಾಯಿಯ ಭರತ(ಬಜ್ಜಿ) ಬಳ್ಳೊಳ್ಳಿ, ಸಜ್ಜೆ, ರೊಟ್ಟಿ ಮತ್ತು ಉಪ್ಪನ್ನು ನೈವೇದ್ಯವಾಗಿ ಅರ್ಪಿಸುತ್ತಾರೆ. ಕರ್ನಾಟಕದಲ್ಲಿ ಮೇಲಿನ ವಸ್ತುಗಳ ಪೈಕಿ ಸಜ್ಜೆಯ ರೊಟ್ಟಿ ಅರ್ಪಿಸುವ ಕ್ರಮ ಇರುವುದಿಲ್ಲ.

ಪಾಲಿಯಲ್ಲಿ ಬನದ ಹುಣ್ಣಿವೆಗೆ ಎಂದರೆ ಪೌಷ್ಯಶುದ್ಧ ದ್ವಾದಶಿಗೆ ದೇವರ ಲಗ್ನವಾಗುತ್ತದೆ. ಗಂಗಿವಾಳಮ್ಮ-ಮೈಲಾರಲಿಂಗಪ್ಪರ ಮೂರ್ತಿಗಳನ್ನು ಮೆರವಣಿಗೆಯಲ್ಲಿ ಒಯ್ದು ಊರು ಸುತ್ತಿಸಿ ತಂದು ಹಮದರವೊಂದರಲ್ಲಿ ಸ್ಥಾಪಿಸುತ್ತಾರೆ. ತರುವಾಯ ಲಗ್ನ ಮಾಡುತ್ತಾರೆ. ಮೆರವಣಿಗೆಯ ಕಾಲಕ್ಕೆ ಬಂದ ಭಕ್ತರೆಲ್ಲ ಕೊಬ್ಬರಿಯ ಬಟ್ಟಲುಗಳಲ್ಲಿ ಭಂಡಾರ ತುಂಬಿ ಹಾರಿಸುವುದು ಇಲ್ಲಿ ಸಂಪ್ರದಾಯ. ಪೇಶ್ವೆಗಳ ಕಾಲದಲ್ಲಿ ಆನೆಯ ಮೇಲೆ ದೇವರ ಮೆರವಣಿಗೆ ಮತ್ತು ಅಕ್ಷತಾರೋಪಣದ ಕಾಲದಲ್ಲಿ ತೋಪುಗಳ ಸಲಾಮಿ ಕಾರ್ಯಕ್ರಮ ಜರುಗುವುದಿತ್ತು.

ನವರಾತ್ರಿಯಲ್ಲಿ ಇತರ ದೇವಾಲಯಗಳಂತೆ ಇಲ್ಲಿಯೂ ಘಟಸ್ಥಾಪನೆ ದೀಪೋತ್ಸವ ನಡೆಯುತ್ತವೆ. ಕೆಲವು ಕಡೆ ವಿಶೇಷ ಜಾತ್ರೆ ನೆರೆಯುವುದೂ ಉಂಟು.

ಸೋಮವತಿ ಅಮವಾಸ್ಯೆಗೆ ಖಂಡೋಬಾ ದೇವಸ್ಥಾನಗಳಲ್ಲಿ ದೊಡ್ಡ ಪ್ರಮಾಣದ ಜಾತ್ರೆ ಕೂಡುತ್ತದೆ. ವಿಶೇಷವಾಗಿ ಜೆಜಾರಿಯಲ್ಲಿ ಇಂಥ ಜಾತ್ರೆಗೆ ಭಕ್ತರ ದಟ್ಟಣೆ ಗಮನಾರ್ಹ ಪ್ರಮಾಣದಲ್ಲಿರುತ್ತದೆ.

ಭಕ್ತರಲ್ಲಿ ಕುಲಾಚಾರವೆಂದು ನಡೆಯುವ ಹಲವು ಆಚರಣೆಗಳು ಮಹಾರಾಷ್ಟ್ರದಲ್ಲಿ ಪ್ರಚಲಿತವಾಗಿವೆ. ಅವುಗಳಲ್ಲಿ 'ಜಾಗರಣ' ಎಂಬುದು ಪ್ರಮುಖವಾದುದು. ಕಲಶರೂಪದಲ್ಲಿ ದೇವರನ್ನು ಪ್ರತಿಷ್ಠೆ ಮಾಡಿ ವಾಘ್ಯಾ ಮುರಳಿಯರಿಂದ ಹಾಡು-ಕುಣಿತ-ವಾದ್ಯಗಳ ಸೇವೆ ನಡೆಯುತ್ತದೆ. ಮುರಳಿಯರು ಮುಖಕ್ಕೆ ಅರಿಸಿನ ಹಚ್ಚಿಕೊಂಡು ಕಾಲಿಗೆ ಗೆಜ್ಜೆಕಟ್ಟಿ ಹಾಡುತ್ತ ಕುಣಿಯುತ್ತಾರೆ. ಇವರಿಗೆ ಹಿನ್ನೆಲೆಯ ಸಾಥಿ ಆಗಿ ವಾಘ್ಯಾಗಳು ಸಹಾಯ ಮಾಡುತ್ತಾರೆ. ಘೋಳ, ತುಂತುಣಿ ಮತ್ತು ತಾಳಗಳು ಈ ಸಂದರ್ಭದಲ್ಲಿ ಉಪಯೋಗಿಸಲ್ಪಡುತ್ತವೆ. ಬೆಳಿಗ್ಗೆ ಸರಪಣಿಯ ಪವಾಡ ನಡೆಯುತ್ತದೆ. ಮಾಂಸಾಹಾರಿಗಳಾದರೆ ಕುರಿಯ ಬಲಿ ನಡೆಯುತ್ತದೆ. ಶಾಖಾಹಾರಿಗಳು ಹೂರಣ, ಮೊಸರನ್ನ, ಹಸೀಉಳ್ಳೇಗಡ್ಡಿ, ಬದನೆಯಕಾಯಿ, ಉಪ್ಪು, ಬಳ್ಳೊಳ್ಳಿಗಳ ಸಮೇತ ನೈವೇದ್ಯ ಮಾಡಿ ಕಾಯಿ ಒಡೆಯುತ್ತಾರೆ. ಮನೆಯಲ್ಲಿ

ಲಗ್ನ ಮುಂತಾದ ವಿಶೇಷ ಕಾರ್ಯಕ್ರಮವಿದ್ದಾಗ ಈ ವಿಧಿ ಹೆಚ್ಚಾಗಿ ನಡೆಯುತ್ತದೆ. ಅಲ್ಲದೆ, ಮಕ್ಕಳ ಜವಳ, ಕಿವಿಚುಚ್ಚುವುದು, ಅಥವಾ ಹರಕೆ ಕೈಗೂಡಿದ ಸಂದರ್ಭದಲ್ಲಿಯೂ ಇದನ್ನು ಮಾಡಬಹುದು. ಕರ್ನಾಟಕದಲ್ಲಿ ಚಿಕ್ಕಯ್ಯ-ಜುಂಜಯ್ಯನ ಪೂಜೆಗೆ ಇದು ಸಮನಾಗಿದೆ. ಮುರಳಿಯರ ನರ್ತನ ಗಾಯನ ಹೊರತು ಪಡಿಸಿದರೆ ಇದು ಅಂಬಾಬಾಯಿಯ ಗೊಂದಲಕ್ಕೆ ಹತ್ತಿರವಾಗಿದೆ. ಇಲ್ಲಿ ಲಕ್ಷಿಸಬೇಕಾದ ಸಂಗತಿಯೆಂದರೆ ಮಾಂಸದ ಅಡಿಗೆಯನ್ನು ದೋಣಿಗೆ ತುಂಬುವುದಿಲ್ಲ ಮತ್ತು ದೇವಾಲಯದಲ್ಲಿ ಒಯ್ಯುವುದು ನಿಷಿದ್ಧವೆಂದು ಭಾವಿಸಲಾಗುತ್ತದೆ. ಕನ್ನಡ ಭಕ್ತರ ನಡತೆಯೂ ಇದೇ ತೆರನಾಗಿದೆ.

ಲಗ್ನವಾದ ತರುವಾಯ ನವದಂಪತಿಗಳು 'ತಳಿಭರಣೆ' ಎಂಬ ವಿಧಿಯನ್ನು ಆಚರಿಸುತ್ತಾರೆ. ದೊಡ್ಡ ತಟ್ಟೆಯೊಂದರಲ್ಲಿ ಎಲೆ, ಅಡಿಕೆ, ಭಂಡಾರ ಮತ್ತು ಕೊಬ್ಬರಿ ಬಟ್ಟಲನ್ನು ತುಂಬಿ ದೇವರ ಎದುರಿಗೆ ನಿಂತು 'ಏಳುಕೋಟಿ ಏಳುಕೋಟಿ ಘೇ' ಎಂದು ಹೇಳುತ್ತ ಮೂರು ಸಲ ಎತ್ತುತ್ತಾರೆ. ತರುವಾಯ ಕಾಯ್-ಕೋಲು ದೀವಟಿಗೆಯಿಂದ ದೇವರಿಗೆ ಬೆಳಗುತ್ತಾರೆ. ಇದನ್ನೇ 'ತಳೀ ಭರಣೆ' ಎಂದು ಕರೆಯಲಾಗುತ್ತದೆ. ಈ ವಿಧಿ ಜೆಜೂರಿ ಅಥವಾ ಇತರ ದೇವಾಲಯಕ್ಕೆ ಹೋಗಿ ಮಾಡಬೇಕಾದುದು. ಹಾಗೆ ಹೋಗುವ ಅನುಕೂಲವಿಲ್ಲದವರು ಸಾಂಕೇತಿಕ ಜೆಜೂರಿಗೆ ಹೋಗಿ ಬರುತ್ತಾರೆ. ಎಂದರೆ ತಮ್ಮ ಮನೆಯಿಂದ ಹೊರಬಂದು ನಾಲ್ಕು ಹೆಜ್ಜೆ ಜೆಜೂರಿಯ ದಿಕ್ಕಿನಲ್ಲಿ ನಡೆದು ತಟ್ಟೆ ಎತ್ತಿ ದೀವಟಿಗೆ ಬೆಳಗಿ ಬರುತ್ತಾರೆ.

ಮಲ್ಲುಖಾನನ ವಾರಿ ಅಥವಾ ಮಲ್ಲುಖಾನನ ಗದಾ ಎಂಬ ತಾತ್ಪೂರ್ತಿಕ ವಾಘ್ಯಾ ಆಗುವ ಆಚರಣೆ ಮಹಾರಾಷ್ಟ್ರೀಯರಲ್ಲಿ ಪ್ರಚಲಿತವಾಗಿದೆ. ನಿಶ್ಚಿತ ಕಾಲದಲ್ಲಿ ಮುಖ್ಯ ದೇವಸ್ಥಾನಕ್ಕೆ ಹೋಗಿ ಬರುವುದು, ದೇವಸ್ಥಾನದಲ್ಲಿ ವಸ್ತಿ ಇದ್ದು ಮಡಿಯಿಂದ ಉಪವಾಸ ಮಾಡುವುದು. ಭಿಕ್ಷೆಯೆತ್ತಿ ಅದನ್ನು ಒಂದು ಹೊತ್ತು ಮಾತ್ರ ಊಟ ಮಾಡುವುದು, ಇವು 'ವಾರಿ' ಅಥವಾ 'ಗದಾ' ಆಚರಣೆಯ ಪ್ರಮುಖ ಅಂಶಗಳು. ತಮ್ಮ ಹರಕೆ ಕೈಗೂಡಲೆಂದು ಇದನ್ನು ಆಚರಿಸುತ್ತಾರೆ. ಕೆಲವೊಮ್ಮೆ ಕೇವಲ ದೇವರ ದರ್ಶನ ಪಡೆದು ಬರಲು ನಿಗದಿ ಪಡಿಸಿದಷ್ಟು ಸಲ ದೊಡ್ಡ ದೇವಾಲಯಕ್ಕೆ ಹೋಗಿ ಬರುವುದೂ ಉಂಟು. ಇದನ್ನು 'ಖೇಟೆ' ಎಂದು ಕರೆಯಲಾಗುತ್ತದೆ. ಇದಲ್ಲದೆ ಸಿಡಿಯಾಡುವುದು, ಕಿಚ್ಚಹಾಯುವುದು ಮುಂತಾದ ಪದ್ಧತಿಗಳೂ ಮೊದಲು ಇದ್ದವು. ಜೆಜೂರಿ ದೇವಸ್ಥಾನದ ಪಾಳಿಯಲ್ಲಿ ಈಗಲೂ ಸಿಡಿಗಂಬ ಇರುವುದನ್ನು ಕಾಣಬಹುದು. ಇಂಥ ಉಗ್ರ ಆಚರಣೆಗಳು ಈಗ ನಿಂತು ಹೋಗಿವೆ.

ಮೇಲೆ ಹೇಳಿದ ರೀತಿ, ದೇವರಿಗೆ, ಭಂಡಾರ ಪೂಜೆ, ದೀವಟಿಗೆ ಸೇವೆ,

ಸರಪಣಿ ಪವಾಡ, ಗಾಯನ-ನರ್ತನ ಸೇವೆ ಮುಂತಾದವು ಪ್ರಚಲಿತವಿರುವುದಲ್ಲದೆ ಹಳದಿ ಹೂವು ಏರಿಸುವುದು, ಬಿಲ್ವ, ಗಂಧ ಮುಂತಾದ ಪರಿಕರದಿಂದ ಪೂಜಿಸುವುದು. ರೋಡಗಾ ಎಂದು ಹೇಳುವ ಗೋದಿಯ ರೊಟ್ಟಿ ಮತ್ತು 'ಹೋಂಬರಾ' ಎಂದು ಕರೆಯಲ್ಪಡುವ ಜೋಳದ ಕಿಚಡಿ ಅರ್ಪಿಸುವುದು ಇತ್ಯಾದಿ ಸೇವೆಗಳೂ ದೇವರಿಗೆ ಸಲ್ಲುತ್ತವೆ. ಹರಕೆಯ ಅಂಗವಾಗಿ ವಾಘ್ಯಾ ಮುರಳಿಯರಾಗುವುದು, ಹೋರಿ, ಕುದುರೆ, ಕುರಿಗಳನ್ನು ಅರ್ಪಿಸುವುದು ಮುಂತಾದ ನಡವಳಿಕೆಗಳೂ ತೋರಿಬರುತ್ತವೆ. ಕೆಲವೆಡೆ ಗುಗ್ಗುಳ ಸೇವೆ ಕೂಡ ನಡೆಯುತ್ತದೆ.

**ಐತಿಹ್ಯ : ಪುರಾಣಗಳು:** ಮಹಾರಾಷ್ಟ್ರದಲ್ಲಿರುವ ಕೆಲವು ಐತಿಹ್ಯಗಳನ್ನು ಸೂಚ್ಯವಾಗಿ ಈಗಾಗಲೇ ತಿಳಿಸಲಾಗಿದೆ. ಖಂಡೋಬಾನ ಅವತಾರ, ಗಂಗಿ ಮಾಳವ್ವನ ಮನೆ, ತಂದೆ ಮತ್ತು ಖಂಡೇರಾಯನ ಜೊತೆಗೆ ನಡೆಯುವ ಅವಳ ಲಗ್ನ, ಬಾಣಾಯಿಯ ಪ್ರೇಮ ಪ್ರಸಂಗ, ಮತ್ತು ಮಣಿಕ-ಮಲ್ಲಾಸುರರ ವಧೆ ಇವು ಮಹಾರಾಷ್ಟ್ರದಲ್ಲಿ ಪ್ರಮುಖವಾಗಿವೆ. ಮಲ್ಲಾರಿ ಮಹಾತ್ಮ್ಯ ಪುರಾಣದಲ್ಲಿ ಮಣಿ-ಮಲ್ಲಾಸುರರ ವಧೆ, ಅದಕ್ಕಾಗಿ ದೇವರ ಅವತಾರ ಮತ್ತು ಘೃತಮಾರಿಯರ ಉತ್ಪತ್ತಿಗಳು ಮಾತ್ರ ಎಡೆ ಪಡೆದಿವೆ. ಕುರುಬರ ಮಾಳವ್ವನ ಪ್ರೇಮ ಪ್ರಸಂಗವೂ ಇತ್ತೀಚಿನ ಮರಾಠಿ ಪುರಾಣಗಳಲ್ಲಿ ಎಡೆ ಪಡೆದಿವೆ. ಕುದುರೆ, ನಾಯಿ, ಲಿಂಗ, ಭಂಡಾರ ಮುಂತಾದ ವಸ್ತುಗಳ ಬಗ್ಗೆ ಉಜ್ವಲೀಕೃತ ಆಖ್ಯಾಯಿಕೆಗಳು ಮಹಾರಾಷ್ಟ್ರದಲ್ಲಿ ಹುಟ್ಟಿಕೊಂಡಿವೆ. ಗ್ರಂಥಸ್ಥ ಕಥೆಗಳಲ್ಲಿ ರಾಕ್ಷಸ ವಧೆಯ ಪ್ರಸಂಗಕ್ಕೆ ಹೆಚ್ಚು ಪ್ರಾಶಸ್ತ್ಯ ಸಂದಿದೆ. ಏಳು ಜನ ಧರ್ಮಪುತ್ರರ ಅಪೇಕ್ಷೆಯ ಮೇರೆಗೆ ಶಿವನು ತನ್ನ ಸೈನ್ಯ ಸಮೇತ ದಂಡೆತ್ತಿ ಬಂದು ಅವರನ್ನು ನಿಗ್ರಹಿಸಿದನೆಂದು ಮಲ್ಲಾರಿ ಮಹಾತ್ಮ್ಯೆ ಹೇಳುತ್ತದೆ. 'ಏಳುಕೋಟಿ' 'ಗಂಗಾ-ಮಾಲಸಿಕಾ' ಮುಂತಾದ ಕನ್ನಡ ಸಮಸ್ತ ಪದಗಳ ಅರ್ಥವನ್ನು ವಿವರಿಸುವಂತೆ ಕಥಾಂಶಗಳು ಅದರಲ್ಲಿ ಸೇರಿಸಲ್ಪಟ್ಟಿವೆ. ಇವೆಲ್ಲ ವಿಸ್ತೃತ ಅಧ್ಯಯನಕ್ಕೆ ಯೋಗ್ಯವಾದ ವಿಷಯಗಳು.

**ಭಕ್ತರು :** ಖಂಡೋಬಾ ದೇವಾಲಯಗಳಲ್ಲಿ ಗುರವ ಜನಾಂಗದವರು ಪೂಜಾರಿಗಳಾಗಿದ್ದಾರೆ. ಬ್ರಾಹ್ಮಣ ಪುರೋಹಿತರು ಅಭಿಷೇಕ ಮತ್ತು ಸಹಸ್ರ ನಾಮ ಪೂಜೆ ಮಾತ್ರ ಮಾಡಿ ಹೋಗುತ್ತಾರೆ. ಇತರೆಲ್ಲ ಕಾರ್ಯಗಳನ್ನು ಗುರವ ಸಮಾಜದವರೇ ನೋಡಿಕೊಳ್ಳುತ್ತಾರೆ. ಕೆಲವು ದೇವಾಲಯಗಳಲ್ಲಿ ಕುರುಬ ಮತ್ತು ಲಿಂಗಾಯತ ಪೂಜಾರಿಗಳೂ ಇದ್ದಾರೆ. ಎಲ್ಲೆಡೆ ಕುರುಬರಿಗೆ ಒಂದಿಲ್ಲೊಂದು ಸೇವಾಕಾರ್ಯ ಲಭ್ಯವಿದೆ. ದೇವಾಲಯ ಪ್ರವೇಶ ವಿಷಯದಲ್ಲಿ ಕರ್ನಾಟಕಕ್ಕಿಂತಲೂ ಹೆಚ್ಚು ಉದಾರ ಧೋರಣೆ ಮಹಾರಾಷ್ಟ್ರದಲ್ಲಿದೆ.

ಭಕ್ತವರ್ಗದಲ್ಲಿ ಕುರುಬರ ತರುವಾಯ ರಾಮೋಶೀ(ಬೇಡ) ಮತ್ತು ಕೋಳಿ

(ಬೆಸ್ತ) ಜನಾಂಗದವರು ವಿಶೇಷವಾಗಿ ಕಂಡು ಬರುತ್ತಾರೆ. ಪಾಲಿಯ ಜಾತ್ರೆಗೆ ರಾಮೋಶಿಗಳು ದೊಡ್ಡ ಸಂಖ್ಯೆಯಲ್ಲಿ ಸೇರುತ್ತಾರೆ. ಜೆಜೂರಿ ಮತ್ತು ಪಾಲಿಗಳಲ್ಲಿ ಕೋಳಿ ಸಮಾಜದವರು ದೊಡ್ಡ ದೊಡ್ಡ ಛತ್ರಗಳನ್ನು ಕಟ್ಟಿಸಿದ್ದಾರೆ. ಕುಲದೇವರೆಂದು ನಡೆದುಕೊಳ್ಳುವ ಇನ್ನೊಂದು ದೊಡ್ಡ ಸಮುದಾಯವೆಂದರೆ ಮರಾಠಾಜನರದು. ಮರಾಠಾ ಛತ್ರಪತಿಗಳು, ಸಾಮಂತರು, ಸರದಾರರು ಮೊದಲಾದವರೆಲ್ಲ ಈಗಲೂ ಈ ದೇವರಿಗೆ ನಡೆದುಕೊಳ್ಳುವ ಕ್ರಮ ಚಾಲ್ತಿಯಲ್ಲಿದೆ. ಕುಣಬಿ, ಮಾಂಗ, ಮಹಾರ ಮುಂತಾದ ಕೆಳಜಾತಿಗಳಲ್ಲಿ ಈ ದೇವರಿಗೆ ನಡೆದುಕೊಳ್ಳುವವರ ಸಂಖ್ಯೆ ಇನ್ನೂ ಹೆಚ್ಚು ವಾಘ್ಯಾ-ಮುರಳಿಯರಾಗುವವರಲ್ಲಿ ಹೆಚ್ಚಿನವರು ಇವರೇ. ಬ್ರಾಹ್ಮಣರಲ್ಲಿ ದೇಶಸ್ಥ ಬ್ರಾಹ್ಮಣರು ಈ ದೇವರಿಗೆ ನಡೆದುಕೊಳ್ಳುವ ದೇವರುಗಳಲ್ಲಿ ಖಂಡೋಬಾ ಸರ್ವಪ್ರಥಮ ಸ್ಥಾನದಲ್ಲಿದ್ದಾನೆಂದು ಸಂಶೋಧಕರು ವರದಿ ಮಾಡಿದ್ದಾರೆ.

ಶಿವಾಜಿಯ ಮಲತಮ್ಮನಾದ ವೆಂಕೋಜಿಯ ಮನೆತನ ತಂಜಾವೂರು ಜಿಂಜಿ ಪ್ರದೇಶಗಳನ್ನು ಆಳುತ್ತಿತ್ತು. ಈ ವೆಂಕೋಜಿಯ ಮಗನಾದ ಶರಭೋಜಿಯು ಜೆಜೂರಿಯಲ್ಲಿ ಸಧ್ಯ ಇರುವ ಒಂದು ಜೋಡಿ ದೇವರ ಮೂರ್ತಿಗಳನ್ನು ಅರ್ಪಿಸಿದ್ದಾನೆ. ನಾರಾಯಣರಾವ ಪೇಶ್ವೆಯ ಕೊಲೆಯ ಸಮಯದಲ್ಲಿ ಅವನ ಪತ್ನಿ ಗಂಗಾಬಾಯಿ ಗರ್ಭಿಣಿಯಾಗಿದ್ದಳು. ಆಗ ಪೇಶ್ವೆ ಆಡಳಿತ ನೋಡಿಕೊಳ್ಳಲು ನಾನಾ ಫಡನಾವೀಸ ಮುಂತಾದ ೧೨ ಜನ ಮಂತ್ರಿಗಳು ಮುಂದಾದರು. ಗಂಗಾಬಾಯಿಯನ್ನು ಜೆಜೂರಿಯ ಸಮೀಪದ ಪುರಂದರಗಡದಲ್ಲಿಟ್ಟು ರಕ್ಷಿಸಿದರು. ಅವಳ ಗರ್ಭದಿಂದ ಪೇಶ್ವೆಯ ಉತ್ತರಾಧಿಕಾರಿ ಸವಾಯಿ ಮಾಧವರಾವ ಹುಟ್ಟಿದಾಗ ನಾನಾ ಫಡನಾವೀಸನು ಜೆಜೂರಿಗೆ ಬಂದು ಹರಕೆ ತೀರಿಸಿದನು. ಒಂದು ಸಾವಿರ ರೂ. ಬೆಲೆಯ ಒಂದು ಮುತ್ತಿನ ಸರ, ಒಂದು ಲಕ್ಷ ರೂಪಾಯಿ ಮತ್ತು ಒಂದು ಮಣ ಭಂಡಾರವನ್ನು ದೇವರಿಗೆ ಅರ್ಪಿಸಿದನು. ಹೋಳ್ಕರ ಮನೆತನದ ಕುಲದೇವರು ಜೆಜೂರಿಯ ಖಂಡೋಬಾ. ಕಾರಣ ಆ ರಾಜನಮೆತನದ ಪ್ರಸಿದ್ಧ ರಾಣಿ ಅಹಲ್ಯಾಬಾಯಿ ಹೋಳ್ಕರ ಜೆಜೂರಿ ದೇವಾಲಯದ ಸುತ್ತಲಿರುವ ಕೋಟೆಯ ಪುನರ್ನಿರ್ಮಾಣ, ನಳದುರ್ಗ ದೇವಾಲಯದ ಜೀರ್ಣೋದ್ಧಾರ, ಪ್ರೇಮಪುರ ದೇವಾಲಯದ ಭವ್ಯ ಮಹಾದ್ವಾರ ನಿರ್ಮಾಣ ಮುಂತಾಗಿ ಅಪರಿಮಿತ ಪುನರುದ್ಧಾರ ಕಾರ್ಯ ಮಾಡಿದ್ದಾಳೆ. ಮಹಾರಾಷ್ಟ್ರದ ಅನೇಕ ಹಿಂದೂ ದೇವಾಲಯಗಳು ಮುಸಲ್ಮಾನರ ಏಳಿಗೆಯ ಅವಧಿಯಲ್ಲಿ ಬಹಳಷ್ಟು ಉಧ್ವಸ್ತಗೊಂಡವು. ಪೂಜಾ ಪುನಸ್ಕಾರಗಳು ನಿಂತು ಹೋದವು. ಆದರೆ ಪಾಲಿ ಮತ್ತು ಜೆಜೂರಿಯ ದೇವಾಲಯಗಳು ಮಾತ್ರ ಯಾವರೀತಿಯಲ್ಲೂ ಹಾನಿಗೊಳಗಾಗದೆ ಹಾಗೇ ಉಳಿದವು. ಮಹಾರಾಷ್ಟ್ರದ ವೀರ ಸಮುದಾಯ ಈ ದೇವಾಲಯಗಳು ಎಳ್ಳಷ್ಟೂ

ಮುಕ್ಕಾಗದಂತೆ ನೋಡಿಕೊಂಡಿವೆ. ಶಿವಾಜಿಯ ಸಮಕಾಲೀನನಾದ ಒಬ್ಬ ಜಾನಪದ ಕವಿ ಮುಸ್ಲಿಮ ದಾಳಿಯನ್ನು ಉಲ್ಲೇಖಿಸುತ್ತ ಹೀಗೆ ಹಾಡಿದ್ದಾನೆ.

**ಖಾನದರ ಮಜಲಿ ಕೂಚಕೇಲಾ ಚಾಲುನಿ**
**ಪಾಲಿ ಕಾರಣೇಗೇಬಾ॥**
**ಪಾಲಿ ಚಾ ಖಂಡೋಬಾ ಅಜಮತ**
**ದಾವಿ ಮೋಗಲಾಲಾ॥**
**ನ್ಹಾಟೋ ನ್ಹಾಟೋ ರೇ ಭಾಯಿ ಬೋಲಿಲಾ**
**ತೀನ ಕೋಸ ಮೋಡಕೇಲಾ॥**
**ದೀಪಮಾಳ ಬಂಧೀಲಿ ದೇವಾಲಾ ಮಗ**
**ಖಾನಾಚ ಭೋಗಪುರಲಾ॥**

ಇದೇ ರೀತಿ ಜೆಜೂರಿಯ ಮೇಲೆ ಕೂಡ ಔರಂಗಜೇಬನ ದಾಳಿ ಬಂದಿತ್ತಂತೆ. ಆಗ ದೇವರು ಅಸಂಖ್ಯ ಗುಂಗೀಹುಳಗಳನ್ನು ಸೃಷ್ಟಿಸಿ ಅವನ ಸೈನ್ಯದ ಮೇಲೆ ಕಳಿಸಿದ್ದರಿಂದ ಮೊಗಲ ಸೈನ್ಯ ಹೆದರಿ ಓಡಿ ಹೋಯಿತಂತೆ. ಈ ಸಂದರ್ಭದಲ್ಲಿ ಔರಂಗಜೇಬನು ದೇವರಿಗೆ ಹರಕೆ ಹೊತ್ತು ಒಂದೂ ಕಾಲ ಲಕ್ಷ ರೂಪಾಯಿ ಬೆಲೆಬಾಳುವ ಚಿನ್ನದ ಗುಂಗೀಹುಳವೊಂದನ್ನು ಮಾಡಿಸಿಕೊಟ್ಟನೆಂದು ಪ್ರತೀತಿ ಇದೆ. ಕುತೂಹಲದ ಅಂಶವೆಂದರೆ ಅಂಥ ಒಂದು ಚಿನ್ನದ ಗುಂಗೀ ಹುಳ ಬಹುದಿನಗಳವರೆಗೆ ಜೆಜೂರಿ ದೇವಾಲಯದಲ್ಲಿ ಇದ್ದ ಬಗ್ಗೆ ದಾಖಲೆಗಳಿವೆ. ಜೆಜೂರಿ, ಪ್ರೇಮಪುರ ಮತ್ತು ಪಾಳಿದೇವಾಲಯಗಳ ವಾಸ್ತು ವೈಭವವನ್ನು ನೋಡಿದರೆ ಮಹಾರಾಷ್ಟ್ರಿಗರ ಶ್ರದ್ಧೆ-ಭಕ್ತಿಗಳ ಬೃಹತ್ತಿನ ಕಲ್ಪನೆ ಬರುತ್ತದೆ.

ಜೆಜೂರಿಯಲ್ಲಿರುವ ಶಾಸನಗಳಲ್ಲಿ ಕ್ರಿ.ಶ. ೧೨೪೬ರಲ್ಲಿ ಕೆತ್ತಿದ ಒಂದು ಜೈನಶಾಸನ ಅತ್ಯಂತ ಹಳೆಯದು. ಇದು ಜೆಜೂರಿಯ ಖಂಡೋಬಾ ಮಂದಿರದ ಹೊರಗಡೆಯಲ್ಲಿ ಕೂಡ್ರಿಸಲ್ಪಟ್ಟಿದೆ. ಧವುಲ್ಲಕನೆಂಬವನು 'ಕಪರ್ದ' ಯಕ್ಷನನ್ನು ಸ್ಥಾಪಿಸಿದ್ದಾಗಿ ಅದರಲ್ಲಿ ಹೇಳಿದೆ. ಜೈನ ಗೃಹಸ್ಥನೊಬ್ಬ ಖಂಡೋಬಾನಿಗೆ ನಡೆದುಕೊಂಡು ತನ್ನ ಭಕ್ತಿಯ ದ್ಯೋತಕವಾಗ ಯಾವುದೋ ಮೂರ್ತಿಯೊಂದನ್ನು ಮಾಡಿಸಿಕೊಟ್ಟಂತೆ ಕಾಣುತ್ತದೆ. 'ಹತ್ತೊಂಬತ್ತನೆಯ ತೀರ್ಥಂಕರ ಮಲ್ಲಿನಾಥ ಅವನ ಯಕ್ಷನ ಹೆಸರು ಕಪರ್ದಿ, ಪ್ರಸ್ತುತ ಧುಲ್ಲಕನು ದೇವರನ್ನು ಜೈನಪರವೆಂದು ಗ್ರಹಿಸಿ ಈ ಹೆಸರಿನ ಮೂರ್ತಿ ಮಾಡಿಸಿಕೊಟ್ಟಂತೆ ತೋರುತ್ತದೆ' ಎಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಇನ್ನೊಂದು ಶಾಸನ ದೇವಸ್ಥಾನದ ಗರ್ಭಗೃಹದಲ್ಲಿದೆ. ಕಾಲ ಕ್ರಿ.ಶ. ೧೩೮೧. ವೀರಪಾಳ ವೀರಮಲ್ಲನೆಂಬ ಭಕ್ತನು ಗರ್ಭಗೃಹ ನಿರ್ಮಿಸಿದ್ದ ಉಲ್ಲೇಖ ಅದರಲ್ಲಿದೆಯಂತೆ.

ಕ್ರಿ.ಶ.೧೨೯೮ ರಲ್ಲಿ ಪೂರ್ಣಗೊಂಡ ಜ್ಞಾನದೇವನ ಜ್ಞಾನೇಶ್ವರಿಯಲ್ಲಿ, ನೇವಾಸೆಯು ಶ್ರೀಮಹಾಲಸಾದೇವಿಯ ಎಂದರೆ ಮ್ಹಾಲಸಾ ದೇವಿಯ ಅನಾದಿ ಕ್ಷೇತ್ರ ಎಂದು ಹೇಳಿದೆ. ಮಹಾನುಭಾವ ಪಂಥದ ಸ್ಥಾಪಕ ಚಕ್ರಧರನ ಜೀವನ ಚರಿತ್ರೆಯನ್ನು ಮಾಹಿಮ ಭಟ್ಟನು ಹದಿಮೂರನೆಯ ಶತಮಾನದ ಕೊನೆಯಲ್ಲಿ (ಸು. ೧೨೮೩ A.D) 'ಲೀಳಾ ಚರಿತ್ರ' ಎಂಬ ಹೆಸರಿನಿಂದ ಬರೆದಿದ್ದಾನೆ. ಇದರ ಎಲ್ಲ ಭಾಗಗಳು ಏಕಕಾಲದಲ್ಲಿ ರಚಿತವಾಗಲಿಲ್ಲವೆಂದು ಮರಾಠಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಗ್ರಂಥ ದೇವಗಿರಿ ಯಾದವರ ಕಾಲದ ಮಹಾರಾಷ್ಟ್ರ ಜನಜೀವನವನ್ನು ಚಿತ್ರಿಸುತ್ತದೆಂದು ಒಪ್ಪಲಾಗಿದೆ. ಎಂದರೆ ೧೩-೧೪ನೆಯ ಶತಮಾನದಲ್ಲಿ ಈ ಗ್ರಂಥ ತನ್ನ ಒಟ್ಟು ಸ್ವರೂಪದಲ್ಲಿ ಸಿದ್ಧಗೊಂಡಿದೆ ಎಂದು ತಿಳಿಯಲಡ್ಡಿಯಿಲ್ಲ. ಇದರಲ್ಲಿ ಚಕ್ರಧರನು ಅಲ್ಲಲ್ಲಿ ಬಿಡಾರ ಮಾಡುತ್ತ, ಪವಾಡ ಮೆರೆಯುತ್ತ, ಅಂದಿನ ಸಮಾಜದಲ್ಲಿ ಬೇರುಬಿಟ್ಟಿದ್ದ ವೈದಿಕ ದೇವರುಗಳ ಪೂಜೆ-ಪುನಸ್ಕಾರ ಜನರ ಆಚಾರ-ವಿಚಾರಗಳನ್ನು ಟೀಕಿಸುತ್ತ ಹೋದಂತೆ ವರ್ಣಿತವಾಗಿದೆ. ಪ್ರಸ್ತುತ ಕೃತಿಯಲ್ಲಿ ಮೈಲಾರ ದೇವರ ಸಂಬಂಧಿಯಾದ ಹಲವು ಉಲ್ಲೇಖಗಳಿರುವುದನ್ನು ವಿದ್ವಾಂಸರು ಗಮನಿಸಿದ್ದಾರೆ. ಬೀಡ ಜಿಲ್ಲೆಯ ಪಾಲಿ, ಔರಂಗಬಾದ ಜಿಲ್ಲೆಯ ಸಾಡೆಗಾಂವ, ಅಹಮ್ಮದ ನಗರ ಜಿಲ್ಲೆಯ ಸೋನಯಿ, ಮತ್ತು ನೇವಾಸೆಗಳು ಮೈಲಾರ ಮತ್ತು ಮಾಳಸಾದೇವಿಯ ಕ್ಷೇತ್ರಗಳೆಂದು ಇದರಲ್ಲಿ ಉಲ್ಲೇಖಗೊಂಡಿವೆ.

ಬಂಗಾಲದ ಪ್ರಸಿದ್ಧ ಸಂತ ಗೌರಾಂಗ ಅಥವಾ ಚೈತನ್ಯಪ್ರಭು ತೀರ್ಥಯಾತ್ರೆ ಮಾಡುತ್ತ ಕ್ರಿ.ಶ. ೧೫೧೦-೧೧ರಲ್ಲಿ ಜೆಜೂರಿಗೆ ಬಂದಿದ್ದಂತೆ ತಿಳಿದು ಬರುತ್ತದೆ. ಕ್ರಿ.ಶ. ೧೫೩೩ ರಿಂದ ೧೫೯೯ರ ಅವಧಿಯಲ್ಲಿದ್ದ ಸಂತ ಏಕನಾಥ ಖಂಡೋಬಾನನ್ನೂ ಅವರ ಸಂಬಂಧಿಯಾದ ಆರಾಧನೆಗಳನ್ನೂ ಬಾರಿ ಬಾರಿ ಉಲ್ಲೇಖಿಸಿದ್ದಾನೆ. ಒಟ್ಟಿನಲ್ಲಿ ದೇವರನ್ನು ಮತ್ತು ಆರಾಧನೆಯನ್ನು ಈ ಸಂತ ಒಪ್ಪಿದ್ದರೂ ಮುರಳಿ ಪದ್ಧತಿಯನ್ನು ಪರೋಕ್ಷವಾಗಿ ಖಂಡಿಸಿದ್ದಾನೆ. ಕ್ರಿ.ಶ.೧೫೫೧ರಿಂದ ೧೬೧೫ರ ಸುಮಾರಿನಲ್ಲಿದ್ದ ಇನ್ನೊಬ್ಬ ಅನುಭಾವಿ, ಸತ ದಾಸೋಪಂತರಿಗೆ ಖಂಡೋಬಾ ಕುಲದೇವರು (ದಾಸೋಪಂತರು ಖಂಡೋಬಾನನ್ನು ತನ್ನ ಕೃತಿಗಳಲ್ಲಿ ಸ್ಮರಿಸಿದ್ದಾಗಿ ತಿಳಿದು ಬರುತ್ತದೆ.

ನೇವಾಸೆಯ ಮಾಳಸಾನಾರಾಯಣಿ ದೇವಿಯ ಪೂಜಾರಿ(ಬಡವೆ)ಗಳಲ್ಲಿ ಹಳೆಯ ಕಾಗದ ಪತ್ರಗಳು ದೊರೆತಿವೆಯಂತೆ. ಅವುಗಳಲ್ಲಿ ಕ್ರಿ.ಶ. ೧೬೨೮ರವರೆಗೆ ದೇವಿಯನ್ನು 'ಶ್ರೀ ಮ್ಹಾಲಸಾದೇವಿ' ಎಂದೇ ಕರೆದಿರುವುದಾಗಿ ತಿಳಿದು ಬರುತ್ತದೆ. ಭಾರಧ್ವಾಜ ಗೋತ್ರದ ರಾಘೋ ಮಂಬಾಜಿ ಎಂಬವನು ಜೆಜೂರಿಯ ಗಡಕೋಟ

ದೇವಾಲಯದ ಸಭಾಮಂಟಪವನ್ನು ದಿನಾಂಕ ೧೨.೬.೩೫ರಂದು ಪ್ರಾರಂಭಿಸಿ ಕ್ರಿ.ಶ. ೧೬೩೭ರಲ್ಲಿ ಪೂರ್ತಿಗೊಳಿಸಿದನೆಂದು ಅಲ್ಲಿನ ಬರಹವೊಂದು ತಿಳಿಸುತ್ತದೆ. ಪ್ರಸಿದ್ಧ ಮರಾಠಾ ಸರದಾರ ಧನಾಜಿ ಜಾಧವನು ಪಾಲಿಯ ದೇವಾಲಯದ ಹೊರಮಂಟಪದಲ್ಲಿ ವಾಸ್ತುಸೇವೆ ಮಾಡಿದ್ದಾನೆ. ಕ್ರಿ.ಶ.೧೭೧೧ರಿಂದ ೧೭೨೭ರ ವರೆಗೆ ಆಳಿದ ವೆಕೋಜಿಯ ಮಗ ಶರಭೋಜಿಯ ಸೇವೆಯನ್ನು ಈಗಾಗಲೇ ಹೇಳಿದೆ. ಹೋಳ್ಕರ ಮನೆತನದ ಪ್ರಸಿದ್ಧರಾಣಿ ಅಹಲ್ಯಬಾಯಿ ಹೋಳ್ಕರ್ (ಕ್ರಿ.ಶ.೧೭೨೫ ರಿಂದ ೧೭೯೫) ಸಲ್ಲಿಸಿದ ಸೇವೆಯನ್ನೂ ಈ ಮುಂಚೆ ತಿಳಿಸಿದೆ. ಹದಿನೇಳನೆಯ ಶತಮಾನದ ಇನ್ನೊಬ್ಬ ಸಂತಕವಿ ರಾಮದಾಸರು ಖಂಡೋಬಾನನ್ನು ಪದೇ ಪದೇ ಸ್ತುತಿಸಿದ್ದಾರೆ. ಮೊಗಲರ ದಾಳಿಯಾದಾಗ ದೇವರು ಗುಂಗೀ ಹುಳುಗಳನ್ನು ಸೃಷ್ಟಿಸಿದನೆಂಬ ಐತಿಹ್ಯ ಅವರ ಒಂದು ಪದ್ಯದಲ್ಲಿ ಉಕ್ತವಾಗಿದೆ. ರಾಮದಾಸರು ಖಂಡೇರಾಯನನ್ನು ಕುರಿತು ಒಂದು ಆರತಿ ಹಾಡನ್ನು ಕೂಡ ರಚಿಸಿದ್ದಾರೆ. ೧೯ನೆಯ ಶತಮಾನದ ಪ್ರಸಿದ್ಧ ಅನುಭಾವಿ 'ಮಾಣಿಕಪ್ರಭು' ಸಕಲ ಮತಾಚಾರ್ಯರೆಂದು ಹೆಸರಾದವರು. ಇವರೂ ಒಂದು 'ಮಲ್ಲಾರಿ ಮಹಾತ್ಮ್ಯ' ರಚಿಸಿದ್ದಾಗಿ ತಿಳಿದು ಬರುತ್ತದೆ.

ಹದಿಮೂರನೆಯ ಶತಮಾನದಿಂದ ಮಹಾರಾಷ್ಟ್ರದಲ್ಲಿ ಖಚಿತ ಉಲ್ಲೇಖಗಳು ಲಭ್ಯವಾಗಿವೆ ಮತ್ತು ಹದಿನೇಳನೆಯ ಶತಮಾನದಿಂದ ಜೆಜೂರಿ ಮತ್ತು ಪಾಲಿಗಳಲ್ಲಿ ಅಸಂಖ್ಯ ಶಾಸನಗಳು ಹುಟ್ಟಿಕೊಂಡಿವೆ. ಸಧ್ಯಕ್ಕೆ ಹದಿಮೂರನೆಯ ಶತಮಾನದಷ್ಟೊತ್ತಿಗೆ ಮೈಲಾರಲಿಂಗ–ಮಾಳಸಾದೇವಿಯರ ಆರಾಧನೆ, ಮಹಾರಾಷ್ಟ್ರದ ವಿದರ್ಭದ ವರೆಗೆ ವ್ಯಾಪಿಸಿತ್ತೆಂದು ತಿಳಿಯಲು ಸ್ಪಷ್ಟ ಆಧಾರಗಳಿವೆ ಎಂದು ಹೇಳಿದರೆ ಸಾಕೆಂದು ಕಾಣುತ್ತದೆ.

ಜಾನಪದ ಸ್ತರದಿಂದ ಪೌರಾಣಿಕ ಸ್ತರಕ್ಕೆ ಈ ದೇವರನ್ನು ಏರಿಸಿದ್ದು ಮಹಾರಾಷ್ಟ್ರವೇ ಎಂದು ಮಹಾರಾಷ್ಟ್ರದ ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯವನ್ನು ಒಪ್ಪಬಹುದಾಗಿದೆ. ಮರಾಠಿ ಮತ್ತು ಸಂಸ್ಕೃತ ಭಾಷೆಯಲ್ಲಿ ಈ ದೇವರ ಸಂಬಂಧಿಯಾಗಿ ಹುಟ್ಟಿಕೊಂಡಿರುವ ಭಕ್ತಿ ಸಾಹಿತ್ಯ, ವೈವಿಧ್ಯ ಮತ್ತು ಪ್ರಮಾಣ ದೃಷ್ಟಿಯಿಂದ ತುಂಬ ಗಮನಾರ್ಹವಾಗಿದೆ. ವಾರಕರಿ ಮತ್ತು ದತ್ತ ಪಂಥದ ಅನೇಕ ಸಂತ ಕವಿಗಳು ಮೈಲಾರ ದೇವರನ್ನು ನಾನಾ ಬಗೆಯಾಗಿ ಸ್ತುತಿಸಿದ್ದಾರೆ. ಶೇಖ ಮಹಮ್ಮದ ಶ್ರೀಗೋಂದೇಕರರಂಥ(ಅದ್ವೈತಿ) ಒಬ್ಬಿಬ್ಬರು ಮಾತ್ರ ಅಪವಾದಾತ್ಮಕ ವಾಗಿದ್ದಾರೆ.

ಕರ್ನಾಟಕದ ಮೈಲಾರದೇವರು ಮಹಾರಾಷ್ಟ್ರದ ಖಂಡೋಬಾ ಆಗಿ ಪರಿವರ್ತನೆಯಾದ ಇತಿಹಾಸವನ್ನು ಡಾ. ನೇಗಿನಹಾಳ ಅವರು ಅನೇಕ ಆಧಾರಗಳ

ಮೂಲಕ ತೋರಿಸಿಕೊಟ್ಟಿದ್ದಾರೆ. ಪೇಂಬೆರ ಎಂಬುದು ಪ್ರೇಮಪುರವೆಂದೂ ಅದೇ ಮೈಲಾರನ ಕ್ಷೇತ್ರವೆಂದೂ ಸಿದ್ಧಪಡಿಸಿದ್ದಾರೆ. ಖಂಡೋಬಾ : ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನವು ದೊರೆಯಿತು. ಇದರಿಂದ ಡಾ. ನೇಗಿನಹಾಳರ ವಿದ್ವತ್ತು ಇಡೀ ನಾಡಿಗೆ ಪರಿಚಿತವಾಯಿತು.

■■

# ಕನ್ನಡ ನಾಮ ವಿಜ್ಞಾನ ಚಿಂತನೆ

ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಅಧ್ಯಯನ ಪಾಶ್ಚಾತ್ಯರಲ್ಲಿ ಈಗಾಗಲೇ ಸಾಕಷ್ಟು ಪ್ರಗತಿ ಸಾಧಿಸಿದೆ. ಚರಿತ್ರೆಯಲ್ಲಿ ಕಳೆದು ಹೋದ ಹಲವಾರು ವಿಷಯಗಳನ್ನು ಅಥವಾ ಅಧ್ಯಾಯಗಳನ್ನು ತುಂಬಿಕೊಳ್ಳಲು ಈ ನಾಮಗಳ ಅಧ್ಯಯನ ಕೂಡ ಸಾಕಷ್ಟು ಹೊಸ ವಿಷಯಗಳನ್ನು ಒದಗಿಸುತ್ತದೆ. ಇಂಗ್ಲೆಂಡಿನಲ್ಲಿ ಈಗಿರುವ 'ಅಂಗ್ಲೋಸ್ಯಾಕ್ಸನ್' ಜನಾಂಗಕ್ಕಿಂತ ಪೂರ್ವದಲ್ಲಿ 'ಕೆಲ್ಟ್' ಎಂಬ ಪಂಗಡ ವಾಸವಾಗಿತ್ತೆಂಬ ಅಂಶಕ್ಕೆ ದೊರೆಯುವ ಸ್ಥಳನಾಮಗಳೇ ಆಧಾರವೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಖಚಿತವಾದ ಇತರ ಚಾರಿತ್ರಿಕ ದಾಖಲೆಗಳು ಇಲ್ಲದಿರುವ ಸಂದರ್ಭದಲ್ಲಿ ಈ ಸ್ಥಳನಾಮ–ವ್ಯಕ್ತಿನಾಮಗಳಿಂದ ಅಪೂರ್ವ ಮಾಹಿತಿ ಪಡೆಯಬಹುದಾಗಿದೆ.

ಆರ್ಯರಂತೆ ದ್ರಾವಿಡರೂ ಕೂಡ ಆರ್ಯರಿಗಿಂತಲೂ ಪೂರ್ವದಲ್ಲಿ ಹೊರಗಿನಿಂದಲೆ ಭಾರತಕ್ಕೆ ಬಂದರೆಂದು ಹೇಳುವಲ್ಲಿ ಈ ಅಧ್ಯಯನದಿಂದ ಆಧಾರಗಳು ಲಭ್ಯವಾಗಿವೆ. ಯುರೋಪಿನ ಭಾಷಿಕ ನಡುಗಡ್ಡೆಯೆಂದು ಪ್ರಸಿದ್ಧವಾಗಿರುವ 'ಭಾಸ್ಕ' ಭಾಷೆಯಲ್ಲಿ ಸ್ಥಳನಾಮಗಳ ಅಂತ್ಯ–ಉರ್ ಇತ್ಯಾದಿ ರೂಪುಗಳು ಕಂಡು ಬಂದಿವೆ. ಇಂಥ ಅಂಶಗಳನ್ನು ವಿವರವಾಗಿ ಅಧ್ಯಯನ ಮಾಡಿದ 'ಲಾಹೋವರಿ' ಎಂಬ ವಿದ್ವಾಂಸರು 'ಭಾಸ್ಕ' ಭಾಷೆ ದ್ರಾವಿಡ ಮೂಲದ್ದೆಂದು ಭಾವಿಸಿದ್ದಾರೆ. ಅದೇ ರೀತಿ ಪರ್ಶಿಯಾದ ದ್ವೀಪಕಲ್ಪದಲ್ಲಿ ದ್ರಾವಿಡ ಸ್ಥಳನಾಮಗಳಿವೆ ಎಂಬ ಅಂಶಗವನ್ನು ಎಲ್.ವ್ಹಿ. ರಾಮಸ್ವಾಮಿ ಅಯ್ಯರ್ ಅವರು ಎತ್ತಿ ತೋರಿಸಿದ್ದಾರೆ. ಆದ್ದರಿಂದ ಸ್ಥಳನಾಮಗಳ ಜಾಡನ್ನು ಹಿಡಿದು ಪೂರ್ವಚರಿತ್ರೆಯನ್ನು ರಚಿಸಬಹುದಾಗಿದೆ ಎಂಬ ಅಂಶ ಮನದಟ್ಟಾಗಿರುತ್ತದೆ.

ಕರ್ನಾಟಕಕ್ಕೆ ಸಂಬಂಧಪಟ್ಟಂತೆ ನಾಮಗಳ ಅಧ್ಯಯನ ಕ್ಷೇತ್ರದಲ್ಲಿ ಕೆಲಸ ಮಾಡಿದವರು ಕೇವಲ ಮೂರೇ ಮೂರು ಜನ. ಮೊದಲಿನವರು ಡಾ. ಶಂಬಾ ಜೋಶಿ, ಎರಡನೆಯವರು ಡಾ. ಎಂ. ಎಂ. ಕಲಬುರ್ಗಿ ಮತ್ತು ಮೂರನೆಯವರು ಡಾ. ಎಂ.ಬಿ. ನೇಗಿನಹಾಳ ಅವರು. ಹೀಗೆ ಹೇಳಿದರೆ ಅತಿಶಯೋಕ್ತಿಯೇನೂ ಇಲ್ಲ. ಡಾ. ಶಂಬಾ ಅವರು ಮಹಾರಾಷ್ಟ್ರದ ಚಿಂತಕರು ನಡೆಸುತ್ತ ಚರ್ಚೆ

ಪರಿಚರ್ಚೆಗಳನ್ನು ಅವರು ಗಮನಿಸಿದರು. ಅಲ್ಲದೆ ಅಂತಹ ಚರ್ಚೆಗಳಲ್ಲಿ ಭಾಗವಹಿಸಿದ್ದರು. ಸ್ಥಳವಾಚಕದ ಜೊತೆಗೆ ಮೈಲಾರ-ಖಂಡೋಬಾ, ಹೆಗ್ಗಡೆ ಮುಂತಾದ ಕೆಲವು ದೇವತಾ ವಾಚಕಗಳ ವಿಷಯದಲ್ಲೂ ಡಾ. ಶಂಬಾ ಅವರು ತಮ್ಮ ಅಭಿಪ್ರಾಯ ಮಂಡಿಸಿದ್ದರು. ಆದರೆ ಕರ್ನಾಟಕದ ಇತರ ವಿದ್ವಾಂಸರು ಈ ಅವಧಿಯಲ್ಲಿ ಈ ಕ್ಷೇತ್ರದತ್ತ ಹೆಚ್ಚು ಗಮನ ಹರಿಸಲಿಲ್ಲ.

ಶಾಸನಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ವಿದ್ವಾಂಸರು ಮಾತ್ರ ಸ್ಥಳನಾಮ-ವ್ಯಕ್ತಿನಾಮಗಳ ಚರ್ಚೆಯನ್ನು ಆಗೀಗ ಮಾಡುತ್ತಿದ್ದುದು ಕಂಡುಬರುತ್ತದೆ. ಈ ವಿದ್ವಾಂಸರಿಗೆ ಗ್ರಾಮನಾಮಗಳನ್ನು ಮತ್ತು ವ್ಯಕ್ತಿನಾಮಗಳನ್ನು ಸರಿಯಾಗಿ ಗುರಿತಿಸಬೇಕಾದುದು ಅನಿವಾರ್ಯವಾಗಿತ್ತೆಂದೇ ಶಾಸನಾಧ್ಯಯನ ಕ್ಷೇತ್ರದಲ್ಲಿ ಇಂತಹ ಚರ್ಚೆಗಳನ್ನು ಅಲ್ಲಲ್ಲಿ ಮಾಡುತ್ತ ಬಂದಿದ್ದಾರೆ. ಜೆ.ಎಫ್. ಫ್ಲೀಟ್, ಬಿ.ಎಲ್. ರೈಸ್ ಮುಂತಾದ ವಿದೇಶಿಯರ ಜೊತೆಗೆ ಆರ್. ನರಸಿಂಹಾಚಾರ್, ನೆಲಮಂಗಲ ಲಕ್ಷ್ಮಿ ನಾರಾಯಣರಾಯರು, ಪಂಚಮುಖಿಯವರು, ಪಿ.ಬಿ. ದೇಸಾಯಿ ಮೊದಲಾದವರು. ಹಲವಾರು ಗ್ರಾಮನಾಮ, ವ್ಯಕ್ತಿನಾಮಗಳ ಬಗ್ಗೆ ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ. ಕಿಸುವೊಳಲು, ವೇಣುಗ್ರಾಮ ಕಿರುಕುಪ್ಪಟೂರು, ಬಾದಾಮಿ, ಮಹಾಕೂಟ ಇತ್ಯಾದಿ ಸ್ಥಳನಾಮಗಳ ಬಗ್ಗೆ ಫ್ಲೀಟ್‌ರಂಥ ವಿದ್ವಾಂಸರು ಆಗೀಗ ವಿಚಾರಮಾಡಿದ್ದುಂಟು.

ಈ ಹಿನ್ನೆಲೆಯಲ್ಲಿ ಡಾ. ಎಂ.ಬಿ. ನೇಗಿನಹಾಳರು ಕೂಡ ಅನೇಕ ಸ್ಥಳನಾಮಗಳ ಅಧ್ಯಯನ ಮಾಡಿ ಹೊಸ ಬೆಳಕು ಚೆಲ್ಲಿದ್ದಾರೆ.ಕಿತ್ತೂರು ಚೆನ್ನಮ್ಮನ ಕುರಿತಾದ ಒಂದು ವ್ಯಕ್ತಿನಾಮ ಅಧ್ಯಯನ ಹೀಗಿದೆ:

ಕಿತ್ತೂರ ಚೆನ್ನಮ್ಮ ರಾಣಿಯ ಹೆಸರು ಈಗ ಕರ್ನಾಟಕದ ತುಂಬ ಪರಿಚಿತವಾಗಿದೆ. ಕಿತ್ತೂರ ಮನೆತನದ ಮತ ಲಿಂಗಾಯತವೆಂಬುದು ಎಲ್ಲರಿಗೂ ಗೊತ್ತು. ಆದರೆ ಸ್ವತಃ ಕಿತ್ತೂರ ರಾಣಿ ಚೆನ್ನಮ್ಮನ ತವರು ಮನೆ ಎಂದರೆ ಕಾಕತಿಯ ದೇಸಾಯರ ಮನೆತನ ಜೈನ ಧರ್ಮಾವಲಂಬಿಯಾಗಿತ್ತು. ಇದನ್ನು ಪೋಷಿಸುವ ಅಂಶವೆಂದರೆ ಚೆನ್ನಮ್ಮನ ತಾಯಿಯ ಹೆಸರು 'ಪದ್ಮಾವತಿ' ಎಂಬುದು. ನನ್ನ ಕ್ಷೇತ್ರಕಾರ್ಯದಲ್ಲಿ ಈ ಅಂಶ ದೃಢಪಟ್ಟಿದೆ. ಇದೇ ರೀತಿ ಬೆಳಗಾವಿ ಜಿಲ್ಲೆಯ ಅನೇಕ ಮನೆತನಗಳಲ್ಲಿ ಮಗೆಪ್ಪ, ಮಗಯ್ಯ, ಮಗೆವ್ವ ಇತ್ಯಾದಿ ವ್ಯಕ್ತಿವಾಚಕಗಳು ಈಗಲೂ ದೊರೆಯುತ್ತವೆ. ಇಂತಹ ವ್ಯಕ್ತಿವಾಚಕಗಳು ದೊರೆಯಲು ಮಗಿಯ ಪ್ರಭುಗಳು ಎಂಬ ಸ್ವಾಮಿಗಳೇ ಕಾರಣ. ಈ ಸ್ವಾಮಿಗಳು ಲಿಂಗಾಯತರೆಂದು ಈಗ ತಿಳಿಯಲಾಗುತ್ತದೆ. ಆದರೆ ವಾಸ್ತವದಲ್ಲಿ ಇವರು ನಾಥಪಂಥೀಯರಾಗಿದ್ದರೆಂದು ಹೇಳಬೇಕಾಗುತ್ತದೆ. 'ಮಗಿ' ಅಥವಾ ಹಂಡಿ ಎಂದರೆ ಮಣ್ಣಿನ ಪಾತ್ರೆ, ಇಂತಹ ಮಣ್ಣಿನ ಪಾತ್ರೆ ನಾಥ ಪಂಥೀಯರ ಸಂಕೇತಗಳಲ್ಲಿ ಒಂದು. (ನೇಗಿನಹಾಳ ಪ್ರಬಂಧಗಳು ಪು. ೨೪೩)

ಡಾ. ಡಿ.ಎಲ್.ಎನ್. ತಮ್ಮದೊಂದು ಲೇಖನದಲ್ಲಿ 'ಇಸಿಲ' ಎಂಬ ಸ್ಥಳವಾಚಕ ಅಶೋಕನ ಬ್ರಹ್ಮಗಿರಿ ಮುಂತಾದ ಶಾಸನಗಳಲ್ಲಿ ಬಂದಿರುವುದನ್ನು ಎತ್ತಿ ತೋರಿಸಿ ಅದೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಾರುವ ಮೊದಲ ಶಬ್ದವೆಂದು ಹೇಳಿದ್ದಾರೆ.

ಅಂತೆಯೇ ಈ ಸ್ಥಳವಾಚಕ/ವ್ಯಕ್ತಿವಾಚಕಗಳ ಬಲದಿಂದ ಹಲವಾರು ನೈಜಸಂಗತಿಗಳನ್ನು ತಿಳಿಯುವುದು ಸಾಧ್ಯ ಎಂಬುದು ಡಾ. ನೇಗಿನಹಾಳ ಅವರ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಆಳವಾಗಿ ಅಧ್ಯಯನ ಮಾಡುತ್ತ ಹೋದ ಅವರಿಗೆ ಅನೇಕ ಹೊಸ ಅಂಶಗಳು ದೊರೆತವು. ಉದಾಃ ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿ ದೊರೆಯುವ ಶಾತವಾಹನ ರಾಜರ ಹೆಸರುಗಳಲ್ಲಿ ಗೌತಮಿಪುತ್ರ, ವಾಶಿಷ್ಠೀಪುತ್ರ, ಮಾಢರೀಪುತ್ರ ಎಂದು ತಪ್ಪದೆ ತಾಯಂದಿರ ಹೆಸರನ್ನು ಹೇಳುವ ಪದ್ಧತಿ ಕಂಡುಬರುತ್ತದೆ. ಆಗಿನ ಕಾಲದ ಇತರ ರಾಜಮನೆತನಗಳಲ್ಲಿ ತಾಯಿಯ ಹೆಸರಿಗೆ ಪ್ರಾಧಾನ್ಯವಿಯುವುದು ಕ್ವಚಿತ್ತಾಗಿ ಕಂಡುಬರುತ್ತದೆ. ಸಮುದ್ರಗುಪ್ತನ ತಾಯಿ 'ಲಿಚ್ಛವಿ' ಮನೆತನದವಳು, ಗಂಗದೊರೆ ದುರ್ವಿನೀತನ ತಾಯಿ 'ಪುನ್ನಾಟ' ಮನೆತನದವಳು ಎಂಬಂಥ ಅಂಶಗಳು ಕ್ವಚಿತ್ತಾಗಿ ಕಂಡುಬಂದಿವೆ. ಶಾತವಾಹನರಲ್ಲಿ ತಪ್ಪದೇ ತಾಯಂದಿರ ಹೆಸರನ್ನು ಹೇಳಿಕೊಳ್ಳುವ ಪದ್ಧತಿಯಿದೆ. ಆದ್ದರಿಂದ ಶಾತವಾಹನರು ಮಾತೃಪ್ರಧಾನ ಕುಟುಂಬದವರರಾಗಿದ್ದರು ಎಂದು ತಿಳಿಯುವುದು ಸೂಕ್ತವೆ ಆಗಿದೆ. ಇದೇ ರೀತಿ ಸನ್ನತಿಯ ಶಾಸನಗಳಲ್ಲಿ ಕಂಡು ಬರುವ ಮೂಡಾಣ ಮುನಾಳಿ ಎಂಬಂಥ ಸ್ಥಳವಾಚಕಗಳು ಮತ್ತು ಟಾಲೇಮಿ, ಪೆರಿಪ್ಲಸ್ ಲೇಖನಗಳಲ್ಲಿ ತೋರುವ ಬೈಜಂಥಿಯ, ಬದಿಯಾಮೊಯಿ ಮೊದಲಾದ ಸ್ಥಳವಾಚಕಗಳು ಗಮನಾರ್ಹವಾಗಿವೆ.

ಹುಟ್ಟಿದ ಮಕ್ಕಳು ತಾಳದಿದ್ದಾಗ ಅವುಗಳಿಗೆ ಹೀನಾರ್ಥಸೂಚಕ ಹೆಸರುಗಳನ್ನಿಡುವ ಒಂದು ದೊಡ್ಡ ಪರಂಪರೆ ನಮ್ಮಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಪುಲಕೇಶಿಯ ಹೆಸರನ್ನೆ ತೆಗೆದುಕೊಳ್ಳಬಹುದು. ಈ ಹೆಸರಿನ ಮೂಲ ರೂಪ 'ಪೊಲೆ+ಕೇಶಿ' ಎಂದು. 'ಪೊಲೆ' ಎಂಬ ಹೆಸರು ಅನೇಕ ವ್ಯಕ್ತಿಗಳಿಗೆ ಇದ್ದುದನ್ನು ಶಾಸನಗಳಿಂದ ಗುರುತಿಸಬಹುದು. ಇದೇ ರೀತಿ ಕಲ್ಲ, ಗುಂಡ, ದುಂಡ, ತಿಪ್ಪ, ಮಾಚ, ಕೇತ, ಹುಚ್ಚ ಮೊದಲಾದ ಹೆಸರುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಂಥ ಅನಿಷ್ಟ ಸೂಚಕಗಳ ಜೊತೆಗೆ ಅಚ್ಚಕನ್ನಡದ ಮುದಾದ ಹೆಸರುಗಳು ಕೂಡ ಬೇಕಾದಷ್ಟು ಇದ್ದುವು. ಕಂಪ, ಚೆನ್ನ, ಹೊನ್ನ, ಕುಡಿಮುದ್ದ, ಇರಿವಬೆಡಂಗ..ಇತ್ಯಾದಿ ಹೆಸರುಗಳು ಕರ್ನಾಟಕದ ಚರಿತ್ರೆಯಲ್ಲಿ ಬೇಕಾದಷ್ಟು ಕಂಡು ಬರುತ್ತವೆ.

ಕಾವೇರಿ ಕುರಿತಾದ ಡಾ. ನೇಗಿನಹಾಳ ಅವರ ನಿಷ್ಪತ್ತಿ ಹೀಗಿದೆ: ಕಾವೇರಿ ಎಂಬ ನದೀವಾಚಕ ಕರ್ನಾಟಕದ, ವಿಶೇಷವಾಗಿ ಕೊಡಗಿನ ಸ್ತ್ರೀವಾಚಕಗಳಲ್ಲಿ

ಬಹುಜನಪ್ರಿಯವಾದುದು. ಇದರ ಮೂಲ 'ಕಾವ'(<ಕಾಪ್ಪು)+ಏರಿ>ಕಾವೇರಿ ಎಂದು ಹೇಳಬಹುದು. ಇಲ್ಲಿ ಪೂರ್ವಪದ ಕಾಪ್ಪವೆಂದರೆ ರಕ್ಷಿಸುವ–ಕಾಪಾಡುವ ಅರ್ಥಾತ್ ಪವಿತ್ರವಾದ ಅಥವಾ ದಿವ್ಯವಾದ 'ಏರಿ' ಎಂದರೆ ಬೆಟ್ಟದ ಸ್ಥಳ ಎಂದು ಅರ್ಥ ಹೇಳಬಹುದು. ಏರಿ ಎಂಬ ಉತ್ತರ ಪದ 'ಏರು' ಎಂದೂ ಇರಬಹುದು. ಏರು ಅಂದರೆ ನೀರಿನ ಬುಗ್ಗೆ ಅಥವಾ ಜಲಾಶಯವಿರುವ ಸ್ಥಳ ಎಂಬರ್ಥ. ಆದರೆ ಕವೇರನೆಂಬ ಋಷಿಯ ಮಗಳು ಕಾವೇರಿ ಎಂದು ಕಲ್ಪಿತ ನಿಷ್ಪತ್ತಿಯನ್ನು ಹೇಳಲಾಗುತ್ತದೆ. ಇಂಥ ನಿಷ್ಪತ್ತಿಗಳಿಂದ ಏನನ್ನೂ ಸಾಧಿಸಲಾಗುವುದಿಲ್ಲ, ಬದಲು ನೈಜಸ್ಥಿತಿಯನ್ನೂ ಸಂಸ್ಕೃತಿಯನ್ನೂ ತಿರುಚಿದಂತಾಗುತ್ತದೆ. ಇದಕ್ಕೆ ಇನ್ನೊಂದು ಉದಾಹರಣೆ ಕೊಡಬಹುದು : ಬೆಳಗಾವಿ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಹರಿಯುವ ಮಲಪ್ರಭೆ ಎಂಬ ನದಿಯ ಹೆಸರು ಮಲ+ಪ್ರಭೆ ಎಂದರೆ ಎಂತಹ ಅಪದ್ಧತನ? ಇಂಥ ಹೆಸರನ್ನು ಯಾರಾದರೂ ಇಡಬಹುದೆ? ಇದು ಸಂಪೂರ್ಣ ತಪ್ಪು. ಇದರ ಮೂಲರೂಪ ಮಲೆಯ ಪರಿ ಎಂದರೆ ಮಲೆಗಳಲ್ಲಿ ಹುಟ್ಟಿ ಬೆಳ್ವಲದಲ್ಲಿ ಹರಿಯುವ ಹೊಳೆ ಎಂದರ್ಥ. ಇದೇ ರೀತಿ ಗೋದಾ+ವರಿ ಎಂಬುದು ಕೂಡ ಗೋದ+ಪರಿ ಗೋದಾವರಿ ಎಂದಾಗಿದೆ. ಗೋದ ಎಂದರೆ 'ಗೋವಿನ' ಅಥವಾ 'ಕೋವಿನ' (ಎಂದರೆ ದೇವರ) ಎಂದು ಅರ್ಥ ಹೇಳಬಹುದು. ಇದೇ ರೀತಿ ನಮ್ಮ ನಾಡಿನ ನದಿಗಳ ಹೆಸರುಗಳನ್ನು ವಿಮರ್ಶಿಸುವುದು ತುಂಬ ಆವಶ್ಯಕವಿದೆ.

ನಮ್ಮಲ್ಲಿ ಇಂಥ ಹಲವಾರು ನಾಮಗಳ ಚರ್ಚೆ ಆಗೀಗ ನಡೆಯುತ್ತ ಬಂದಿದೆ. ಪಂಪ, ಪುಲಕೇಶಿ ಎಂಬಂಥ ಪುರುಷರ ಹೆಸರುಗಳ ಜೊತೆಗೆ ಕಪ್ಪೆ ಅರಭಟ್ಟ, ಅಲ್ಲಮ, ಅಬ್ಬಣಬ್ಬೆ, ಮಧ್ವಾಚಾರ್ಯ ಎಂಬ ಹೆಸರುಗಳಲ್ಲದೆ ಮೈಲಾರ, ಖಂಡೋಬಾ, ಎಲ್ಲಮ್ಮ, ಗೋಕರ್ಣ, ಬಾದುಬ್ಬೆ, ಭಲಾರಿ, ಬನದಬ್ಬೆ, ಚುಂಚ, ಜುಂಜಪ್ಪ, ಮಲ್ಲಿಕಾರ್ಜುನ ಇತ್ಯಾದಿ ದೇವರುಗಳ ಹೆಸರಿನ ಚರ್ಚೆಯೂ ಆಗೀಗ ನಡೆಯುತ್ತಾ ಬಂದಿದೆ. ಈ ದೇವತಾ ವಾಚಕಗಳನ್ನು ಸರಿಯಾಗಿ ವಿಶ್ಲೇಷಿಸುವುದು ಸಾಧ್ಯವಾದರೆ ನಮ್ಮ ಸಂಸ್ಕೃತಿಯ ಚಿತ್ರಣ ಹೆಚ್ಚು ಸ್ಪಷ್ಟವಾಗಲೂ ಸಾಧ್ಯ.

ಡಾ. ನೇಗಿನಹಾಳ ಅವರು ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿಯ (ವ್ಯಕ್ತಿ)ನಾಮಗಳು–೧, ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿಯ ವ್ಯಕ್ತಿನಾಮಗಳು–೨, ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿಯ ವ್ಯಕ್ತಿನಾಮಗಳು–೩ ಎಂಬ ಮೂರು ಮಹತ್ವದ ಲೇಖನಗಳನ್ನು ಬರೆದಿದ್ದಾರೆ.

ಕರ್ನಾಟಕದಲ್ಲಿ ಸು. ೧೦೫ರಷ್ಟು ಪ್ರಾಕೃತಶಾಸನಗಳು ಪತ್ತೆಯಾಗಿವೆ. ಸನ್ನತಿ, ಬೆಳ್ವಾಡಗಿ, ಚಿಕ್ಕಸಿಂದಗಿ, ನಿಟ್ಟೂರು, ಉದೊಗೋಳ, ಮಸ್ಕಿ, ಕೊಪ್ಪಳ, ಹುರುಸುಗುಂದಿ, ಹಂಪಿ, ಬೆಳಗಾವಿ, ಬನವಾಸಿ, ವಾಸನ, ಚಂದ್ರವಳ್ಳಿ, ಮಳವಳ್ಳಿ, ಸಿದ್ದಾಪುರ,

ಬ್ರಹ್ಮಗಿರಿ, ಜಟಿಂಗ, ರಾಮೇಶ್ವರ, ಹಿರೇಮಗಳೂರು ಈ ಮೊದಲಾದ ಊರುಗಳಲ್ಲಿ ಇವು ದೊರೆತಿದ್ದು, ಸನ್ನತಿ ಪರಿಸರದಲ್ಲಿ ಇನ್ನೂ ಇಂಥ ಬರಹಗಳು ಪತ್ತೆಯಾಗುತ್ತಿವೆ.

ಉತ್ತರದ ಗುಪ್ತರು ಮಧ್ಯದ ವಾಕಾಟಕರಂತೆ–ಕರ್ನಾಟಕದ ಕದಂಬರೂ ಪ್ರಾಕೃತಭಾಷೆಯನ್ನು ನಿರಾಕರಿಸಿದರು. ಅವರು ಸಂಸ್ಕೃತವನ್ನು ಎತ್ತಿ ಹಿಡಿದದ್ದಲ್ಲದೆ ಕನ್ನಡಕ್ಕೂ ತಮ್ಮ ಆಡಳಿತದಲ್ಲಿ ದ್ವಿತೀಯ ರಾಜಭಾಷೆಯ ಸ್ಥಾನವಿತ್ತು. ಹಲ್ಮಿಡಿ ಶಾಸನ ಪೂರ್ವದ ಶಾಸನಗಳೆಂದರೆ ಬಹುತೇಕ ಪ್ರಾಕೃತ ಶಾಸನಗಳು ಮಾತ್ರ, ಇವುಗಳಲ್ಲಿ ಕೆಲವು ಚೂರು–ಪಾರು ಕನ್ನಡ ಅವಶೇಷಗಳು ಕಂಡುಬಂದಿವೆ. ಇಂಥ ಅಂಶಗಳನ್ನು ಕುರಿತು ಡಾ. ನೇಗಿನಹಾಳ ಅವರು ಚರ್ಚಿಸಿದ್ದಾರೆ.

ಪ್ರಾಕೃತ ಶಾಸನಗಳಲ್ಲಿ ದೊರೆಯುವ ವ್ಯಕ್ತಿನಾಮಸಾಮಗ್ರಿಯನ್ನು ಈ ರೀತಿ ವರ್ಗೀಕರಿಸಿದ್ದಾರೆ: ವ್ಯಕ್ತಿನಾಮಗಳು–ಪೂರ್ವ ವಿಶೇಷಣರೂಪ, ಉತ್ತರ ನಿಜರೂಪ, ಪ್ರದೇಶ ಸೂಚಿ, ಸಂಬಂಧ ಸೂಚಿ, ವೃತ್ತಿ–ಜಾತಿ ಸೂಚಿ– ಊರು–ನಾಡು–ರಾಜ್ಯ, ದೇವತಾ–ಗೋತ್ರ–ಕುಲ–ಕುಟುಂಬ, ರಾಜ್ಯಾಧಿಕಾರ–ಆಡಳಿತ, ಇತರ ವೃತ್ತಿ–ಜಾತಿ ಹೀಗೆ ವಿಭಾಗಿಸಿ ಅಲ್ಲಿ ಬರುವ ಕನ್ನಡ ಪದಗಳನ್ನು ಎತ್ತಿ ತೋರಿಸಿದ್ದಾರೆ.

ಹೀಗೆ ಕನ್ನಡದಲ್ಲಿ ನಾಮವಿಜ್ಞಾನ ಕುರಿತು ಡಾ. ಎಂ.ಎಂ.ಕಲಬುರ್ಗಿ ಅವರನ್ನು ಹೊರತು ಪಡಿಸಿದರೆ ಇನ್ನೊಂದು ಹೆಸರು ಡಾ. ನೇಗಿನಹಾಳ ಅವರದೇ. ಇತರ ವಿದ್ವಾಂಸರು ಇತ್ತ ಕಡೆ ಗಮನ ಹರಿಸದಿರುವುದು ಸೋಜಿಗದ ಸಂಗತಿಯಾಗಿದೆ.

■■

## ಜನಾಂಗೀಯ ಅಧ್ಯಯನ

ಡಾ. ಎಂ.ಬಿ.ನೇಗಿನಹಾಳ ಅವರು ಜನಾಂಗೀಯ ಅಧ್ಯಯನಕ್ಕೆ ಬಹಳಷ್ಟು ಪ್ರಾಮುಖ್ಯತೆಯನ್ನು ಕೊಟ್ಟವರು. ಬೇಡ ಜನಾಂಗ, ಗೊಂದಲಿಗ ಜನಾಂಗ, ಗೌಡಜನಾಂಗ, ಗೊಲ್ಲ ಜನಾಂಗ, ಪಾತ್ರೋಟ ಜನಾಂಗ ಮುಂತಾದ ಜನಾಂಗಗಳ ಕುರಿತ ಅವರ ಶೋಧನೆ ಅನೇಕ ಮೌಲಿಕ ವಿಚಾರಗಳನ್ನು ಸಾಂಸ್ಕೃತಿಕ ಲೋಕಕ್ಕೆ ಕೊಡಮಾಡಿದೆ.

ಗೊಂದಲಿಗರು ಯಾವ ಮೂಲದವರು? ಕರ್ನಾಟಕದವರೋ ಅಥವಾ ಮಹಾರಾಷ್ಟ್ರದವರೋ ಎಂಬ ಬಗೆಗೆ ವಿದ್ವಾಂಸರಲ್ಲಿ ಇಂದು ಅಭಿಪ್ರಾಯ ಭೇದ ಉಂಟಾಗಿದೆ. ಈಗಲೂ ಇವರು ಕರ್ನಾಟಕದ ಬಹುಭಾಗಗಳಲ್ಲಿ ಹರಡಿದ್ದರೂ ಮರಾಠಿಯನ್ನೇ ಮಾತೃಭಾಷೆಯನ್ನಾಗಿ ಆಡುತ್ತಿರುವುದರಿಂದ ಮೂಲತಃ ಮಹಾರಾಷ್ಟ್ರದವರೇ ಆಗಿರಬಹುದೆಂಬ ಅಭಿಪ್ರಾಯ, ಬಹುಜನರಲ್ಲಿದೆ. ಈ ಸಮಸ್ಯೆಯ ಎಲ್ಲ ಮುಖಗಳು ಈ ವರೆಗೆ ವಿವರವಾದ ಪರಿಶೀಲನೆಗೆ ಒಳಗಾದಂತೆ ತೀರಲಿಲ್ಲ. ಹಾಗೆ ವಿವರವಾಗಿ ಪರಿಶೀಲಿಸದ ಹೊರತು ಯಾವೊಂದು ನಿರ್ಣಯಕ್ಕೆ ಬಂದು ಮುಟ್ಟುವುದು ತರವಲ್ಲ. ಅದರಲ್ಲೂ ಗೊಂದಲಿಗ ಪದದ ರೂಪನಿಷ್ಪತ್ತಿಯನ್ನು ಕುರಿತು ವಿಚಾರಿಸಬೇಕಾದುದು ತೀರಮುಖ್ಯ. ಸಮಸ್ಯೆಯ ಈ ಮುಖವನ್ನು ಪರಿಶೀಲಿಸದೆ ಹೇಳಿದ ಯಾವ ನಿರ್ಣಯವೂ ಯೋಗ್ಯವೆನಿಸಲಾರದು ಎಂದು ಮನಗಂಡ ಡಾ. ನೇಗಿನಹಾಳರು ಗೊಂದಲಿಗ ನಿಷ್ಪತ್ತಿ ಕುರಿತು ವಿವರವಾಗಿ ಶೋಧಿಸುತ್ತಾರೆ.

ಪ್ರಾಕೃತ ಮತ್ತು ಸಂಸ್ಕೃತಗಳಲ್ಲಿ 'ಗುಂದಲ' ಮರಾಠಿ ಮತ್ತು ಗುಜರಾತಿಗಳಲ್ಲಿ 'ಗುಂತ' 'ಗುಂಥ' ಮುಂತಾದ ಕ್ರಿಯಾಧಾತುಗಳಿಂದ ನಾಮವಿಜ್ಞಾನದ ತಳಹದಿಯ ಮೇಲೆ ಗೊಂದಲಿಗರು ಮೂಲತಃ ಕನ್ನಡಿಗರು ಎಂಬ ನಿರ್ಣಯಕ್ಕೆ ಬರುತ್ತಾರೆ.

ಇಷ್ಟೆಲ್ಲ ದಾಖಲೆಗಳಿದ್ದರೂ ಗೊಂದಲಿಗರ ಮನೆ ಮಾತು ಮರಾಠಿ ಏಕೆ ಎಂಬ ಪ್ರಶ್ನೆ ಬಂದಾಗ ನೇಗಿನಹಾಳರು ತುಂಬ ಸಂವೇದನೆಯ ಮಾತುಗಳನ್ನು ಹೇಳುತ್ತಾರೆ : '೧೪ನೆಯ ಶತಮಾನದವರೆಗೂ ಗೋದಾವರೀ ತೀರದವರೆಗೆ ಕನ್ನಡ ಭಾಷೆಯೆ ವ್ಯಾಪಿಸಿದ್ದುದಕ್ಕೆ ಬೇಕಾದಷ್ಟು ಐತಿಹಾಸಿಕ ಪುರಾವೆಗಳಿವೆ. (ಇಂದಿನ)

ಮಹಾರಾಷ್ಟ್ರದ ಗೋದಾವರೀ ತಟದ ನಾಂದೇಡ ಪಟ್ಟಣದ ಕಾಲೇಜೊಂದು ಶಾಸನ ಸಂಪುಟ ಪ್ರಕಟಿಸಿದೆ. ಅದರಲ್ಲಿ ದೊರೆತ ಶಾಸನಗಳಲ್ಲಿ ಕನ್ನಡ ಶಾಸನಗಳೇ ಹೆಚ್ಚಾಗಿವೆ. ನಾಂದೇಡ ಜಿಲ್ಲೆಯ ಬೋಧನವೇ ಮೊದಲಾದೆಡೆಗಳಲ್ಲಿ ಈಗಲೂ ಕನ್ನಡ ಮಾತೃಭಾಷೆಯುಳ್ಳ ಹಲವು ಜನಾಂಗದವರು ಇದ್ದೆ ಇದ್ದಾರೆ. ೧೪ನೆಯ ಶತಮಾನಕ್ಕೆಂದರೆ ಅಚ್ಚಗನ್ನಡ ರಾಜನಮನೆತನಗಳೆಲ್ಲವೂ ಪತನಗೊಂಡು ಅನಂತರ ಮರಾಠಿ ಮಾತೃಭಾಷೆಯ ರಾಜಮನೆತನ ಈ ಭಾಗದಲ್ಲಿ ಪ್ರತಿಷ್ಠಿತಗೊಂಡಿತು. ಇದರಿಂದ ಮತ್ತು ಉತ್ತರದಿಂದ ದಕ್ಷಿಣಕ್ಕೆ ಆರ್ಯಮೂಲದ ಜನಾಂಗಗಳ ವಲಸೆ ಅಪ್ರತಿಹತವಾಗಿ ನಡೆದುಬಂದುದರಿಂದ ಗೋದಾವರಿಯ ದಕ್ಷಿಣದಲ್ಲಿ ಕನ್ನಡವನ್ನು ಒತ್ತುತ್ತ ಮರಾಠಿಯು ಸಾಗಿಬಂತು. ಬರುವ ಅದರ ಪ್ರವಾಹದ ಸೆಳೆತದಲ್ಲಿ ಚಿಕ್ಕಮಟ್ಟವಾದ ಅನೇಕ ಕನ್ನಡ ಪಂಗಡಗಳು ತಮ್ಮ ಮೊದಲಿನ ಮಾತೃಭಾಷೆಯನ್ನು ತ್ಯಾಗ ಮಾಡಿದ್ದರೆ ಅದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ಅಲ್ಲದೆ ವಿದರ್ಭ ಮತ್ತು ಕೊಂಕಣಗಳನ್ನು ಹೊರತುಪಡಿಸಿ ಉಳಿದ ಮರಾಠಿ ಪ್ರದೇಶದ ಜನರಿಗೂ ತುಂಗಭದ್ರೆಯ ಉತ್ತರಕ್ಕಿರುವ ಕನ್ನಡಿಗರಿಗೂ ಜಾನಾಂಗಿಕವಾಗಿ ಹೋಲಿಕೆಗಳು ಈಗಲೂ ಸ್ಪಷ್ಟವಾಗಿ ಕಂಡುಬರುತ್ತವೆ. ಜನಾಂಗವೇ ತನ್ನ ಮಾತೃಭಾಷೆಯನ್ನು ಬದಲಿಸಬಹುದು. ಇದಕ್ಕೆ ಓಡಿಸಾ ರಾಜ್ಯವೊಂದು ಒಳ್ಳೆಯ ನಿದರ್ಶನ. ಓಡಿಸಾದ ಜನತೆಯಲ್ಲಿ ಬಹುಪಾಲು ದ್ರಾವಿಡವರ್ಗಕ್ಕೆ ಸೇರಿದ್ದು, ಆದರೆ ಅಲ್ಲಿ ಇಂದು ಪ್ರಚಲಿತವಿರುವ ಬಹುಜನರ ಭಾಷೆ ಆರ್ಯವರ್ಗದ ಉಡಿಯಾ. ಹಿಂದಿನ ಅರ್ಧಶತಮಾನದ ಅವಧಿಯಲ್ಲಿಯೇ ಬೆಳಗಾವಿಯಲ್ಲಿ ಅಚ್ಚಗನ್ನಡವಾಗಿದ್ದ ಹಲವಾರು ಮನೆತನಗಳು ಮರಾಠಿ ಮನೆತನಗಳಾಗಿ ಪರಿವರ್ತಿಸಿದ ಖೇದದಾಯ ಸಂಗತಿಯನ್ನು ನಮ್ಮ ಭಾಗದ ಹಿರಿಯರು ಈಗಲೂ ನೆನೆಸುತ್ತಾರೆ, ಎಂದ ಮೇಲೆ ಗೊಂದಲಿಗರಂಥ ಬಡಪಾಯಿಗಳ ಬಗೆಗೆ ಹೇಳುವುದೇನು?' (ನೇಗಿನಹಾಳ ಪ್ರಬಂಧಗಳು ಪು. ೯೨-೯೩)

ಕರ್ನಾಟಕದ ಮೂಲನಿವಾಸಿಗಳಲ್ಲಿ ಬೇಡಜನಾಂಗವು ಒಂದು. ಈ ಜನಾಂಗದ ಇತಿಹಾಸ ಕುರಿತು ಡಾ. ನೇಗಿನಹಾಳ ಅವರು ಒಂದು ಲೇಖನ ಬರೆದಿದ್ದಾರೆ. ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ಭಾರತದಲ್ಲಿ ವಾಸವಾಗಿರುವ ಆದಿಯ ಜನಾಂಗಗಳಲ್ಲಿ ಬೇಡ ಜನಾಂಗವೂ ಒಂದು. ನಮ್ಮ ದೇಶದಲ್ಲಿ ಬಹುಪುರಾತನ ಕಾಲದಿಂದಲೂ ಈ ಜನಾಂಗ ಅಸ್ತಿತ್ವದಲ್ಲಿದ್ದಿತೆಂಬ ಬಗೆಗೆ ಅನುಮಾನವಿಲ್ಲ. ಮಹಾಭಾರತದಲ್ಲಿ ಬೇಡ ಜನಾಂಗದ ಉಲ್ಲೇಖಗಳಿವೆ. ಪುಲಿಂದ, ನಿಷಾದ, ವ್ಯಾಧ ಮುಂತಾದ ಹೆಸರಿನಿಂದ ಈ ಜನಾಂಗದ ಉಲ್ಲೇಖಗಳು ಅಲ್ಲಿ ಕಂಡುಬರುತ್ತವೆ.

ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ಕಿರಾತರುದ್ರಲೀಲೆಯ ಪ್ರಸಂಗವು

ಮಹಾಭಾರತದ ಅರಣ್ಯಕಪರ್ವದಲ್ಲಿ ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಶಿವನು ಬೇಡವೇಷದಿಂದ ಬಂದು ಮೂಕದಾನವನನ್ನು ಸಂಹರಿಸಿ ಅರ್ಜುನನಿಗೆ ಪಾಶುಪತಾಸ್ತ್ರ ದಾನ ಮಾಡಿದ್ದು ಪ್ರಸಿದ್ಧವಾದ ಆಖ್ಯಾಯಿಕೆ. ಇದರಿಂದ ಅಂದು ಬೇಡ ಜನಾಂಗ ಅವರ ವೇಷ-ಭೂಷಣಗಳು ಸುಪರಿಚಿತವಾಗಿದ್ದವೆಂದು ಡಾ. ನೇಗಿನಹಾಳರ ಅಭಿಪ್ರಾಯ.

ನಮ್ಮ ಸಾಹಿತ್ಯ, ಶಾಸನ ಇತ್ಯಾದಿ ಆಕರಗಳು ಕರ್ನಾಟಕದ ಎಲ್ಲ ರಾಜಮನೆತನಗಳನ್ನು ಸೂರ್ಯವಂಶದವರು, ಚಂದ್ರವಂಶದವರು ಅಥವಾ ಯಾದವ ವಂಶದವರು ಎಂದು ಮುಂತಾಗಿ ಹೊಗಳುತ್ತವೆ. ಇಂತಹ ಕೃತ್ರಿಮತೆಯ ಸೋಗಿನಲ್ಲಿ ವಾಸ್ತವವಾದ ಬಹಳಷ್ಟು ಅಂಶಗಳು ಮುಚ್ಚಿಹೋಗಿವೆ. ಕದಂಬ ಮತ್ತು ಚಾಲುಕ್ಯರನ್ನು ಹೊರತುಪಡಿಸಿ ಕರ್ನಾಟಕದ ಇತರ ರಾಜಮನೆತನಗಳೆಲ್ಲ ಕೆಳವರ್ಗದಿಂದಲೇ ಬಂದಂತಹವುಗಳು. ಆದರೆ ಯಾವ ರಾಜಕುಲವೂ ತಮ್ಮ ಮೂಲವನ್ನು ನೇರವಾಗಿ ಹೇಳಿಕೊಳ್ಳುವುದಿಲ್ಲ. ಹೀಗಾಗಿ ಕೆಳವರ್ಗದ ಜನಾಂಗಗಳ ಚರಿತ್ರೆಯನ್ನು ಕತ್ತಲೆ ಆವರಿಸಿದೆ. ಇದ್ದುದರಲ್ಲಿ ಬೇಡ ಜನಾಂಗದ ಬಗೆಗೆ ಅಷ್ಟಿಷ್ಟು ವಿಷಯ ಶಾಸನ ಮತ್ತು ಗ್ರಂಥಗಳಿಂದ ತಿಳಿದುಬರುತ್ತದೆ. ಬೇಡ ಜನಾಂಗದ ಕುರಿತಾದ ಅತ್ಯಂತ ಪ್ರಾಚೀನ ಶಾಸನ ಗದ್ದೆಮನೆ ಶಾಸನವೆಂಬುದು ಅವರ ಸ್ಪಷ್ಟ ಅಭಿಪ್ರಾಯ.

ಚಿತ್ರದುರ್ಗದ ನಾಯಕರು ಬಹುಪ್ರಸಿದ್ಧ ಪಾಳೆಯಗಾರರು, ಸ್ವತಂತ್ರವಾಗಿ ರಾಜ್ಯವಾಳಲು ಪ್ರಯತ್ನಿಸಿ ಹೈದರ್‌ಅಲಿ ಮತ್ತು ಮರಾಠಾ ಪೇಶ್ವೆಗಳಿಂದಾಗಿ ನಾಶವಾದರು. ಕರ್ನಾಟಕದ ಇತ್ತೀಚಿನ ಇತಿಹಾಸದಲ್ಲಿ ಪ್ರಮುಖವಾಗಿದ್ದ ಬೇಡರ ರಾಜ್ಯವೆಂದರೆ ಇದೇ. ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಸಿಂಧೂರ ಲಕ್ಷ್ಮಣ ಮತ್ತು ಹಲಗಲಿ ಬೇಡರು ಕರ್ನಾಟಕದ ಜನತೆಯ ಸ್ಮರಣೆಗೆ ಪಾತ್ರರಾಗಿದ್ದಾರೆ. ಹೀಗೆ ಬೇಡ ಜನಾಂಗದವರ ಇತಿಹಾಸ ಹೇಳುತ್ತ ಆಧುನಿಕ ಕಾಲದಲ್ಲಿ ಅವರು ಕಾರ್ಮಿಕರಾಗಿ ದುಡಿಯುತ್ತ ಶಿಕ್ಷಣದಿಂದ ವಂಚಿತರಾಗಿ ಹಿಂದುಳಿದಿದ್ದಾರೆ ಎಂದು ವ್ಯಸನದಿಂದ ಹೇಳುತ್ತಾರೆ.

ದುರುಗಮುರಗಿಯರು ಬೇಡ ಜನಾಂಗದ ಒಂದು ಉಪಪಂಗಡವೆಂದು ಡಾ. ನೇಗಿನಹಾಳ ಹೇಳುತ್ತಾರೆ. ೧೨ನೇ ಶತಮಾನದ ಶರಣ ಢಕ್ಕೆಯ ಮಾರಯ್ಯ ಈ ಜನಾಂಗದವನೆಂದು ಸಿದ್ಧಪಡಿಸಿದ್ದಾರೆ. ಕೋಲುಶಾಂತಯ್ಯ, ತೆಲಗು ಜೋಮ್ಮಯ್ಯ, ಪಡಿಹಾರಿ ಉತ್ತಣ್ಣ, ಪಡಿಹಾರಿ ಬಸವಯ್ಯ, ಉಗ್ಗಡಿಸುವ ಗಬ್ಬಿದೇವಯ್ಯ, ರಕ್ಕಸ ಬೊಮ್ಮಯ್ಯ ಮೊದಲಾದ ಶರಣರು ಈ ಜನಾಂಗದವರೆಂದು ಅವರು ಹೇಳಿದ್ದು ಇನ್ನೂ ಸಂಶೋಧನೆಗೆ ಅವಕಾಶವಿದೆ. 'ಕನ್ನಡ ಸಾಹಿತ್ಯ ಕೃತಿಗಳಲ್ಲಿ ಬೇಡ ಜನಾಂಗ' ಕೆಲವು ಟಿಪ್ಪಣಿಗಳು ಅವರ ಮತ್ತೊಂದು ಮಹತ್ವದ ಲೇಖನವಾಗಿದೆ.

ಕರ್ನಾಟಕದಲ್ಲಿ ಬಲು ಹಿಂದಿನಿಂದ ವಾಸ ಮಾಡುತ್ತಾ ಬಂದ ಬುಡಕಟ್ಟುಗಳಲ್ಲಿ ಗೊಲ್ಲ ಜನಾಂಗವೂ ಒಂದು. ಈ ಜನಾಂಗ ಕುರಿತು ಅವರು ಶೋಧಿಸುವ ಪ್ರಯತ್ನ ಮಾಡಿದ್ದಾರೆ. ಗೊಲ್ಲ ಎಂಬ ಪದವು ಜಾತಿವಾಚಕವಾಗಿ ಕರ್ನಾಟಕ ಮತ್ತು ಆಂಧ್ರಗಳಲ್ಲಿ ವಿಶೇಷ ಬಳಕೆಯಲ್ಲಿದೆ. ಕನ್ನಡದ ಗೊಲ್ಲ ಶಬ್ದಕ್ಕೆ ಮಹಾರಾಷ್ಟ್ರದಲ್ಲಿ 'ಗೌಳಿ' ಎಂದು ಕರೆಯುತ್ತಾರೆ. ಪಂಪ ಮಹಾಕವಿಯು 'ಅಂಗ, ವಂಗ ಕಳಿಂಗ ಕೊಂಗ ಕೊಂಕಣ, ಗೊಲ್ಲ, ಕಾಂಬೋಜ ನಾನಾದ್ವೀಪ ದೇಶಾಧೀಶ್ವರರು' ಎಂದು ಹೇಳಿದ್ದಾನೆ. ಅಂತೆಯೇ ಗೊಲ್ಲರು ಕೇವಲ ಪಶುಪಾಲಕರು ಮಾತ್ರವಲ್ಲ, ರಾಜ್ಯವಾಳಿದವರೂ ಹೌದು ಎಂಬ ನಿರ್ಣಯ ಡಾ. ನೇಗಿನಹಾಳರದು.

ಪಾತ್ರೋಟ ಜನಾಂಗದ ಕುರಿತು ಅವರು ಉಲ್ಲೇಖಿಸಿದ್ದಾರೆ. ಪಾತ್ರೋಟಿಯವರು ಕೊರವ ಸಮುದಾಯದ ಒಂದು ಉಪಪಂಗಡವೆಂದೂ, ಕಲಾವಂತ ವರ್ಗವೆಂದೂ ಕರೆಯಲ್ಪಡುತ್ತಾರೆ. ಬುಡಕಟ್ಟು ಸಮುದಾಯದಿಂದ ಬಂದ ಇವರ ಮೂಲಕುಲ ಯಾವುದು ಎಂಬುದು ಅವರ ಪ್ರಶ್ನೆಯಾಗಿದೆ?

ಹೀಗೆ ಜನಾಂಗೀಯ ಅಧ್ಯಯನಕ್ಕೆ ವಿಶೇಷ ಮಹತ್ವ ಕೊಟ್ಟು ಕೆಲವು ಲೇಖನಗಳನ್ನು ಅವರು ರಚಿಸಿದ್ದು ಮುಂದೆ ಬುಡಕಟ್ಟು ಸಮುದಾಯಗಳ ಅಧ್ಯಯನಕ್ಕೆ ತುಂಬ ಪ್ರಯೋಜನಕಾರಿಯಾಯಿತು ಎಂದು ಹೇಳಬಹುದು.

■■

# ವಚನ ಸಾಹಿತ್ಯ ಸಂಶೋಧನ

ಭಾರತದ ಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದಾಗಿರುತ್ತದೆ. ಸಂಸ್ಕೃತ ಮತ್ತು ತಮಿಳು ಭಾಷೆಗಳ ತರುವಾಯದ ಸ್ಥಾನವು ಕನ್ನಡ ಭಾಷೆಗೆ ಇರುತ್ತದೆ. ಇದು ದ್ರಾವಿಡ ಭಾಷಾವರ್ಗಕ್ಕೆ ಸೇರಿದುದಾಗಿದೆ. ಕ್ರಿಸ್ತಶಕ ಒಂದು ಎರಡನೆಯ ಶತಮಾನದಿಂದ ಕನ್ನಡ ಭಾಷೆಯು ಅಸ್ತಿತ್ವದಲ್ಲಿತ್ತೆಂದು ಗುರುತಿಸಲಾಗಿದೆ. ನಾಲ್ಕನೆಯ ಶತಮಾನದಷ್ಟೊತ್ತಿಗೆ ಈ ಭಾಷೆಗೆ ಲಿಖಿತ ರೂಪ ಗಟ್ಟಿಗೊಂಡದ್ದನ್ನು ಕಂಡುಕೊಂಡಿರುವರು. ಹತ್ತನೆಯ ಮತ್ತು ಹನ್ನೆರಡನೆಯ ಶತಮಾನಗಳೆರಡೂ ಕನ್ನಡ ಸಾಹಿತ್ಯದ ಸುವರ್ಣಯುಗಗಳಾಗಿ ಕಂಗೊಳಿಸಿರುತ್ತವೆ.

ಪಂಪಯುಗದಲ್ಲಿ ಪಂಪ, ರನ್ನ ಕವಿಗಳು ಹತ್ತನೆಯ ಶತಮಾನದಲ್ಲಿ ಮಹಾಕಾವ್ಯಗಳನ್ನು ರಚಿಸಿ ಕೀರ್ತಿಶೇಷರಾಗಿರುವರು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶಿವಶರಣರು ವಚನಗಳನ್ನು ರಚಿಸಿ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿರುವರು. ಅದೇ ರೀತಿ ಶಿವಶರಣರಿಂದ ಪ್ರಾರಂಭಗೊಂಡ ಸ್ವರವಚನಗಳ ಸೃಷ್ಟಿಕಾರ್ಯವುನಿಜಗುಣಾದಿಶಿವಯೋಗಿಗಳ ಕಾಲದಲ್ಲಿ ಸತ್ವಭರಿತವಾಗಿ, ಅರ್ಥವತ್ತಾಗಿ ನಡೆದು, ಶ್ರೀಸಾಮಾನ್ಯರಿಗೂ ತತ್ತ್ವದ ತಿಳವಳಿಕೆಯನ್ನು ಸಂಗೀತದ ಮೂಲಕ ಮಾಡಿಕೊಟ್ಟಿದ್ದು ಅದ್ಭುತ ಕಾರ್ಯವಾಗಿರುತ್ತದೆ.

'ವಚನ' ಎಂಬ ಪದವು ಪ್ರಾಚೀನ ಚಂಪೂಕಾವ್ಯಗಳಲ್ಲಿ ಮೊದಮೊದಲು ಅಲ್ಲಲ್ಲಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ಕಥೆಯನ್ನು ಸಂಕ್ಷಿಪ್ತವಾಗಿ ಹೇಳಬೇಕಾದಾಗ ಚಂಪೂ ಕವಿಗಳು ಮಧ್ಯೆ ಮಧ್ಯೆ 'ವಚನ' ಎನ್ನುವ ಪದವನ್ನು ಬಳಸಿರುವರು. ಇಲ್ಲಿ ವಚನ ಎಂದರೆ ಗದ್ಯ ಎನ್ನುವ ಅರ್ಥವುಳ್ಳದ್ದಾಗಿರುತ್ತದೆ. ಶಿವಶರಣರಿಂದ ರಚಿತವಾದ 'ವಚನ'ದ ಚೌಕಟ್ಟು ಬೇರೆ ರೀತಿಯದಾಗಿದೆ. ಇದು ಗದ್ಯವಾದರೂ ಲಯಬದ್ಧವಾದ ಗದ್ಯವಾಗಿರುತ್ತದೆ. ಅನುಭಾವದ ವಿಷಯಗಳನ್ನೊಳಗೊಂಡ ಜನವಾಣಿಯಾಗಿರುತ್ತದೆ. ಜನವಾಣಿಯನ್ನೇ ದೇವವಾಣಿಯನ್ನಾಗಿ ಮಾರ್ಪಡಿಸಿದ ಕೀರ್ತಿ ಶಿವಶರಣರದಾಗಿದೆ. ಇವು ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾದ ಸೂಳ್ನುಡಿಗಳು, ಅಮೃತನುಡಿಗಳು.

ಶಿವಶರಣರ ಶಿವಾನುಭವಿಗಳ ಅಂತರಂಗದ ರತ್ನಗಳು, ಮುತ್ತಿನ ಹಾರಗಳು, ಕ್ರಿಯಾಜ್ಞಾನಗಳ ಸುಂದರ ಸಮನ್ವಯದ ಅಭಿವ್ಯಕ್ತಿಗಳು. ಕಾಯಕ ದಾಸೋಹ ಸಿದ್ಧಾಂತಗಳ, ಶರಣ ಸಂಸ್ಕೃತಿಯ ಪಡಿಯಚ್ಚುಗಳಿವು. ವಿಶ್ವಸಾಹಿತ್ಯಕ್ಕೆ ಕನ್ನಡ ಸಾಹಿತ್ಯದ ಮೂಲಕ ನೀಡಿರುವ ವಿಶಿಷ್ಟ ಕಾಣಿಕೆಗಳಿವಾಗಿವೆ.

ಡಾ. ಎಂ.ಬಿ.ನೇಗಿನಹಾಳ ಅವರು ವಚನ ಸಾಹಿತ್ಯ ಕುರಿತಾಗಿ ಆಳವಾಗಿ ಅಧ್ಯಯನ ಮಾಡಿದ್ದಾರೆ. ಶಿವಲೆಂಕ ಮಂಚಣ್ಣನವರ ವಚನಗಳನ್ನು ಸಂಪಾದಿಸಿದ್ದಾರೆ. ಅಲ್ಲದೇ ಬಸವಯುಗದ ಸ್ವರವಚನ ಸಾಹಿತ್ಯ, ಕಾಡಸಿದ್ಧೇಶ್ವರ ವಚನಗಳು ಮೊದಲಾದ ಲೇಖನಗಳನ್ನು ಬರೆದಿದ್ದಾರೆ. ವಿಶೇಷವಾಗಿ ಸ್ವರವಚನ ಕುರಿತಾದ ಅವರ ನಿಲುವುಗಳು ಅತ್ಯಂತ ಮಾರ್ಮಿಕವಾಗಿವೆ. ವಿಚಾರಣೀಯವಾಗಿವೆ. ಅವರು ವಚನ ಪ್ರಕಾರಕ್ಕಿಂತ ಪದ್ಯಪ್ರಕಾರದ ಸಾಹಿತ್ಯವೇ ಮೊದಲು ಆವಿರ್ಭವಿಸಿತು ಎಂದು ಶೋಧಿಸಿದ್ದಾರೆ.

ಬಸವಾದಿ ಶರಣರು ವಚನಗಳನ್ನು ರಚಿಸುವುದರ ಜೊತೆಗೆ ರಾಗ–ತಾಳ ಯುಕ್ತವಾದ ಹಾಡಿನ ಸಾಹಿತ್ಯವನ್ನೂ ರಚಿಸಿದರು ಎಂದು ಹೇಳುವಲ್ಲಿ ಅವಾಸ್ತವತೆ ಏನೂ ಇಲ್ಲ. ಈ ಬಗೆಯ ರಚನೆಗಳು ವಚನ ಸಾಹಿತ್ಯ ದೊರಕುವ ಹಸ್ತಪ್ರತಿ ಕಟ್ಟುಗಳಲ್ಲಿ ಅಲ್ಲಲ್ಲಿ ದೊರೆಯುತ್ತಿದ್ದವು. ಆದರೆ ವಚನ ಸಾಹಿತ್ಯದ ಬಗ್ಗೆ ಆರಂಭ ಕಾಲದಲ್ಲಿ ಮೂಡಿನಿಂತ ಕೌತುಕ–ಕುತೂಹಲಗಳು ಈ ಸ್ವರವಚನ ಸಾಹಿತ್ಯ ಕುರಿತಾಗಿ (ಆಧುನಿಕರಲ್ಲಿ) ಮೂಡಿಬರಲಿಲ್ಲ. ಆದ್ದರಿಂದ ಈ ಸಾಹಿತ್ಯದ ಹೆಚ್ಚಿನ ಪರಾಮರ್ಶೆ ನಡೆಯಲಿಲ್ಲ. ಆಧುನಿಕ ಕಾಲದಂತೆ ಪ್ರಾಚೀನ ಕಾಲದಲ್ಲಿ ಕೂಡ ಇವುಗಳ ಮಹತಿಯನ್ನು ಎತ್ತಿ ತೋರಬಲ್ಲ ಸಂಕಲನಗಳು ವಿಶೇಷವಾಗಿ ಶೂನ್ಯಸಂಪಾದನೆಗಳಂಥ ಪ್ರಭಾವಶಾಲೀ ಸಂಕಲನಗಳು ಸ್ವರವಚನಗಳಿಗೆ ಹೆಚ್ಚಿನ ಇಂಬು ಕೊಡಲಿಲ್ಲ. ವಚನ ಸಂಕಲನಕಾರರ ಸಂಖ್ಯೆಗೆ ಹೋಲಿಸಿದರೆ ಸ್ವರವಚನ ಸಂಕಲನಕಾರರು ಕಡಿಮೆ ಪ್ರಮಾಣದಲ್ಲಿರುವುದು ಎದ್ದು ಕಾಣುವ ಅಂಶ.

ಡಾ. ನೇಗಿನಹಾಳರಿಗೆ ಖಚಿತವಾಗಿ ತಿಳಿದು ಬಂದಿರುವಂತೆ 'ಲಿಂಗಾಯತ ಸಾಹಿತ್ಯದಲ್ಲಿ ಪದ್ಯರೂಪಿ ಸಾಹಿತ್ಯವೇ ಮೊದಲು ಆವಿರ್ಭವಿಸಿದೆ. ಕೊಂಡಗುಳಿಯ ಕೇಶಿರಾಜನ ಕೃತಿಗಳು ಈ ಮಾತಿಗೆ ಬಲವಾದ ಆಧಾರ ನೀಡುತ್ತವೆ. ಮುಂದಿನ ಹಲವು ಜನ ಶಿವಶರಣರು ಪದ್ಯರೂಪದ ಕೃತಿಗಳನ್ನು ರಚಿಸಿದ್ದಾರೆ. ಅಕ್ಕಮಹಾದೇವಿ ಮತ್ತು ಸಿದ್ಧರಾಮರು ಈ ನಿಟ್ಟಿನಲ್ಲಿ ಪ್ರಮುಖರು. ಆದಯ್ಯನ ಲಘುಕೃತಿಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಸಕಲೇಶ ಮಾದರಸ, ಜೇಡರದಾಸಿಮಯ್ಯ, ಆದಯ್ಯ ಮತ್ತು ಸಿದ್ಧರಾಮರ ಅನೇಕ ವಚನಗಳು ವಚನಗಳೇ ಅಥವಾ ಪದ್ಯಗಳೇ

ಎಂಬ ಸಂಶಯಕ್ಕೆಡೆ ಮಾಡಿಕೊಡುತ್ತವೆ. ಈ ಎಲ್ಲ ಕಾರಣದಿಂದಾಗಿ ಪದ್ಯ ಮತ್ತು ಸ್ವರವಚನ ಸಾಹಿತ್ಯವೇ ಮೊದಲು ಹುಟ್ಟಿ, ತರುವಾಯ ವಚನ ಸಾಹಿತ್ಯದ ಉದಯವಾಯಿತೆನ್ನಬೇಕು' ಎಂಬ ನಿರ್ಣಯಕ್ಕೆ ಬರುತ್ತಾರೆ.

■■

# ಸಿದ್ಧರಾಮನ ಕುರಿತ ಮಹತ್ವದ ಸಂಶೋಧನೆ

ಸೊನ್ನಲಿಗೆಯ ಶಿವಯೋಗಿ ಸಿದ್ಧರಾಮನ ಕುರಿತು ಆತನ ಕಾಲ, ಮತಸಂಪ್ರದಾಯ, ಲಿಂಗಾಯತ ಧರ್ಮಸ್ವೀಕಾರ, ಲಿಂಗದೀಕ್ಷಾ ಪ್ರಸಂಗ ಮುಂತಾದವು ಅಪಾರ ಚರ್ಚೆಗೆ ಗ್ರಾಸವಾದ ವಿಷಯಗಳಾಗಿವೆ. ವಚನಗಳು, ಕಾವ್ಯಗಳು, ಶಾಸನಗಳು ತಾಡೋಲೆಗಳು, ಹಸ್ತಪ್ರತಿಗಳು ಮತ್ತು ಶೂನ್ಯಸಂಪಾದನೆಗಳು ಸಿದ್ಧರಾಮನ ಚರಿತ್ರೆಯ ಮೇಲೆ ಖಂಡಿತವಾಗಿ ಬೆಳಕು ಬೀರಬಲ್ಲ ಮೂಲ ಸಂಪನ್ಮೂಲಗಳು. ಸಿದ್ಧರಾಮನು ತಾನು ೬೮೦೦೦ ವಚನಗಳನ್ನು ಹಾಡಿದೆನೆಂದು ಹೇಳಿಕೊಂಡರೂ ಕೂಡ ನಮಗೆ ಈವರೆಗೆ ದೊರೆತ ಆತನ ವಚನಗಳು ಕೇವಲ ೩೬೨೬ ಮಾತ್ರ, ಇವುಗಳಲ್ಲಿ ಪ್ರಕ್ಷಿಪ್ತ ವಚನಗಳೆಷ್ಟೋ! ವಚನಗಳಲ್ಲದೆ ಸಿದ್ಧರಾಮನು ಸ್ವರವಚನ, ತ್ರಿವಿಧಿಗಳನ್ನು ಕೂಡ ರಚಿಸಿದ್ದಾನೆ. ಸೊನ್ನಲಿಗೆಯ ಹಾಗೂ ಸಿದ್ಧರಾಮನ ಕುರಿತ ವರ್ಣನೆ ಮಾಡುವ ೨೦ಕ್ಕೂ ಹೆಚ್ಚು ಶಾಸನಗಳು ಲಭ್ಯವಾಗಿವೆ. ವಿಪುಲವಾಗಿ ದೊರೆತ ಆಕರಗಳನ್ನು ಮುಂದಿಟ್ಟುಕೊಂಡು ಕಳೆದ ಆರೇಳು ದಶಕಗಳಲ್ಲಿ ಸಿದ್ಧರಾಮನ ಕುರಿತು ಅಪಾರವಾದ ಸಾಹಿತ್ಯ ನಿರ್ಮಾಣವಾಗಿದೆ. ಆದರೆ ದುರ್ದೈವದಿಂದ ವಿದ್ವಾಂಸರ ಕೃತಿಗಳಲ್ಲಿ ವೈಚಾರಿಕ ಸಮಾನತೆ ಮೂಡದೆ, ಆತನನ್ನು ತಮಗೆ ಸರಿಕಂಡಂತೆ ಭಿನ್ನಭಿನ್ನವಾಗಿ ಚಿತ್ರಿಸಿದ್ದೇ ಸಮಸ್ಯೆಯಾಗಿ ಪರಿಣಮಿಸಿದೆ. ಕುರುಡರು ಆನೆಯನ್ನು ಸ್ಪರ್ಶಿಸಿ ಅದರ ವರ್ಣನೆಯನ್ನು ಮಾಡಿದಂತೆ ಸಿದ್ಧರಾಮನು ಚಿತ್ರಿತನಾಗಿದ್ದಾನೆ.

ಕ್ರಿ.ಶ.೧೯೪೧ರಲ್ಲಿ ಪ್ರೊ. ಡಿ.ಎಲ್.ನರಸಿಂಹಾಚಾರ್ಯ ಮತ್ತು ಟಿ.ಎಸ್.ವೆಂಕಣ್ಣಯ್ಯ ಅವರು ನಾಲ್ಕು ಹಸ್ತಪ್ರತಿಗಳ ಸಹಾಯದೊಂದಿಗೆ ಜಂಟಿಯಾಗಿ ಪ್ರಕಟಿಸಿದ "ರಾಘವಾಂಕನ ಸಿದ್ಧರಾಮ ಚರಿತ್ರೆ" ಹಾಗೂ ತದನಂತರ ಕ್ರಿ.ಶ. ೧೯೫೨ರಲ್ಲಿ ಡಾ. ಎಚ್.ದೇವೀರಪ್ಪನವರ ತಾಡೋಲೆಯನ್ನು ಅನುಕರಿಸಿ, ಡಿ.ಎಲ್.ಎನ್.ರ ಕ್ರಿ.ಶ.೧೯೪೧ರ ಪರಿಷ್ಕೃತ ಆವೃತ್ತಿ, ಸಿದ್ಧರಾಮನ ಚರಿತ್ರೆಯ ಕುರಿತ ಆಕ್ಷೇಪಣೆಗಳಿಂದಲೇ ಪ್ರಾರಂಭವಾದ ಮೊದಲ ಹಂತದ ಕೃತಿಗಳು.

ಡಿ.ಎಲ್.ಎನ್. ಪ್ರಕಾರ ಈವರೆಗೆ ದೊರೆತ ಸಿದ್ಧರಾಮನ ೩೬೨೬ ವಚನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕ್ಷಿಪ್ತ ವಚನಗಳೇ ಸೇರಿವೆ. ಬಸವಣ್ಣ, ಚೆನ್ನಬಸವಣ್ಣ,

ಅಲ್ಲಮಪ್ರಭು ತನ್ನ ಗುರುಗಳೆಂದು, ಅವರಿಂದ ತಾನು ಲಿಂಗೋಪದೇಶ ಪಡೆದೆನೆಂದು ಹೇಳಿಕೊಳ್ಳುವ ಸಿದ್ಧರಾಮನ ವಚನಗಳು ನಿಜವಚನಗಳಲ್ಲ. ಸ್ಥಾವರಲಿಂಗ ಪೂಜಕನಾದ ಸಿದ್ಧರಾಮನ ಇಷ್ಟಲಿಂಗ ಕುರಿತ ವಚನಗಳು ಪ್ರಕ್ಷಿಪ್ತ ವಚನಗಳಾಗಿರಬೇಕು. ಇಲ್ಲವಾದರೆ ಸಿದ್ಧರಾಮನ ವಚನಗಳನ್ನು ಓದಿದ್ದ ಕವಿರಾಘವಾಂಕ ಈ ಕುರಿತು ತನ್ನ ಕಾವ್ಯದಲ್ಲಿ ಪ್ರಸ್ತಾಪಿಸುತ್ತಿದ್ದ ಸಿದ್ಧರಾಮ ಲಿಂಗಾಯತನಾಗಿರದೆ ಶೈವ ಮತ ಸಂಪ್ರದಾಯಕ್ಕೆ ಸೇರಿದವನಾಗಿದ್ದ. ಆತನು ಶೈವನಾಗಿದ್ದಕ್ಕೆ, ರಾಘವಾಂಕನ ಸಿದ್ಧರಾಮನ ಚಾರಿತ್ರದ "....ಸಿದ್ಧನಾಥಂ ಶೈವಸಾಮ್ರಾಜ್ಯಸುಖಿ..."ದಲ್ಲಿದ್ದನೆಂಬ ವರ್ಣನೆ ಸಾಕ್ಷಿ. ಸಿದ್ಧರಾಮ ಹುಟ್ಟಿದ ಕೂಡಲೇ ಆತನಿಗೆ ಲಿಂಗಧಾರಣೆಯಾಗದೆ, ಜಾತಕರ್ಮಾದಿಗಳು ನಡೆದವು. ಇದು ಲಿಂಗಾಯತ ಸಂಪ್ರದಾಯಕ್ಕೆ ವಿರೋಧವಾದ ಸಂಸ್ಕಾರ. ಸಿದ್ಧರಾಮನು ದೇವಾಲಯ ನಿರ್ಮಾಣ, ನಿತ್ಯ ಹೋಮ ಹವನಾದಿ ಕ್ರಿಯೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು ಕೂಡ ಲಿಂಗಾಯತಕ್ಕೆ ವಿರೋಧವಾದುದು. ಆತನು ಸ್ಥಾವರಪೂಜಕನಾಗಿದ್ದನೆಂಬುದಕ್ಕೆ ಹರಿಹರ, ರಾಘವಾಂಕರ ಕಾವ್ಯಗಳು, ಬಸವಪುರಾಣ (೧೩೬೯) ಪ್ರಮಾಣ.

ಸಿದ್ಧರಾಮನಿಗೆ ಲಿಂಗದೀಕ್ಷೆ ಕೊಡಿಸುವ ಅಭಿಲಾಷೆಯಿಂದ ತನ್ನ ಕಾವ್ಯದಲ್ಲಿ ಮೊಟ್ಟಮೊದಲು ಆತನನ್ನು ಕಲ್ಯಾಣಕ್ಕೆ ತಂದು ಬಿಟ್ಟವನು ಚಾಮರಸ. ಶಿವಗಣಪ್ರಸಾದಿ ಮಹಾದೇವಯ್ಯನವರ ಶೂನ್ಯಸಂಪಾದನೆಯಲ್ಲಿ ಇಲ್ಲದ ಲಿಂಗದೀಕ್ಷೆಯನ್ನು ಮುಂದಿನ ಎಲ್ಲ ಸಂಪಾದನಾಕಾರರು ಪ್ರಸ್ತಾಪಿಸಿದ್ದಾರೆ. ಅವರು ಚೆನ್ನಬಸವಣ್ಣನಿಂದ ಸಿದ್ಧರಾಮನಿಗೆ ದೀಕ್ಷೆ ಮಾಡಿಸಿದರು. ಲಿಂಗದೀಕ್ಷೆ ಹಾಗೂ ಇನ್ನಿತರ ಕೆಲವು ಕಲ್ಪಿತ ಪ್ರಸಂಗಗಳನ್ನು ತೂರಿಸುವ ಮುಖ್ಯ ಉದ್ದೇಶದಿಂದಲೇ ಶೂನ್ಯಸಂಪಾದನೆಗಳು ಪರಿಷ್ಕೃತಗೊಂಡವು. ಸಿದ್ಧರಾಮನನ್ನು ಕಲ್ಯಾಣಕ್ಕೆ ಕರೆದೊಯ್ಯುವದಾಗಲೀ, ಅಲ್ಲಮನಿಂದ ಆತನಿಗೆ ತತ್ವೋಪದೇಶ ಮಾಡಿಸುವುದಾಗಲಿ, ಹಾಗೆನೆ ಆತನನ್ನು ಚೆನ್ನಬಸವಣ್ಣನ ಶಿಷ್ಯನನ್ನಾಗಿಸುವಂಥ ಯಾವ ಅಂಶಗಳೂ ರಾಘವಾಂಕನ ಸಿದ್ಧರಾಮ ಚಾರಿತ್ರ್ಯದಲ್ಲಿ ಕಾಣುವುದಿಲ್ಲ.

ಈ ಆಕ್ಷೇಪಣೆಗಳನ್ನು ವಿಮರ್ಶಿಸಿ ಸಾಧಾರ ಮತ್ತು ಸೂಕ್ತ ಉತ್ತರ ಕೊಡುವ ಪ್ರಯತ್ನ ಮಾಡಿದವರು ಡಾ. ಎಂ.ಬಿ. ನೇಗಿನಹಾಳ.

ಡಿ.ಎಲ್.ಎನ್. ಅವರು ಸಂಪಾದಿಸಿದ ಸಿದ್ಧರಾಮ ಚಾರಿತ್ರದಲ್ಲಿ ೯ ಸಂಧಿಗಳಿವೆ. ಆದರೆ ಡಾ. ನೇಗಿನಹಾಳ ಅವರು ೫ನೇ ಸಂಧಿಯಲ್ಲಿ ಕೇವಲ ೧೭ ಪದ್ಯಗಳಿರುವುದನ್ನು ಗಮನಿಸಿ, ಉಳಿದ ಸಂಧಿಗಳು ದೀರ್ಘವಾಗಿದ್ದು, ಇದು ಮಾತ್ರ ಚಿಕ್ಕದಾಗಿರುವುದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ ಎಂದು ಅವರ ಭಾವಿಸುತ್ತಾರೆ.

ಖ್ಯಾತ ಸಂಶೋಧಕ ಡಾ. ಎಂ. ಎಂ. ಕಲಬುರ್ಗಿ ಅವರು ಸಿದ್ಧರಾಮ ಚಾರಿತ್ರದ ಕೆಲವು ಭಾಗಗಳು ಮತಾಂಧರ ಕೈಯಲ್ಲಿ ಸಿಕ್ಕು ನಷ್ಟವಾಗಿರುವ ಸಂಭವವಿದೆ ಎಂಬ ಸಂಶಯ ತಾಳುತ್ತಾರೆ. ಅದಕ್ಕೆ ಅವರು ಕೊಡುವ ಆಧಾರವೆಂದರೆ ರಾಘವಾಂಕನನ್ನು ಕುರಿತು ಕಾವ್ಯ ರಚಿಸಿದ ಸಿದ್ಧನಂಜೇಶ 'ರಾಘವಾಂಕ ಚಾರಿತ್ರ'ದಲ್ಲಿ 'ಸಿದ್ಧರಾಮ ಚಾರಿತ್ರ'ದ ಸಾರಾಂಶವನ್ನು ಬರೆಯುತ್ತಾನೆ. ಸಿದ್ಧನಂಜೇಶ ಅಲ್ಲಿ ಅಮುಗಿದೇವನ ಉಪದೇಶ, ಪ್ರಭುವಿನೊಂದಿಗೆ ಕಲ್ಯಾಣಗಮನ, ಚನ್ನಬಸವಣ್ಣನಿಂದ ಉಪದೇಶ, ಮಧುವಯ್ಯ-ಹರಳಯ್ಯರ ಪ್ರಸಂಗ- ಇವು ಪ್ರಕಟಿತ ಸಿದ್ಧರಾಮ ಚಾರಿತ್ರದಲ್ಲಿಲ್ಲ. ಈ ಭಾಗಗಳನ್ನು ಯಾರೋ ಉದ್ದೇಶಪೂರ್ವಕ ನಷ್ಟ ಮಾಡಿರಬಹುದೆಂಬ ಊಹೆ. ಇದನ್ನು ಪರಿಶೀಲಿಸಿದ ಡಾ. ನೇಗಿನಹಾಳ ಅವರು ಡಿ.ಎಲ್.ಎನ್. ಅವರ ೯ ಸಂಧಿಗಳ ಬದಲಾಗಿ ೮ ಸಂಧಿಗಳ ಶಾಸ್ತ್ರಶುದ್ಧಪ್ರತಿಯನ್ನು ಸಿದ್ಧಪಡಿಸಿದರು. ಪ್ರಸ್ತುತ ಕೃತಿಗೆ ಸುದೀರ್ಘ ಪ್ರಸ್ತಾವನೆ ಬರೆದ ಡಾ. ನೇಗಿನಹಾಳ ಅವರು ಸಿದ್ಧರಾಮನನ್ನು ಕುರಿತ ಶಾಸನಗಳ ಚಾರಿತ್ರಿಕ ಅಂಶ ಮತ್ತು ಸಾಹಿತ್ಯಿಕ ಕೃತಿಗಳಲ್ಲಿ ಅಡಗಿರುವ ಚಾರಿತ್ರಿಕ ಅಂಶಗಳನ್ನು ಅತ್ಯಂತ ವಸ್ತುನಿಷ್ಠವಾಗಿ ವ್ಯವಸ್ಥಿತವಾಗಿ ಶೋಧಿಸುವ ಪ್ರಯತ್ನ ಮಾಡಿದ್ದಾರೆ.

■■

# ಚಿಕ್ಕದೇವರಾಯ ವಂಶಾವಳಿ

ಕನ್ನಡ ಸಾಹಿತ್ಯ ಪರಿಷತ್ತು ೭೦ರ ದಶಕದಲ್ಲಿ ಪ್ರಾಚೀನ ಕನ್ನಡ ಕಾವ್ಯಗಳ ಗದ್ಯಾನುವಾದ ಪ್ರಕಟಿಸುವ ಯೋಜನೆಯೊಂದನ್ನು ರೂಪಿಸಿತು. ಈ ಮಾಲಿಕೆಯಲ್ಲಿ ಪಂಪನಿಂದ ೧೮ನೇ ಶತಮಾನದ ತಿರುಮಲಾರ್ಯನ ವರೆಗೆ ಅನೇಕ ಕೃತಿಗಳನ್ನು ಪ್ರಕಟಿಸಿತು. ಈ ಮಾಲಿಕೆಯಲ್ಲಿ ಡಾ. ಎಂ.ಬಿ. ನೇಗಿನಹಾಳ ಅವರು ತಿರುಮಲಾರ್ಯ ವಿರಚಿತ ಚಿಕ್ಕದೇವರಾಯ ವಂಶಾವಳಿ ಕೃತಿಗೆ ಗದ್ಯಾನುವಾದ ಬರೆದಿದ್ದಾರೆ.

ನಮ್ಮ ನಾಡಿನ ಪ್ರಾಚೀನ ಚರಿತ್ರೆಯನ್ನು ತಿಳಿಯಬಯಸುವವರಿಗೆ ನಮ್ಮ ಸಾಹಿತ್ಯದಲ್ಲಿಯ ಚಾರಿತ್ರಿಕ ಕೃತಿಗಳ ಕೊರತೆ ಎದ್ದು ಕಾಣುತ್ತದೆ. ಅಷ್ಟೇ ಅಸಮಾಧಾನವೂ ಉಂಟಾಗುತ್ತದೆ. ಇದು ಒಟ್ಟು ಭಾರತೀಯ ಸಾಹಿತ್ಯಕ್ಕೇ ಅನ್ವಯಿಸುವ ಮಾತು. ಸಂಸ್ಕೃತದ 'ರಾಜ ತರಂಗಿಣಿ'ಯೊಂದು ಮಾತ್ರ ಈ ಮಾತಿಗಿರುವ ಅಪವಾದ. ಕನ್ನಡದಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯ' ಮತ್ತು ರನ್ನನ 'ಗದಾಯುದ್ಧ'ಗಳಲ್ಲಿ ಇತಿಹಾಸವನ್ನು ಪೌರಾಣಿಕ ವ್ಯಕ್ತಿ ಹಾಗೂ ಘಟನೆಗಳೊಂದಿಗೆ ತೂಗಿ ನೋಡುವ ಪ್ರಯತ್ನವೇನೋ ಕಂಡು ಬರುತ್ತದೆ. ಆದರೆ ಅಂಥ ಕೃತಿಗಳಿಂದ ನಮ್ಮ ನಾಡಿನ ಇತಿಹಾಸ ನಿಚ್ಚಳವಾಗಿ ತಿಳಿದು ಬರುತ್ತದೆಂದಾಗಲೀ ಪಾಶ್ಚಾತ್ಯರ ಇತಿಹಾಸ ಕೃತಿಗಳಿಂದ ಮಾನವ ಕುಲಕ್ಕೆ ದೊರೆಯುವಂಥ ಪ್ರಯೋಜನಗಳು ದೊರೆಯುತ್ತವೆಯೆಂದಾಗಲೀ ಭಾವಿಸಬಾರದು. ಕಾರಣ ಭಾರತೀಯ ಸಾಹಿತ್ಯದ ಈ ಲೋಪದಿಂದಾಗಿ ನಮ್ಮ ಸಮಾಜ ಮತ್ತು ಸಂಸ್ಕೃತಿಗಳು ಹೇಳತೀರದಷ್ಟು ಹಾನಿ ಅನುಭವಿಸಿವೆ. ನಮ್ಮ ದೇಶದ ಪ್ರಾಚೀನರಿಗೆ ಚರಿತ್ರೆ ಹಾಗು ಭೂಗೋಲಗಳ ಸರಿಯಾದ ಜ್ಞಾನವಿದ್ದಿದ್ದರೆ ಮೊನ್ನೆ ಮೊನ್ನೆಯವರೆಗೆ ಬರಿದಾಗಿದ್ದ ಆಸ್ಟ್ರೇಲಿಯಾದಂಥ ವಿಶಾಲ ಭೂಖಂಡ ದೂರದ ಯುರೋಪಿನ ಜನತೆಯ ಪಾಲಾಗುತ್ತಿರಲಿಲ್ಲ.

ಪಂಪ ರನ್ನರಂತೆ ಕನ್ನಡದಲ್ಲಿ ಹಲವಾರು ಜನ ಕವಿಗಳು ಚರಿತ್ರೆಯನ್ನು ಕಾವ್ಯಗಳಲ್ಲು ಮುಚ್ಚುಮರೆಯಿಂದ ತಂದು ತಮ್ಮ ನಾಡಿನ ದೊರೆಗಳನ್ನೂ ಆಶ್ರಯದಾತರನ್ನೂ ಸುಪ್ರೀತಗೊಳಿಸುವ ಪ್ರಯತ್ನ ಮಾಡಿದ್ದಾರೆ. ಈ ಅಭಿಪ್ರಾಯದ ಕಕ್ಷೆಯಲ್ಲಿ ಕನ್ನಡದ ಪ್ರಥಮ ಉಪಲಬ್ಧ ಕೃತಿಯಾದ ಕವಿರಾಜಮಾರ್ಗವೂ ಸೇರುತ್ತದೆ. ತರುವಾಯದ ಒಂದನೆಯ ಗುಣವರ್ಮನ ಶೂದ್ರಕ, ಪೊನ್ನನ

ಭುವನೈಕ್ಯರಾಮಾಭ್ಯುದಯಗಳೂ ಈ ಸಾಲಿಗೆ ಸೇರುವ ಕೃತಿಗಳಾದರೂ ಇಂದು ಇವು ಉಪಲಬ್ಧವಿಲ್ಲ.

'ಚಿಕ್ಕದೇವರಾಯ ವಂಶಾವಳಿ', 'ಚಿಕ್ಕದೇವರಾಯ ವಿಜಯ'ದಂಥ ನೇರ ಚಾರಿತ್ರಿಕ ಕಾವ್ಯಗಳು ವಿಜಯನಗರ ಸಾಮ್ರಾಜ್ಯಪೂರ್ವದ ಕನ್ನಡ ಸಾಹಿತ್ಯದಲ್ಲಿ ಇದ್ದ ಬಗ್ಗೆ ಈವರೆಗೆ ಖಚಿತವಾದ ಆಧಾರಗಳಾವವೂ ಬೆಳಕಿಗೆ ಬಂದಿಲ್ಲ. ತರುವಾಯದಲ್ಲಿ ಮಾತ್ರ ಕುಮಾರರಾಮ ಸಾಂಗತ್ಯ, ಕಂಠೀರವ ನರಸರಾಜ ವಿಜಯದಂಥ ಕೃತಿಗಳು ರಚನೆಗೊಂಡದ್ದು ಸ್ಪಷ್ಟವಿದೆ. ಅದಕ್ಕೂ ಮುಂಚೆ ಇಂಥ ಕಾವ್ಯ ಪರಂಪರೆಯೊಂದು ಕನ್ನಡದಲ್ಲಿತ್ತೇ? ವಿಚಾರಣೀಯವಾದ ಅಂಶ. ಮತಕ್ಕೆ ಅತಿಯಾದ ಪ್ರಾಧಾನ್ಯ ಬಂದು ತಮ್ಮ ತಮ್ಮ ಮತವನ್ನು ಸಮರ್ಥಿಸುವುದೇ ಕವಿಗಳಿಗೆ ಮುಖ್ಯವಾಗಿದ್ದುದರಿಂದ ಇಂಥ ಪ್ರಯತ್ನಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಡೆದಿರಲಿಕ್ಕಿಲ್ಲವೆಂಬ ಭಾವನೆ ಉಂಟಾಗುತ್ತದೆ. ಮೇಲುನೋಟಕ್ಕೆ ಈ ಭಾವನೆ ಸರಿ ಎಂದೆನಿಸಿದರೂ ಚಾರಿತ್ರಿಕ ಕಾವ್ಯಗಳು ಇದ್ದಿರಬಹುದಾದ ಸಾಧ್ಯತೆಯನ್ನು ಸಂಪೂರ್ಣವಾಗಿ ತಳ್ಳಿಹಾಕಲಾಗದು.

ತಿರುಮಲಾರ್ಯನು ಮೈಸೂರು ದೊರೆ ದೊಡ್ಡದೇವರಾಯನ ಪುರಾಣಿಕನಾಗಿದ್ದ ಅಳಹಿಯ ಸಿಂಗರಾರ್ಯನ ಮಗನು. ಚಿಕ್ಕದೇವರಾಯನು ಹುಟ್ಟಿದ ವರ್ಷವೇ ಅಂದರೆ ಕ್ರಿ.ಶ. ೧೬೪೫ಕ್ಕೆ ಸರಿಹೊಂದುವ ಪಾರ್ಥಿವ ಸಂವತ್ಸರದಲ್ಲಿ, ಚಿಕ್ಕದೇವರಾಯನಿಗಿಂತ ಸ್ವಲ್ಪ ಮುಂದೆ ತಿರುಮಲಾರ್ಯನು ಜನಿಸಿದನು. ಕಂಠಿರವ ನರಸರಾಜನ ಪ್ರಧಾನಿಯಾಗಿದ್ದ ಅಪ್ಪಾಜಯ್ಯನ ಮಗಳು ಸಿಂಗಮ್ಮನೆಂಬವಳು ಇವನ ತಾಯಿ. ಆಸ್ಥಾನ ವಿದ್ವಾಂಸನಾಗಿದ್ದ ಈತ ಮಂತ್ರಿ ವಿಶಾಲಾಕ್ಷ ಪಂಡಿತನ ಮರಣದ ತರುವಾಯ ಮಂತ್ರಿಯಾದನು.

ಚಿಕ್ಕದೇವರಾಯನು ಕ್ರಿ.ಶ. ೧೭೦೪ರಲ್ಲಿ ತೀರಿಕೊಳ್ಳುವಾಗ ಚಿಕ್ಕವಯಸ್ಸಿನ ತನ್ನ ಮಗ ಕಂಠೀರವ ನರಸರಾಜನನ್ನು ಮಂತ್ರಿ ತಿರುಮಲಾರ್ಯ ಹಾಗು ಪ್ರಧಾನಿ ಅಪ್ಪಾಜಯ್ಯನ ಕೈಗೆ ಒಪ್ಪಿಸಿ ಅವರಿಗೆ ರಾಜ್ಯದ ಸರ್ವಾಧಿಕಾರವನ್ನು ಒಪ್ಪಿಸಿದನೆಂದು ತಿಳಿಯುತ್ತದೆ. ಇದರಿಂದ ಚಿಕ್ಕದೇವರಾಯನಿಗೆ ತಿರುಮಲಾರ್ಯನ ಮೇಲೆ ವಿಶೇಷ ವಿಶ್ವಾಸವಿದ್ದಂತೆ ವ್ಯಕ್ತವಾಗುತ್ತದೆ ಹಾಗು ಚಿಕ್ಕದೇವರಾಯನ ರಾಜ್ಯಭಿವೃದ್ಧಿಯ ಕಾರ್ಯದಲ್ಲಿ ತಿರುಮಲಾರ್ಯನು ಬಹುಮಹತ್ವದ ಪಾತ್ರ ನಿರ್ವಹಿಸಿದನೆಂದು ಗೊತ್ತಾಗುತ್ತದೆ.

ಈ ಕಾರಣಕ್ಕಾಗಿ ತಿರುಮಲಾರ್ಯನು 'ಚಿಕ್ಕದೇವರಾಯ ವಂಶಾವಳಿ' ಮತ್ತು 'ಚಿಕ್ಕದೇವರಾಯ ವಿಜಯ' ಎಂಬ ಕೃತಿಗಳನ್ನು ರಚಿಸಿದನೆಂದು ತಿಳಿದು ಬರುತ್ತದೆ. ಡಾ. ಎಂ. ಬಿ. ನೇಗಿನಹಾಳ ಅವರು ಚಿಕ್ಕದೇವರಾಯ ವಂಶಾವಳಿಯ

ಗದ್ಯಾನುವಾದವನ್ನು ತುಂಬ ಆಪ್ತವಾಗಿ ಮಾಡಿದ್ದಾರೆ. ಅವರ ಗದ್ಯಾನುವಾದದ ಒಂದು ಮಾದರಿ ಹೀಗಿದೆ:

'ಸ್ವಸ್ತಿ, ಸಮುಸಭೂಮಂಡಲವೆಂಬ ಕಮಲಕ್ಕೆ ಕರ್ಣಿಕೆಯಂತಿರುವ ಮೇರುಪರ್ವತದವರೆಗೆ ಕೌಶಲದಿಂದಲಂಕರಿಸಿದಂತೆ ಒಪ್ಪಿರುವ ಭಾರತ ದೇಶವಿದೆ. ಅದಕ್ಕೆ ಮಂಡನದಂತಿದ್ದು ಅದರ ಅತಿಶಯವಾದ ವೈಭವಕ್ಕೆ ಹೆಚ್ಚಳವುಂಟು ಮಾಡುವ ಕರ್ನಾಟಕ ದೇಶದಲ್ಲಿ, ಕಾವೇರಿಯ ದಕ್ಷಿಣ ತೀರದ ಸಮೀಪದಲ್ಲೆಸೆವ, ಮೈಸೂರು ಪಟ್ಟಣವಿದೆ. ಅಲ್ಲಿ ಸಕಲ ಸಾಮಂತ ಕಿರೀಟಕೋಟಿ ರತ್ನಕಾಂತಿಯಲ್ಲಿ ಚಿತ್ರಿತವಾದ ಪಾದಕಮಲವುಳ್ಳವನೆನಿಸಿ ಶೋಭಿಸುವ ಚಾಮರಾಜನಿಗೆ, ಚತುರತೆಗೊಲಿದು ದೇಹ ಧರಿಸಿ ಬಳಿಸಲ್ಲುವ ಸಾಮ ದಾನ ಭೇದ ದಂಡಗಳೆಂಬ ನಾಲ್ಕು ಉಪಾಯಗಳಂತೆ, ತಮ್ಮಿಂದ ತಾವೆ ಬಯಸಿ ಬಂದ ಹಸ್ತ್ಯಶ್ವರಥಪದಾತಿಗಳೆಂಬ ಚತುರ್ವರ್ಗದಂತೆ, ಈತನ ಸತ್ವಾದಿ ಗುಣಗಳಿಂದಾಗಿ ದಶರಥನೆಂದು ಭಾವಿಸಿ ಮತ್ತೆ ಜನಿಸಿದ ನಾರಾಯಣನ ನಾಲ್ಕು ದೇಹಗಳಂತೆ, ಈತನ ಸೇನಾಧೂಳಿಗೆ ಅಳುಕಿ ನಮಸ್ಕರಿಸಲೋಸುಗ ಶರೀರ ಧಾರಣೆ ಮಾಡಿ ಎದ್ದು ಬಂದ ನಾಲ್ಕು ಕಡಲುಗಳಂತೆ ಪ್ರಸಿದ್ಧರಾದ ನಾಲ್ವರು ಮಕ್ಕಳಲ್ಲಿ ಹಿರಿಯನು, ಎಲ್ಲಾ ರಾಜರಿಗೂ ಹಿರಿಯನೂ ಎನಿಸಿರುವ ರಾಜನೃಪನು ತಮ್ಮ ಕುಲಕ್ರಮದಿಂದ ಬಂದ ರಾಜ್ಯವನ್ನು ತಮ್ಮಂದಿರೊಂದಿಗೆ ಆಳುತ್ತಿರಲು–

ಅತ್ತ ಉತ್ತರದೇಶದ ತುಂಗಭದ್ರಾ ತೀರದ ಪಂಪೆಯಲ್ಲಿ ಹರಿಹರ ಬುಕ್ಕ ಮೊದಲಾದ ಕುರುಬರಾಜರ ತರುವಾಯ ರಾಜ್ಯವಾಳಿದ ತುಳುವಕುಲದ ಈಶ್ವರ ನರಸಿಂಹ ವೀರನರಸಿಂಹ ಕೃಷ್ಣದೇವರಾಯ ಅಚ್ಯುತರಾಯರೆಂಬ ಐವರು ರಾಜರಾದ ಮೇಲೆ ಮುದದಿಂದ ಇಳೆಯನ್ನು ಕಾಪಾಡಿದ ಸದಾಶಿವರಾಯನಿಗೆ ಸೇನಾಪತಿಯಾದ ಆಂಧ್ರಕುಲದ ರಾಮರಾಯನು ತನ್ನ ರಾಜನಿಗೆ ದ್ರಾವಿಡ ಆಂಧ್ರ ಕರ್ನಾಟಕಗಳ ಸಾಮ್ರಾಜ್ಯವನ್ನು ಸಾಧಿಸಿಕೊಟ್ಟು ಸ್ವಾಮಿಕಾರ್ಯಕ್ಕೆ ಪ್ರಾಣಾರ್ಪಣೆ ಮಾಡಿ, ಒಮ್ಮೆ ಉತ್ತರ ದಿಗ್ವಜಯದಲ್ಲಿ ಸೊಕ್ಕೇರಿದ ಯವನ ಸೈನ್ಯವನ್ನು ಒಕ್ಕಲಿಕ್ಕಿ ಕೀರ್ತಿಶೇಷನಾದನು. ಅವನ ತಮ್ಮ ಎರೆದಿಮ್ಮಿರಾಜನು ಅಂದಿನ ಯುದ್ಧದಲ್ಲಿ ಅಳಿದುಳಿದವರನ್ನು ಕೂಡಿಕೊಂಡು ಪಟ್ಟಣಕ್ಕೆ ನಡೆತಂದು ತನ್ನ ಒಡೆಯನ ಸಂಪದಕ್ಕೆ ಆಶೆಪಟ್ಟು ಅವನನ್ನು ಅವಮಾನಪಡಿಸಿದ ತಾನೇ ರಾಜನಾದ ಹೀನ ಕಾರ್ಯದಿಂದಾಗಿ ವಿದ್ಯಾನಗರವು ಕೆಲವೇ ದಿನಗಳಲ್ಲಿ ನಾಶವಾಯಿತು. ಅಲ್ಲಿಂದ (ಎರೆದಿಮ್ಮಿರಾಜನು) ಪೆನುಗೊಂಡೆಗೆ ಬಂದು ಒಂದೆರಡು ವರುಷಗಳಿದ್ದು ಮರಣ ಹೊಂದುವ ಸಮಯದಲ್ಲಿ ತನ್ನ ಮೂವರು ಮಕ್ಕಳೊಳಗೆ ಮೊದಲನೆಯವನಾದ ಶ್ರೀರಂಗರಾಜನನ್ನು ಪೆನುಗೊಂಡೆಯಲ್ಲಿಟ್ಟು ಆತನಿಗೆ ತೆಲುಗನಾಡೊಡೆತನವನ್ನೂ

ಎರಡನೆಯವನಾದ ರಾಮರಾಯನನ್ನು ಶ್ರೀರಂಗಪಟ್ಟಣದಲ್ಲಿಟ್ಟು ಆತನಿಗೆ ಕರ್ನಾಟಕದೇಶದೊಡೆತನವನ್ನೂ ಮೂರನೆಯ ವೆಂಕಟಪತಿರಾಯನನ್ನು ಚಂದ್ರಗಿರಿಯಲ್ಲಿಟ್ಟು ತುಂಡೀರ ಚೋಳ ಪಾಂಡ್ಯ ಮಂಡಲಗಳ ಒಡೆತನವನ್ನೂ ಕೊಟ್ಟನು. ಇವರಲ್ಲಿ ಶ್ರೀರಂಗರಾಜನು ಅಪುತ್ರಕನಾಗಿ ಸ್ವರ್ಗವಾಸಿಯಾಗಲು ಆ ವೆಂಕಟಪತಿರಾಯನು ಪೆನುಗೊಂಡೆಯಲ್ಲಿದ್ದು ರಾಜ್ಯಪಾಲಿಸತೊಡಗಿದನು.'

ಹೀಗೆ ಡಾ. ನೇಗಿನಹಾಳ ಅವರ ಭಾವಾನುವಾದವು ಓದುಗರನ್ನು ಸಹಜವಾಗಿ ತನ್ನತ್ತ ಸೆಳೆಯುತ್ತದೆ.

■■

# ಜಾನಪದ ದುಡಿಮೆ

ಶ್ರೀಸಾಮಾನ್ಯರು ದಿನನಿತ್ಯದ ಆಡುಭಾಷೆಯಲ್ಲಿ ಹಾಡಿದ ಹಾಡು, ಹೇಳಿದ ಕಥೆ, ಒಡ್ಡಿದ ಒಗಟು, ಬಳಸಿದ ಗಾದೆ, ಸಂಭಾಷಣೆಯಲ್ಲಿ ಮಾತುಗಳು ಬಾಯಿಂದ ಬಾಯಿಗೆ ಬಳಕೆಯಲ್ಲಿರುತ್ತವೆ. ಇದನ್ನೇ ಜನಪದ ಸಾಹಿತ್ಯವೆನ್ನುತ್ತೇವೆ. ಒಂದು ಜನಾಂಗದ, ಪ್ರದೇಶದ ಕೊಂಡಿ ಸಂಪ್ರದಾಯದ ಹಾಡು, ಮಾತುಗಳೇ ಜನಪದ ಸಾಹಿತ್ಯ ಎಂದೂ ವ್ಯಾಖ್ಯಾನಿಸಿದ್ದು. ಶ್ರದ್ಧೆ-ಸಂಪ್ರದಾಯಗಳ ಸುಳಿಯಲ್ಲಿ ಈ ಸಾಹಿತ್ಯ ಹುಟ್ಟಿಕೊಂಡು ಬಂದಿರುತ್ತದೆ. ಮನುಷ್ಯನ ಹುಟ್ಟು ಸಾವುಗಳ ಮಧ್ಯಂತರದ ಬದುಕೆಲ್ಲಾ ಈ ಸಾಹಿತ್ಯಕ್ಕೆ ವಸ್ತುವಾಗುತ್ತದೆ. ತೀರ ಹತ್ತಿರದ ಈ ಸಾಹಿತ್ಯದ ಲಾಭ ಪಡೆದುಕೊಂಡ ಪಂಡಿತರಬೇಕರು ಇದನ್ನು ಅಲಕ್ಷಿಸಿ ಹೀಗಳೆದದ್ದರಿಂದ ಇದಕ್ಕೆ ಗ್ರಂಥಸ್ಥ, ಸಾಹಿತ್ಯ ಮುದ್ರೆ ಮಾಡುವ ಭಾಗ್ಯ ಒದಗಿಬರಲಿಲ್ಲ. ಅದು ಕಂಠಸ್ಥವಾಗಿ ಶ್ರೀಸಾಮಾನ್ಯರ ಬಾಯಲ್ಲಿ ಹೇಗೊ ಬದುಕಿಕೊಂಡು ಬಂದಿದೆ. ಅಂದಂದಿಗೇನೇ ಈ ಸಾಹಿತ್ಯದ ಸಂಗ್ರಹ, ಸಂಪಾದನಾ ಕಾರ್ಯ ನಡೆಯುತ್ತ ಬಂದಿದ್ದರೆ ಕನ್ನಡ ಸಾಹಿತ್ಯದ ದಿಸೆಯೇ ಬದಲಾಗುತ್ತಿತ್ತು. 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಕವಿರಾಜಮಾರ್ಗಕಾರ ನುಡಿದ ನುಡಿ ಜನಪದ ಸಾಹಿತ್ಯವನ್ನು ಕುರಿತೇ ಆಡಿದ್ದೆಂದು ಭಾವಿಸಿ ಇದರ ಪ್ರಾಚೀನತೆಯನ್ನು ಗುರುತಿಸಲಾಗಿದೆ.

ರೂಸೋನ ವೈಚಾರಿಕ ಕ್ರಾಂತಿಯಿಂದಾಗಿ ಸಾಮಾಜಿಕ ಬದಲಾವಣೆಯಾದಂತೆ ಸಾಹಿತ್ಯದಲ್ಲೂ ಮಾರ್ಪಾಟಾಯಿತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನಪದ ಸಾಹಿತ್ಯಕ್ಕೆ ವಿಶೇಷ ಮನ್ನಣೆ ದೊರೆಯಹತ್ತಿತು. ಈ ಗಾಳಿ ಭಾರತದಲ್ಲಿಯೂ ಬೀಸಿದುದರ ಪರಿಣಾಮವಾಗಿ ಜನಪದ ಸಾಹಿತ್ಯದ ಸಂಗ್ರಹ-ಸಂಪಾದನೆ; ಅಧ್ಯಯನ ಅಧ್ಯಾಪನ ಕಾರ್ಯ ಪ್ರಾರಂಭವಾಯಿತು. ಮೊದಮೊದಲು ಪಾಶ್ಚಾತ್ಯರಿಂದ ಪ್ರಾರಂಭವಾದ ಈ ಕಾರ್ಯ ಕರ್ನಾಟಕದಲ್ಲಿಯೂ ಮೊದಲು ದುಡಿದವರು ಪಾಶ್ಚಾತ್ಯರೇ. ತರುವಾಯ ವಿಜಾಪುರ ಜಿಲ್ಲೆಯ ಹಲಸಂಗಿ ಗೆಳೆಯರ ಗುಂಪಿನ ಮಧುರಚೆನ್ನ, ಕಾಪಸೆ ರೇವಪ್ಪ, ಧೂಲಾ ಸಾಹೇಬ, ಸಿಂಪಿ ಲಿಂಗಣ್ಣ ಈ ಮೊದಲಾದವರ ಪ್ರಯತ್ನದ ಫಲವಾಗಿ 'ಗರತಿಯ ಹಾಡು', 'ಮಲ್ಲಿಗೆ ದಂಡೆ'ಯಂತಹ ಉತ್ಕೃಷ್ಟ ಜಾನಪದ ಸಂಕಲನಗಳು ಬೆಳಕಿಗೆ ಬಂದವು. ಡಾ. ಗದ್ದಿಗಿಮಠ ಅವರು ಪ್ರಪ್ರಥಮವಾಗಿ

ಜಾನಪದ ವಿಷಯವನ್ನೇ ಕುರಿತು ಕನ್ನಡದಲ್ಲಿ ಸಂಶೋಧನಾ ಮಹಾಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿ ಪಿಎಚ್.ಡಿ. ಪದವಿಯನ್ನು ಪಡೆದರು.

ಮೈಸೂರು ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿಗಾಗಿ ಜಾನಪದವನ್ನು ಅಭ್ಯಾಸ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟು ಹಲವಾರು ಕೃತಿಗಳನ್ನು ಪ್ರಕಟಿಸಿತು. ಕರ್ನಾಟಕ ವಿಶ್ವವಿದ್ಯಾಲಯವೂ ಕೂಡ ಇದೇ ಜಾಡನ್ನು ಅನುಸರಿಸಿ ಜಾನಪದ ಅಧ್ಯಯನ, ಸಂಶೋಧನೆಗೆ ಅನುವು ಮಾಡಿಕೊಟ್ಟಿತು. ವರುಷಕ್ಕೊಮ್ಮೆ 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನ' ಏರ್ಪಡಿಸುತ್ತ ಹಳ್ಳಿಯ ಕಲಾಕಾರರನ್ನು ವಿಶ್ವವಿದ್ಯಾಲಯದ ವೇದಿಕೆಯ ಮೇಲೆ ಆಸೀನರಾಗುವ, ಕುಣಿಯುವ ಅವಕಾಶ ಮಾಡಿಕೊಟ್ಟಿದ್ದು ಕರ್ನಾಟಕ ವಿಶ್ವವಿದ್ಯಾಲಯವು. ಈ ಸಂದರ್ಭದಲ್ಲಿ ವಿಚಾರಗೋಷ್ಠಿಗಳನ್ನು ಏರ್ಪಡಿಸಿ, ಆ ಪ್ರಬಂಧಗಳನ್ನು 'ಜಾನಪದ ಸಾಹಿತ್ಯ ದರ್ಶನ' ಹೆಸರಿನಲ್ಲಿ ಪ್ರತಿವರ್ಷವೂ ಸಂಪಾದಿಸಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಕಾರ್ಯಪ್ರವೃತ್ತವಾಯಿತು. ಇದೆಲ್ಲಕ್ಕೂ ಚೇತನಶಕ್ತಿಯಾಗಿ ದುಡಿದವರು ಡಾ. ನೇಗಿನಹಾಳ ಅವರು.

ಶ್ರೀಸಾಮಾನ್ಯರ ಬದುಕಿನ ಅಳಲನ್ನೂ ಹೃದಯದ ಶ್ರೀಮಂತಿಕೆಯನ್ನು ಅರ್ಥಮಾಡಿಕೊಳ್ಳಲು ಜನಪದ ಸಾಹಿತ್ಯ ಸಂಸ್ಕೃತಿಯ ಅಭ್ಯಾಸ, ಸಂಶೋಧನ ಅಗತ್ಯವೆಂದು ಹಳ್ಳಿ ಹಳ್ಳಿಗಳನ್ನು ಸುತ್ತುವರಿದು ಜನಪದರ ಮನವೊಲಿಸಿದ ಶ್ರೇಯಸ್ಸೂ ಡಾ. ನೇಗಿನಹಾಳ ಅವರದು. 'ಈ ಸಾಹಿತ್ಯದ ಅಭ್ಯಾಸ ಮಾನವ ಜನಾಂಗದ ಮೂಲಭೂತವಾದ ಅಭ್ಯಾಸ. ಏಕೆಂದರೆ ಇಲ್ಲಿ ನುಡಿಯುವುದು, ಮಿಡಿಯುವುದು– ಮೂಲ ಮಾನವನ ಆಲೋಚನೆ, ಅನಿಸಿಕೆಗಳು. ಬಾಹ್ಯಸಂಸ್ಕಾರದ ಯಾವ ಕೃತ್ರಿಮದ ಸೋಂಕೂ ಇಲ್ಲದೆ ನೈಜ ಮಾನವತ್ವ ಇಲ್ಲಿ ಮೆರೆಯುತ್ತದೆ. ಸಾಮಾನ್ಯರ ಬದುಕಿನ ಅಳಲನ್ನೂ ಅಂಥದರಲ್ಲಿಯೂ ಅವರು ಕಾಪಾಡಿಕೊಂಡು ಬಂದ ಹೃದಯದ ಶ್ರೀಮಂತಿಕೆಯನ್ನೂ ಅರ್ಥಮಾಡಿಕೊಳ್ಳಬೇಕಾದರೆ ಜನಪದ ಸಾಹಿತ್ಯದ ಅಭ್ಯಾಸ ಅನಿವಾರ್ಯ' ಎಂಬ ಡಾ. ನೇಗಿನಹಾಳ ಅವರ ಮಾತನ್ನು ಕೇಳಿದಾಗ ಮೈನವಿರೇಳುತ್ತದೆ. ಜನಪದ ಸಾಹಿತ್ಯವೆಂದರೆ ಜೀವಂತ ಸಾಹಿತ್ಯವೆಂದೂ ಜೀವನ ಸಾಹಿತ್ಯವೆಂದೂ ಕರೆದು, ಅದು ಎಂದೂ ಬತ್ತದ ಝರಿ ಎಂದೂ ಅದರ ಮಹತಿಯನ್ನು ಎತ್ತಿ ಹೇಳಿದ್ದಾರೆ.

'ಪ್ರಪಂಚದಲ್ಲಿ ಶಿಷ್ಟ ಸಾಹಿತ್ಯಕ್ಕಿಂತಲೂ ಮೊದಲು ಮೂಡಿಬಂದುದು ಜನಪದ ಸಾಹಿತ್ಯ. ಸರಿಯಾಗಿ ವಿವೇಚಿಸಿದರೆ ಶಿಷ್ಟಸಾಹಿತ್ಯದ ಉಗಮ, ವಿಕಾಸ, ಬೆಳವಣಿಗೆಗೆ ಜನಪದ ಸಾಹಿತ್ಯ ಪ್ರೇರಕಶಕ್ತಿಯಾಗಿ ನಿಂತಿರುವುದು ಸ್ಪಷ್ಟವಾಗಿ ತೋರುವುದು.

ಹೀಗಿದ್ದರೂ ಶಿಷ್ಟಕವಿಗಳು ಜನಪದ ಸಾಹಿತ್ಯವನ್ನು ಕಡೆಗಣಿಸಿ ನೋಡಿದುದು ದುರ್ದೈವದ ಸಂಗತಿ. ಜನಪದ ಕವಿಗಳು ಸ್ವಾರ್ಥಸಾಧನೆಗಾಗಿ ಅನ್ಯರನ್ನು ಹೊಗಳ ಹೊರಟವರಲ್ಲ. ಅವರದು ನಿಷ್ಕಾಮಕರ್ಮ. ತಾವು ಕಂಡುದನ್ನು, ಕೇಳಿದುದನ್ನು ಅನುಭವಕ್ಕೆ ಬಂದ ನೋವು ನಲಿವುಗಳನ್ನು ನೆನೆದು ಮನದುಂಬಿ ಹಾಡುತ್ತಾ ಬಂದಿದ್ದಾರೆ. ಅದು ಜೀವನ ಸಾಹಿತ್ಯ, ಜೀವಂತ ಸಾಹಿತ್ಯ. ಜನಪದ ಸಾಹಿತ್ಯದ ಝರಿ ಎಂದೂ ಬತ್ತಿಲ್ಲ. ಮುಂದೆಯೂ ಬತ್ತುವುದಿಲ್ಲ. ಕಾಲಮಾನಕ್ಕನುಗುಣವಾಗಿ ಅದಕ್ಕೆ ಬದುಕುವ ದಾರಿ ಇದ್ದೇ ಇದೆ.' ಎಂದು ಜಾನಪದಕ್ಕೆ ಸಾವು ಎಂಬುದಿಲ್ಲ ಎಂಬುದನ್ನು ಪುನರುಚ್ಚರಿಸಿ, ಹಲವು ದೃಷ್ಟಿಯಲ್ಲಿ ಹರಿಯುವ ಮನವನ್ನು ಒಂದೆಡೆಗೆ ನಿಲ್ಲಿಸಿ, ಜೀವನವೊಂದು ಜೋಕಾಲಿಯೆಂದು ಭಾವಿಸಿ, ಆ ಜೋಕಾಲಿಯ ಜೀಕಿಗೆ ಅಂಟಿಕೊಂಡು ಬಂದ ಜನಪದರ ಅಸಂಖ್ಯಾತ ಹಾಡುಗಳನ್ನು ಆಟಪಾಟಗಳನ್ನು ಸಂಗ್ರಹಿಸಿ ಪ್ರಕಟಿಸಿದುದು ಡಾ. ನೇಗಿನಹಾಳ ಅವರ ದುಡಿಮೆಗೆ ಸಾಕ್ಷಿಯಾಗಿದೆ.

'ಜೀವ ಒಂದು ಜೋಕಾಲಿಯಂತೆ. ಹಿಂದು, ಮುಂದು ಹರದಾಡಿ ಮೂಲ ಮೆಟ್ಟಿಗೆ ಬಂದು ನಿಲ್ಲುತ್ತದೆ. ಜೀವಂತ ಜೀವನದ ಹಣೆಯ ಬರಹವೇ ಹೀಗೆ. ಸಂಪ್ರದಾಯ ಕ್ರಾಂತಿಗಳ ಮಧ್ಯದಲ್ಲಿ ಜೀವನ ನೆಮ್ಮದಿ ಹೊಂದಲು ಆಶಿಸುತ್ತದೆ. ಬಹುಕಾಲದ ಸಂಪ್ರದಾಯಕ್ಕೆ ಬೇಸತ್ತಾಗ ಮಾನವನು ಕ್ರಾಂತಿಯ ಕಡೆಗೆ ತೂಗುತ್ತಾನೆ. ಕ್ರಾಂತಿ ಸಾಕೆನಿಸಿದಾಗ ಪುನಃ ಸಂಪ್ರದಾಯಕ್ಕೆ ಜೋಲುತ್ತಾನೆ. ಹೀಗಾಗಿ ಮಾನವನ ಜೀವನವು ಜೋಕಾಲಿಯಂತೆ ಹಿಂದಕ್ಕೂ ಮುಂದಕ್ಕೂ ಜೋಲಿ ಹೊಡೆಯುತ್ತಲೇ ಇದೆ. ಅವರ ಆಚಾರ-ವಿಚಾರ, ರೀತಿ-ನೀತಿ, ಪ್ರೇಮ-ಕಾಮ, ಅನಿಸು-ತಿನಿಸು, ಆಟ-ಪಾಟ ಎಲ್ಲದರಲ್ಲಿಯೂ ಜೋಕಾಲಿಯ ಸ್ವಭಾವ ಮೈವೆತ್ತು ನಿಂತಿದೆ.' ಹೀಗೆಂದು ಡಾ. ನೇಗಿನಹಾಳ ಅವರು ವಿವಿಧ ಬಗೆಯ ಜಾನಪದ ಹಾಡುಗಳ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ.

ಹಿಂದಕ್ಕೆ ಗಾಂವಠಿ ಶಾಲೆಗಳಿದ್ದವು. ಓದಿಸು ಮಠವೆಂದೂ ಅವುಗಳನ್ನು ಕರೆಯು ತ್ತಿದ್ದರು. ಆ ಓದಿಸುಮಠದ ಅಯ್ಯಗಳೆ ಶಿಕ್ಷಕರಾಗಿ, ಖಾಸಗಿಯಾಗಿ ಮಕ್ಕಳಿಗೆ ಪಾಠ ಹೇಳಿ ಕೊಡುತ್ತಿದ್ದರು. ಅವರಿಗೆ ವರುಷಕ್ಕೊಮ್ಮೆ ಮಹಾನವಮಿ ಕಾಲದಲ್ಲಿ ಮಕ್ಕಳು  ಪದಗಳನ್ನು ಹಾಡುತ್ತ ತಮ್ಮ ಗುರುಗಳಿಗೆ ಕಾಣಿಕೆ ಎತ್ತುವ ಪರಿಪಾಠವಿತ್ತು. ಆಗ ಹಾಡುತ್ತಿದ್ದ ಹಾಡುಗಳೇ ಮಾನೌಮಿ (ಮಹಾನವಮಿ) ಪದಗಳಾಗಿವೆ. ಚೌಪದನವೆಂದೂ ಇವುಗಳನ್ನು ಕರೆಯುವರು ಹೆಸರೇ ಸೂಚಿಸುವಂತೆ ನಾಲ್ಕು ಸಾಲಿನ ಪದ್ಯಗಳಾಗಿವೆ. ಮಾರ್ಗ ಮತ್ತು ದೇಶಿ ಇವೆರಡರ ಮಧ್ಯದಲ್ಲಿ ಬೆಳದುಕೊಂಡು ಚೌಪದನಗಳನ್ನು-ಹಾಡುಗಬ್ಬ, ನೀಳ್ಗವನ, ಕಥನಕವನ ಎಂದೆಲ್ಲ ಕರೆಯುವುದುಂಟು. ಗಣೇಶ, ವೀರಭದ್ರ, ಗಂಗೆಗೌರಿ, ಕಂಸವಧ, ಪೌರಾಣಿಕ

ಹಾಡುಗಳು, ಗುರುಭಕ್ತಾಂಡಾರಿ, ಚಂದ್ರಶೇಖರ, ಸೋಮಶೇಖರ, ವೀರಸಂಗಯ್ಯ ಮೊದಲಾದವು ಐತಿಹಾಸಿಕ ಹಾಡುಗಳಾಗಿಯೂ ಬೆಡಗಿನ ಚೌಪದನಗಳು ಸಾಮಾಜಿಕ ಹಾಡುಗಳಾಗಿಯೂ ಭಾಗ–ಒಂದರಲ್ಲಿ ಸಂಕಲನವಾಗಿವೆ.

ಮದುವೆಯಿಂದ ಮಸಣದವರೆಗೆ ಸಾಗಿಬಂದ ಶ್ರೀಸಾಮಾನ್ಯನ ದಾಂಪತ್ಯ ಜೀವನದಲ್ಲಿ ಕಾಣುವ ಸರಸವಿರಸಗಳನ್ನು ಜೀವನ ಜೋಕಾಲಿ ಭಾಗ ಎರಡರಲ್ಲಿ ಕಾಣುತ್ತೇವೆ. ಕನ್ಯಾನೋಡುವಾಗಿನಿಂದ ಹಿಡಿದು ಮದುವೆ, ಸೀಮಂತಿನಿ, ತೊಟ್ಟಿಲು ಕಾರ್ಯ ಮುಂದೆ ಮಸಣದವರೆಗೂ ಹೆಣ್ಣುಮಕ್ಕಳು ಹಾಡುತ್ತಿರುವ ಹಾಡುಗಳನ್ನು ಸರಸ ವಿರಸ ಈ ಭಾಗ ಎರಡರಲ್ಲಿ ಓದುತ್ತೇವೆ.

ಹೋಳಿಹಬ್ಬ ವಿಶೇಷವಾಗಿ ಗಂಡಸರದು. ಗಂಡಸರು ಹಾಡುವ ಹಾಡುಗಳೇ ಇಲ್ಲಿ ಜಾಸ್ತಿ. ದುಂದುಮೆ, ತ್ರಿಪದಿ, ಕೋಲುಪದ–ಹೀಗೆ ವಿವಿಧಮಟ್ಟದಲ್ಲಿ ಬೆಳೆದು ಬಂದ ಹಾಡುಗಳಲ್ಲಿ ಶೃಂಗಾರರಸದ್ದೇ ಮೇಲುಗೈ. ಇಂಥ ಹಾಡುಗಳನ್ನು ಭಾಗ ನಾಲ್ಕರಲ್ಲಿ ಕಾಣುತ್ತೇವೆ. ಕಾಮನನ್ನು ಸುಟ್ಟು ಹಾಕುವುದು ಸಾಂಕೇತಿಕ ಹಬ್ಬ. ಪ್ರತಿಯೊಬ್ಬರೂ ತಮ್ಮಲ್ಲಿರುವ ಕಾಮವಾಸನೆಯನ್ನು ಸುಟ್ಟು ಹಾಕುವುದೇ ಇದಕ್ಕಿರುವ ಒಳ ಅರ್ಥ. ಹೀಗೆ ಮಾಡದೆ ಕೇವಲ ಕುಳ್ಳು ಕಟ್ಟಿಗೆ ಸುಡುವುದು ಮಾತ್ರ ನಮಗೆ ಹೋಳಿ ಹಬ್ಬವಾದಂತಿದೆ. ಅಂತೆಯೆ ಜನಪದ ಕವಿ ಹೀಗೆ ಗೇಲಿ ಮಾಡಿದ್ದಾನೆ:

ಕಾಮಣ್ಣ ಸುಡಲಿಲ್ಲ, ಕುರುಳ್ಮಣ್ಣ ಸುಟ್ಟೆ
ಕಾಮಣ್ಣ ಬಿಡಲಿಲ್ಲ ನೀ ಕಣಗೆಟ್ಟೆ
ಕಾಯ ಮಾಡಿದ ಲೋಕಕ ಮೂರಾಬಟ್ಟೆ
ಕಾಮಣ್ಣ ಗೆಲಿದರೆ ಅವ ಬಲುಗಟ್ಟಿ

ಇಂಥ ಹೋಳೀ ಸಂಪ್ರದಾಯದ ಹಾಡುಗಳ ಸಂಗ್ರಹವೇ ಈ ಕೃತಿಯಾಗಿರುತ್ತದೆ. ದುಂದುಮೆ ಪದಗಳೂ ಹೋಳೀ ಸಂಪ್ರದಾಯದ ಹಾಡುಗಳೇ ಆಗಿರುತ್ತವೆ. ಡಾ.ನೇಗಿನಹಾಳಅವರೇ ಹೇಳುವಂತೆ:

'ಹೋಳೀ ಹಾಡು ಮತ್ತು ದುಂದುಮೆ ಪದ ಹೋಳೀ ಸಾಹಿತ್ಯದ ಎರಡು ಪ್ರಮುಖ ಅಂಗಗಳಾದರೂ ಅವೆರಡೂ ಅವಳಿ ಮಕ್ಕಳಿದ್ದಂತೆ. ಹೊರನೋಟಕ್ಕೆ ಅವೆರಡೂ ಒಂದೇ ಬಗೆಯಾಗಿ ಕಂಡರೂ ಅವುಗಳಲ್ಲಿ ಹುದುಗಿದ ಒಳದನಿ ಅವನ್ನು ಬೇರ್ಪಡಿಸಿ ಇರುತ್ತದೆ. ಅವುಗಳ ಗತಿ ಭಿನ್ನ ಭಿನ್ನವಾಗುತ್ತದೆ. ಹಾಡಿಸಿ ನೋಡಿದಾಗ ಅವುಗಳ ಒಳಗುಟ್ಟು ತಿಳಿಯಬಲ್ಲುದು. ಹೋಳೀ ಹಾಡು ರಗಳೆಯಂತೆ ಒಂದೇಸಮನೆ ಓಡುತ್ತದೆ. ಆದರೆ ದುಂದುಮೆ ಪದದ ಓಟವೇ ಬೇರೆ. ಪದಪದಕ್ಕೂ ಒಂದೊಂದು ಹೊಸ ಭಂಗಿಯನ್ನು ಅದು ಪ್ರಕಟಿಸಬಲ್ಲುದು. ಇದಕ್ಕೆ ಮುಖ್ಯಕಾರಣ

ದುಂದುಮೆ ಪದದ ಪಕ್ಕವಾದ್ಯ. ಅದಕ್ಕೆ ದಿಮ್ಮು ಎಂದು ಕರೆಯುತ್ತಾರೆ. ದಿಮ್ಮು ಆಗಾಗ ತನ್ನ ಗತಿಯನ್ನು ಬದಲಿಸುತ್ತದೆ. ಅದರ ತಾಳ ತಾನಗಳಿಗೆ ಹೊಂದಿಕೊಂಡು ದುಂದುಮೆಪದ ಒಡನುಡಿಯ ಬೇಕಾಗುವುದು; ಅಲ್ಲಿಯೇ ದುಂದುಮೆಯ ವೈಶಿಷ್ಟ್ಯ ಒಡೆದು ಕಾಣುವುದು.'

ಈ ಸಂಗ್ರಹದಲ್ಲಿ ಆದಯ್ಯ, ಪುರಾತನರ ಪೂಜೆ, ಕೀಚಕವಧೆ, ಕಿತ್ತೂರ ದುಂದುಮೆ, ವೀರರಾಣಿ ಚೆನ್ನಮ್ಮ, ನುಲಿಯ ಚೆಂದಯ್ಯ, ಶ್ರೀಕೃಷ್ಣಲೀಲೆ, ಶಿವನಾಮದಿಂದ ಸವೆದೀತವಾಸ, ಹುಬ್ಬಳ್ಳಿಯ ಮಂಗ–ಮೊದಲಾದ ದುಂದುಮೆ ಹಾಡುಗಳನ್ನು ಓದುತ್ತೇವೆ. ಬೀರಣ್ಣನ ಮಹಾತ್ಮೆಯನ್ನು ಸಾರುವ ಹಾಲುಮತದವರ ಡೊಳ್ಳು ಸಂಪ್ರದಾಯದ ಹಾಡುಗಳನ್ನು ಜೀವನ ಜೋಕಾಲಿ ಭಾಗ ಆರರಲ್ಲಿ ಓದುತ್ತೇವೆ.

ಉತ್ತರ ಕರ್ನಾಟಕದಲಲಿ ಪ್ರಚಲಿತವಿರುವ ಎಲ್ಲಮ್ಮನ ಮಹಿಮೆಯನ್ನು ಸಾರುವ ಜೋಗತಿ ಹಾಡುಗಳನ್ನು ಸಂಗ್ರಹಿಸಿದ್ದಾರೆ. 'ಹೆಂಗಸರ ವೇಷದಲ್ಲಿರುವ ಗಂಡಸು ಜೋಗಪ್ಪ ಸೀರೆಯುಟ್ಟು, ಕುಪ್ಪಸ ತೊಟ್ಟು, ಅಲಂಕಾರವಿಟ್ಟು, ಜಡೆಬಿಟ್ಟು ಎಲ್ಲಮ್ಮನನ್ನು ಸ್ತುತಿಸುತ್ತ ಭಿಕ್ಷೆ ಬೇಡುವುದು ಜೋಗಪ್ಪನ ವೃತ್ತಿ. ಕಾಲಲ್ಲಿ ಗೆಜ್ಜೆ ಕಟ್ಟಿ ಕುತ್ತಿಗೆಯಲ್ಲಿ ಕವಡೆಯ ಸರ ಧರಿಸಿ, ಹಣೆಗೆ ಭಂಡಾರ ಬಳಿದುಕೊಂಡು ಜಗಹೊತ್ತು ಕುಣಿಯುವುದು ಅವನ ಪ್ರವೃತ್ತಿ; ಹಾಡಿಗೆ ತಕ್ಕ ಕುಣಿತ, ಕುಣಿತಕ್ಕೆ ಸರಿಯಾಗಿ ಮೈಮಣಿತ, ಹಾಡಿದ್ದೇ ಹಾಡಿದ್ದು, ಕುಣಿದದ್ದೇ ಕುಣಿದದ್ದು. ಜೋಗಪ್ಪನ ಕುಣಿತಕ್ಕೆ ಹಿಮ್ಮೇಳ ಜೋಗತಿಯರದು. ಇವರು ಬಿಳಿ ಸೀರೆಯುಟ್ಟು, ಕವಡೆಯ ಸರ ಧರಿಸಿ, ಭಂಡಾರದ ಚೀಲವನ್ನು ಬಗಲಲ್ಲಿ ತೂಗುಹಾಕಿಕೊಂಡು ಎಲ್ಲಮ್ಮನ ಮಹಿಮೆಯನ್ನು ಹಾಡುವುದು ಚೌಡಿಕೆ, ತಾಳ, ಕುಡುಹು–ಇವರು ನುಡಿಸುವ ಪಕ್ಕವಾದ್ಯಗಳು.'

'ಎಲ್ಲಮ್ಮ ನಿನ್ನ ಪಾದಕ ಉಧೋ ಉಧೋ ಉಧೋ।
ಮಂಗಳವಾರ ಮಾಯಕಾರತಿ ಉಧೋ ಉಧೋ ಉಧೋ ಉಧೋ
ಶುಕ್ರವಾರದ ಶುಭದೇವಿ ಉಧೋ ಉಧೋ ಉಧೋ ಉಧೋ
..........................................................................
ಏಳುಕೊಳ್ಳದೆಲ್ಲಮ್ಮ ನಿನ್ನ ಪಾದಕ ಉಧೋ ಉಧೋ.....

ಶ್ರೀಸಾಮಾನ್ಯರ ಮನರಂಜನೆಯ ಹೆಚ್ಚು ಆಕರ್ಷಕವೂ ಪ್ರಭಾವಪೂರ್ಣವೂ ಆದ ಮಾಧ್ಯಮನೆಂದರೆ ಈ ಬಯಲಾಟ ಎಂಬುದನ್ನು ಮನಗಂಡ ನೇಗಿನಹಾಳ ಅವರು ಉನ್ನತ ಶಿಕ್ಷಣ ಸಂಸ್ಥೆಗಳ ಗ್ಯಾದರಿಂಗಗಳಲ್ಲಿ ಬಯಲಾಟದ ಸನ್ನಿವೇಶಗಳನ್ನು

ಪ್ರದರ್ಶಿಸತೊಡಗಿದ್ದರಿಂದ ಸುಶಿಕ್ಷಿತ ಜನರೂ ಬಯಲಾಟಗಳಿಗೆ ಮಾರು ಹೋಗತೊಡಗಿದರು. ಶ್ರೀಸಾಮಾನ್ಯರ ಮಧ್ಯದಲ್ಲಿ ಬೆರೆತು ಅವರು ಆಡುತ್ತಿದ್ದ ಜನಪ್ರಿಯ ಬಯಲಾಟದ ಕಥೆಗಳನ್ನು ಸಂಗ್ರಹಿಸಿ, ಅಚ್ಚುಕಟ್ಟಾಗಿ ಸಂಪಾದಿಸಿ, ಪ್ರಕಟಿಸಿದ ಶ್ರೇಯಸ್ಸೂ ನೇಗಿನಹಾಳ ಅವರದು.

ಹಲವಾರು ಜಾನಪದ ಸಂಗ್ರಹಗಳನ್ನು ಸಂಪಾದಿಸಿ ಹಾಳತವಾದ, ಉಪಯುಕ್ತವೂ ಆದ ಪ್ರಸ್ತಾವನೆಯನ್ನು ಬರೆದು ಪ್ರಕಟಿಸಿದುದು ಅವರ ಜಾನಪದ ದುಡಿಮೆಗೆ ನಿದರ್ಶನವಾಗಿರುತ್ತದೆ.

■■

# ವ್ಯಕ್ತಿತ್ವದ ಹೊಳವುಗಳು

ಡಾ. ನೇಗಿನಹಾಳ ಅವರ ಬದುಕು ಹಲವಾರು ಸಾಹಸಗಳ ಒಂದು ಯಶೋಗಾಥೆ. ಹಳೆಯ ಕಾವ್ಯಗಳ ನಿರಂತರ ಅಧ್ಯಯನ, ಹಲವಾರು ಭಾಷಾ ಸಾಹಿತ್ಯಗಳ ವ್ಯಾಸಂಗ, ಬದುಕಿನ ಅನುಭವ, ಜೀವನವನ್ನು ತೆರೆದ ಕಣ್ಣಿನಿಂದ ನೋಡುವ ಪ್ರವೃತ್ತಿ, ಎಲ್ಲೆಲ್ಲೂ ಸುಂದರವಾದುದನ್ನು ಕಾಣುವ ಸೌಂದರ್ಯ ದೃಷ್ಟಿ ಇವುಗಳ ಅಭಿವ್ಯಕ್ತಿಗೆ ತಕ್ಕ ಭಾಷೆ, ಕಲ್ಪನಾ ಚಾತುರ್ಯ, ಛಂದೋವಿಲಾಸ, ಹಿರಿಯರ ಮಾರ್ಗದರ್ಶನ ಮೌಲ್ಯಗಳ ಆರಾಧನೆಗಳಿಂದ ಡಾ. ನೇಗಿನಹಾಳ ಅವರ ಸಂಶೋಧನೆ ಕಣ್ಣು ಬಿಟ್ಟಿದೆ. ಹೂವ ತೊಟ್ಟು ಹಣ್ಣು ಬಿಟ್ಟಿದೆ. ಅದರ ರುಚಿಯನ್ನನುಭವಿಸುವುದು ರಸಿಕ ಕನ್ನಡಿಗರಿಗೆ ಬಿಟ್ಟದ್ದು.

'ನಾಡಾಡಿಯಾಗಿ ಊರೂರ ತಿರುಗಿದರೂ ಕನ್ನಡದ ಕವಿಯಾಗಬೇಡ' ಎಂದು ಮುದ್ದಣ ಕವಿಯನ್ನು ಕುರಿತು ಕಡುನೊಂದು ಬರೆದ ಕವಿ ಒಮ್ಮೆಯಾದರೂ ಡಾ. ಎಂ.ಬಿ.'ನೇಗಿನಹಾಳ ಅವರ ಕಿತ್ತಾಟದ ಬದುಕನ್ನು ಕಂಡಿದ್ದರೆ. 'ಕರ್ನಾಟಕದಲ್ಲಿ ಸಂಶೋಧಕನಾಗಿ ಹುಟ್ಟಬೇಡ' ಎಂದು ಖಂಡಿತವಾಗಿಯೂ ಬರೆಯುತ್ತಿದ್ದ. ನೌಕರಿಯಿಂದ ಮಾನಸಿಕ ಹಿಂಸೆಗೊಳಗಾದ, ಬದುಕಿನ ಕಲ್ಲುಗಳಿಂದ ಪೆಟ್ಟು ಬಿದ್ದು ಪುಡಿ ಪುಡಿಯಾದ ಡಾ. ನೇಗಿನಹಾಳ ಅವರನ್ನು ಸಂಕಟದ ಕ್ಷಣಗಳಲ್ಲಿ ಯಾರೂ ಕಾಯಲಿಲ್ಲ. ಹುಟ್ಟು ಪ್ರತಿಭಾವಂತರಾದ ಅವರನ್ನು ಯಾವ ಸಂಘ-ಸಂಸ್ಥೆಗಳಾಗಲಿ, ಮಠ-ಮಾನ್ಯಗಳಾಗಲಿ, ಸಮಾಜವಾಗಲಿ, ಉದ್ದಾಮ ಸಾಹಿತಿಗಳಾಗಲಿ, ಘನವಂತ ಸಹೃದಯಿಗಳಾಗಲಿ ಎತ್ತಿಕೊಳ್ಳಲಿಲ್ಲವೆಂಬುದನ್ನು ನೆನೆದಾಗ ತುಂಬ ದುಃಖವಾಗುತ್ತದೆ. ಕವಿರಾಜ ಮಾರ್ಗಕಾರ ಕನ್ನಡಿಗರನ್ನು 'ಗುಣಿಗಳ್' ಎಂದು ಕರೆದುದನ್ನು ನಂಬುವುದು ಹೇಗೆ? ಮುಗ್ಧ, ಹಠವಾದಿ, ಆದರ್ಶವಾದಿ, ಲೋಕ ವ್ಯವಹಾರವರಿಯದ ಡಾ. ನೇಗಿನಹಾಳ ಅವರನ್ನು ವಿಷಮ ಸಮಾಜ ಅಸಡ್ಡೆಯಿಂದ ಕಂಡಿತು. ಹೆಜ್ಜೆ-ಹೆಜ್ಜೆಗೂ ಅವಮಾನ ಗೊಳಿಸಿತು.

ಹಿಂದೆ ಕತ್ತಲೆಯಲ್ಲಿ ಕಂಗೆಟ್ಟು ಕೊರಗಿದೆನು
ಇಂದೊಳಗು ಹೊರಗು ಬೆಳಗಾಯಿತಲ್ಲ
ಈಸೀಸಿ ದಣಿದಣಿದು ಕೊನೆಗೆ ದಂಡೆಯ ಕಂಡೆ
ಇಂತು ದೇವನ ರಾಜ್ಯ ಲಭಿಸಿತಲ್ಲ

ಎಂಬ ಮಧುರಚೆನ್ನರ ಅನುಭವ ಡಾ. ನೇಗಿನಹಾಳ ಅವರದಾಯಿತು. ಬೆಂದ ಬದುಕಿನ ನೈಜ ಅಭಿವ್ಯಕ್ತಿಯನ್ನು ನಾವು ಕಾಣಬೇಕಾದರೆ ಅವರ ಬದುಕನ್ನು ನೋಡಬೇಕು. ನಿರ್ದಯಿ ಬಡತನ ನೀಡುವ ನೋವು ಎಂಥ ಓದುಗರ ಕಣ್ಣುಗಳನ್ನೂ ಒದ್ದೆ ಮಾಡುತ್ತದೆ. ಇಷ್ಟಾದರೂ 'ಜಗವೆಲ್ಲ ನಗುತಿರಲಿ ಜಗದಳವು ನನಗಿರಲಿ' ಎಂಬ ವಿಶಾಲ ಹೃದಯ ಅವರದಾಗಿತ್ತು. ಬಡತನ ಬೆನ್ನು ಹತ್ತಿ ಕಾಡಿದರೂ 'ಬಡವನೆಂದಳಲದಿರು' ಎಂದು ಸಂತೈಸುವ ಬಲು ದೊಡ್ಡ ಆಶಾವಾದಿ, ಕನಸುಗಾರ.

ತಮ್ಮ ಸರಳ–ಸೌಜನ್ಯಪೂರ್ಣ ನಡೆಯಿಂದ, ಪ್ರೀತಿ–ವಾತ್ಸಲ್ಯಭರಿತ ನುಡಿಯಿಂದ, ನಿಷ್ಕಲ್ಮಷ ಮನಸ್ಸಿನಿಂದ, ವಿಶಾಲ ಹೃದಯದಿಂದ, ಪರರಿಗೆ ಕೈಲಾದ ಮಟ್ಟಿಗೆ ಸಹಾಯ ಮಾಡಬೇಕೆನ್ನುವ ಔದಾರ್ಯದಿಂದ, ಎಲ್ಲರನ್ನೂ ಹಚ್ಚಿಕೊಳ್ಳುವ ಸ್ವಭಾವದಿಂದ, ಎಲ್ಲಿಗೇ ಹೋದರೂ ಅಲ್ಲಿಯ ಪರಿಸರಕ್ಕೆ ಹೊಂದಿಕೊಂಡು ಅಲ್ಲಿಯ ಜನರೊಂದಿಗೆ ಬೆರೆತುಕೊಂಡು ಎಲ್ಲರ ಗೌರವಾದರಗಳಿಗೆ ಪಾತ್ರರಾಗಿ ಅಲ್ಲಿಯವರಾಗಿ ಬಿಡುವ ಅಪರೂಪದ ವ್ಯಕ್ತಿ ಡಾ. ನೇಗಿನಹಾಳ: ಅವರು ತಮ್ಮ ಸೇವಾವಧಿಯ ಕಾಲದಲ್ಲಿ ಬೆಳಗಾವಿ, ಹುಬ್ಬಳ್ಳಿ ಧಾರವಾಡ ಹಾಗು ಹಾವೇರಿ ನಗರಗಳಲ್ಲಿ ಹೊಂದಿದ ಅಪಾರ ಅಭಿಮಾನಿಗಳನ್ನು ಕಂಡಾಗ ಇದು ಮನವರಿಕೆಯಾಗದಿರದು.

ಇಂದಿನ ವ್ಯವಹಾರಿಕ ಬದುಕಿನಲ್ಲೂ ಆದರ್ಶದ ಬೆನ್ನುಹತ್ತಿ ಹಿರಿಯ ಜೀವನ ಮೌಲ್ಯಗಳ ಆರಾಧಕರಾಗಿ ಉನ್ನತ ವ್ಯಕ್ತಿತ್ವವನ್ನು ರೂಪಿಸಿಕೊಂಡ ಡಾ. ನೇಗಿನಹಾಳ ಅವರು ಎಳಮೆಯಲ್ಲಿ ತಮ್ಮ ಜೀವನವನ್ನು ರೂಪಿಸಿದ ಮಹಾಚೇತನಗಳನ್ನು ಎಂದಿಗೂ ಮರೆಯರು.

ಡಾ. ನೇಗಿನಹಾಳ ಅವರು ಶಿಷ್ಯವಾತ್ಸಲ್ಯ ಪ್ರಪೂರ್ಣರು. ಡಾ. ನೇಗಿನಹಾಳ ಅವರ ಶಿಷ್ಯ ಬಳಗ ಬಲು ದೊಡ್ಡದು. ಅವರೆಲ್ಲ ಒಂದಿಲ್ಲೊಂದು ರೀತಿಯಿಂದ ಅವರ ಉಪಕಾರವನ್ನುಂಡು ಬೆಳೆದವರು.

ಅನುಕಂಪಕ್ಕೆ ಮತ್ತೊಂದು ಹೆಸರು ಡಾ. ನೇಗಿನಹಾಳ ಅವರು ಒಂದಾನೊಂದು ಕಾಲಕ್ಕೆ ಶ್ರೀಮಂತಿಕೆಯ ವೈಭವನನುಭವಿಸಿ ಮುಂದೆ

ನಿರ್ಗತಿಕನಾದ ತಮ್ಮ ಸ್ನೇಹಿತನ ಮಗ ಬೆಳಗಾವಿಗೆ ಬಂದಾಗ ಪಕ್ಕದಲ್ಲಿ ಕೂಡ್ರಿಸಿಕೊಂಡು ಉಣಿಸಿ, ಹಿಂದಿನ ದಿನಗಳನ್ನು ನೆನೆಸಿಕೊಂಡು ಮರುಗಿ, ಮನೆಯವರನ್ನೆಲ್ಲ ವಿಚಾರಿಸಿ, ತಿರುಗಿಹೋಗುವಾಗ ಹಾದಿಯ ಖರ್ಚಿಗೆಂದು ಹಣವನ್ನಿತ್ತು ಸಂತೋಷದಿಂದ ಬೀಳ್ಕೊಟ್ಟರು. ಸ್ವಲ್ಪ ಸಮಯದಲ್ಲಿಯೇ ಆತ ನಡುದಾರಿಯಲ್ಲಿ ರಿಕ್ಷಾ ಅಪಘಾತಕ್ಕೆ ಒಳಗಾಗಿ ಹಾಸ್ಪಿಟಲ್ ಸೇರಿದ ಸುದ್ದಿ ತಿಳಿದಾಗ ನಡುರಾತ್ರಿಯಲ್ಲಿಯೇ ಡಾ. ನೇಗಿನಹಾಳ ಅವರು ಆಸ್ಪತ್ರೆಗೆ ಧಾವಿಸಿ ಬಂದು ಹಗಲಿರುಳು ಅವನ ಸೇವೆ ಮಾಡಿದರು. ಸಂಪೂರ್ಣ ಗುಣ ಹೊಂದಿದಾಗ ಊರಿಗೆ ಕಳಿಸಿಕೊಟ್ಟರು.

ಜಾನಪದ ಡಾ. ನೇಗಿನಹಾಳ ಅವರ ತುಂಬ ಆಸಕ್ತಿಯ ಕ್ಷೇತ್ರ. ದೀರ್ಘಕಾಲದ ಅಭ್ಯಾಸ ಬೋಧನೆ ಹಾಗು ಸಂಶೋಧನೆಗಳಿಂದ ಆ ಕ್ಷೇತ್ರವನ್ನು ಸಮೃದ್ಧಗೊಳಿಸಿದರು. ರಾಶಿ ರಾಶಿಯಾಗಿ ಬಿದ್ದ ಹಾಡು, ಕಥೆ, ಗಾದೆ, ಒಡಪು, ಬಯಲಾಟ, ಯಕ್ಷಗಾನಗಳನ್ನು ಬರೆದು ಅಜ್ಞಾತರಾಗಿ ಹೋದ ಅಸಂಖ್ಯ ಜನಪದ ಕಲಾವಿದರನ್ನು ನಾಡಿಗೆ ಪರಿಚಯ ಮಾಡಿಕೊಡುವ ದೊಡ್ಡ ಸಾಹಸಕ್ಕೆ ಕೈ ಹಾಕಿದರು. No Source, No History ಎಂಬುದು ಪ್ರಾರಂಭದಲ್ಲಿಯೇ ಇವರನ್ನು ಧೃತಿಗೆಡಿಸಿತು. ಊರೂರು ತಿರುಗಿದರು. ಕಾಡಿ–ಬೇಡಿ ವಿನಂತಿಸಿ ಕೊಂಡು ಕೆಲವು ಸಲ ಬೇಡಿದಷ್ಟು ಹಣ ನೀಡಿ ಹಸ್ತಪ್ರತಿಗಳನ್ನು ಕಲೆ ಹಾಕಿದರು. ಪಡಬಾರದ ಕಷ್ಟ ಅನುಭವಿಸಿದರು. ಮೈಲಾರಲಿಂಗನ ಪದಗಳನ್ನು ಮೊದಲು ಸಂಗ್ರಹಿಸಿ ಪ್ರಕಟಿಸಿದ ಶ್ರೇಯಸ್ಸು ಅವರದು.

ಡಾ. ನೇಗಿನಹಾಳ ಒಬ್ಬ ವಿಶಿಷ್ಟ ವ್ಯಕ್ತಿ. ಅಪರೂಪದ ಅಧ್ಯಾಪಕರು. ಅಪ್ಪಟ ಕನ್ನಡಾಭಿಮಾನಿ. ಕನ್ನಡ, ಕನ್ನಡ ಅಧ್ಯಾಪಕರನ್ನು ಅಸಡ್ಡೆಯಿಂದ ಕಾಣುವ ಕಾಲದಲ್ಲಿ ಅಧ್ಯಾಪನ ವೃತ್ತಿಗೆ ಬಂದರು. ಸಮಾನ ಪದವಿಗಳಿದ್ದರೂ ವೇತನ ತಾರತಮ್ಯದಿಂದ ಉಳಿದವರಿಗೆ ಹೆಚ್ಚು ಸಂಬಳವಿದ್ದರೆ ಕನ್ನಡದವರಿಗೆ ಕಡಿಮೆ ಸಂಬಳ. ಕೆಲಸಕ್ಕೆ ಭಾರ ಮಾತ್ರ ಎಲ್ಲರಿಗಿಂತ ಹೆಚ್ಚು. ಡಾ. ನೇಗಿನಹಾಳ ಅವರಿಗಿಂತ ಕಡಿಮೆ ಸೇವಾವಧಿಯ ಚಿಕ್ಕವರು ಚಾಣಾಕ್ಷ ರಾಜಕಾರಣಿಗಳ ಬೆನ್ನು ಹತ್ತಿ ಬೇಗ ಬೇಗ ರೀಡರ್, ಪ್ರೊಫೆಸರ್ ಆದರು. ಇವರು ಮಾತ್ರ ಬಹುಕಾಲ ಕೇವಲ ಲೆಕ್ಚರರ ಆಗಿಯೇ ಉಳಿದರು. ಡಾ. ನೇಗಿನಹಾಳ ಅವರು ನೋವು ನುಂಗಿಕೊಂಡು ನಿಷ್ಠೆಯಿಂದ ಪಾಠ ಮಾಡಿದರು. ಇಂಗ್ಲೀಷ, ಕನ್ನಡ, ಸಂಸ್ಕೃತ, ಪಾಲಿ ಭಾಷೆಗಳ ಆಳ ಅಧ್ಯಯನದಿಂದ ಮನಸ್ಸು ಪರಿಪಕ್ವವಾಯಿತು. ಮಾತೆಲ್ಲ ಜ್ಯೋತಿಯಾದವು. ಸಣ್ಣತನ ಸುತ್ತ ಸುಳಿಯಲೇ ಇಲ್ಲ. ಶಿಸ್ತು ಬದ್ಧ ಆದರ್ಶ ಜೀವನದಿಂದ ವಿದ್ಯಾರ್ಥಿಗಳ ಹೃದಯ ಸಾಮ್ರಾಜ್ಯವನ್ನು ಗೆದ್ದುಕೊಂಡರು. ಮಾದರಿಯ ಅಧ್ಯಾಪಕರಾಗಿ ಮೆರೆದರು.

ಡಾ. ನೇಗಿನಹಾಳ ಅವರು ಕನ್ನಡದ ಸೇವೆಯನ್ನು ಹಲವಾರು ಮುಖಗಳಿಂದ ಮನಮುಟ್ಟಿ ಮಾಡಿದರು. ಆದರ್ಶ ಶಿಕ್ಷಕ, ಹಿರಿಯ ಶಿಕ್ಷಣ ತಜ್ಞ, ಉನ್ನತ ಮೌಲ್ಯಾರಾಧಕ, ಉದಾತ್ತ ವಿಚಾರವಾದಿ ಅಪರೂಪದ ಸಂಶೋಧಕ, ಶ್ರೇಷ್ಠಸತ್ಯಾನ್ವೇಷಕ, ಸರಳತೆ-ಸಾತ್ವಿಕತೆ-ಸಜ್ಜನಿಕೆಗಳ ಸಾಕಾರಮೂರ್ತಿಯಾಗಿದ್ದರು ಡಾ. ಎಂ.ಬಿ. ನೇಗಿನಹಾಳ ಅವರು. 'ಕನ್ನಡ ಭಾಷೆಯ ಶಕ್ತಿಗೇನೂ ಕೊರತೆಯಿಲ್ಲ ಕೊರತೆಯಿರುವುದು ಜನರ ಮನೋಧರ್ಮದಲ್ಲಿ' ಎಂದು ಅವರು ಕನ್ನಡ ಮಾಧ್ಯಮದ ಬಗೆಗೆ ಲಘುವಾಗಿ ಮಾತನಾಡುವ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಂಡರು. ಗಂಧದ ಕಡ್ಡಿಯ ಧೂಮದಂತೆ ನಾಡನ್ನೆಲ್ಲ ಆವರಿಸಿದ ಡಾ. ನೇಗಿನಹಾಳ ಮರೆಯಲಾರದ ನೆನಪು.

ಸ್ವಸಾಮರ್ಥ್ಯದಿಂದ ಮೇಲೆ ಬಂದು ಅನೇಕ ಉನ್ನತ ಹುದ್ದೆಗಳನಲಂಕರಿಸಿ ಅವುಗಳಿಗೆ ಹೂವು ಮುಡಿಸಿದವರು ಡಾ. ಎಂ. ಬಿ. ನೇಗಿನಹಾಳ ಪ್ರಸಿದ್ಧಿ-ಪ್ರಶಸ್ತಿಗಳ ಬೆನ್ನುಹತ್ತಲಿಲ್ಲ. ದಿನದ ಒಂದು ಕ್ಷಣವನ್ನು ವ್ಯರ್ಥವಾಗಿ ಪೋಲು ಮಾಡದೆ ಸದಾ ಓದು-ಬರಹ ಚಿಂತನ-ಮಂಥನಗಳಲ್ಲಿ ತೊಡಗಿ ರಾಷ್ಟ್ರಮಟ್ಟದ ಅಪರೂಪದ ಸಂಶೋಧಕರಾಗಿ ರೂಪಗೊಂಡವರು.

ಡಾ. ನೇಗಿನಹಾಳ ಶಿಕ್ಷಣ ವೃತ್ತಿಯನ್ನು ತುಂಬ ಮೆಚ್ಚಿಕೊಂಡಿದ್ದರು. ಹೆಚ್ಚಿನ ಅಧಿಕಾರದ ಕೈತುಂಬ ಸಂಬಳದ ಪ್ರತಿಷ್ಠಿತ ಹುದ್ದೆಗಳನ್ನು ತೊರೆದು ಬಂದು, ಅಧ್ಯಾಪಕರಾದರು. ಅಧ್ಯಯನ ಮತ್ತು ಅಧ್ಯಾಪನ ಅವರಿಗೆ ಪ್ರಿಯವಾದವುಗಳು. ಡಾ. ನೇಗಿನಹಾಳ ಅವರಂಥ ಆದರ್ಶ ಅಧ್ಯಾಪಕರಿಂದ ಶಿಕ್ಷಕ ಸಮುದಾಯಕ್ಕೆ ವಿಶೇಷಗೌರವಾದರಗಳು ಸಂಪ್ರಾಪ್ತವಾದವು. ವಿಶ್ವವಿದ್ಯಾಲಯದ ಆವರಣದಲ್ಲಿ ಅವರನ್ನು ಕಾಣುವುದೇ ವಿರಳವಾಗಿತ್ತು.

ಡಾ. ನೇಗಿನಹಾಳ ಅವರು ಪರಿಪೂರ್ಣ ಪ್ರಾಧ್ಯಾಪಕರು. ವಿಷಯದ ಪರಿಪೂರ್ಣ ಜ್ಞಾನ ಲಭ್ಯವಿದ್ದ ಎಲ್ಲ ಆಕರ ಗ್ರಂಥಗಳನ್ನು-ಪತ್ರಿಕೆಗಳನ್ನು ಓದಿ ಅಗತ್ಯವಾದ ಟಿಪ್ಪಣೆ ಮಾಡಿಕೊಂಡು ಸರಿಯಾದ ಸಮಯಕ್ಕೆ ತರಗತಿಗಳನ್ನು ಪ್ರವೇಶಿಸುತ್ತಿದ್ದರು. ತಡವಾಗಿ ಹೋಗುವುದಾಗಲಿ, ಎಂದೂ ಮಾಡಲಿಲ್ಲ. ನಿರ್ದಿಷ್ಟ ವೇಳಾ ಪಟ್ಟಿಗೆ ಒಂದು ನಿಮಿಷದ ವ್ಯತ್ಯಯ ಬರದಂತೆ ಪಾಠ ಮಾಡುವ ಸಮಯಪ್ರಜ್ಞೆ ಅವರದು. ತಾವು ಮಾಡಬೇಕಾದ ಪ್ರಬಂಧ ರೂಪದ ಟಿಪ್ಪಣೆಯನ್ನು ಶ್ರೀ ಗೋಪಾಲಕೃಷ್ಣ ಗೋಖಲೆಯವರಂತೆ ಅಚ್ಚುಕಟ್ಟಾಗಿ ಬರೆದಿಡುತ್ತಿದ್ದರು. ವಿಷಯ ಪರಿಣತಿಪ್ರೌಢಭಾಷೆ, ಗುಣಾತ್ಮಕ ಟೀಕೆ ಸಹೃದಯತೆ ಚರ್ಚಾಸ್ಪದ ವಿಷಯಗಳಲ್ಲಿ ಪ್ರಾಮಾಣಿಕ ನಿಲುವುಗಳಿಂದ ಅವರ ಪಾಠಗಳು ರಸಪೂರ್ಣವಾಗಿರುತ್ತಿದ್ದವು. ಡಾ. ನೇಗಿನಹಾಳ ಸ್ವಜನ ಪಕ್ಷಪಾತಿಯಲ್ಲ,

ಗುಣಪಕ್ಷಪಾತಿ, ಸಣ್ಣತನ ಸಂಕುಚಿತ ಪ್ರವೃತ್ತಿ ಅವರ ಬಳಿ ಸುಳಿಯಲೇ ಇಲ್ಲ. ಅವರದು ಜಾತ್ಯತೀತ ನಿಲುವು

ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ದುಡಿದವರು, ದುಡಿಯುತ್ತಿರುವವರು ಅದೆಷ್ಟೋ ಜನ. ಆದರೆ ಪ್ರತಿಭೆ, ಪಾಂಡಿತ್ಯ, ನೈಪುಣ್ಯ, ದಕ್ಷತೆ, ದಿಟ್ಟನಿಲುವು, ಸ್ವಾಭಿಮಾನ ಹಾಗು ಪ್ರಮಾಣಿಕತೆಗಳಿಂದ ದುಡಿದವರು ಅಲ್ಲೊಬ್ಬರು ಇಲ್ಲೊಬ್ಬರು ಮಾತ್ರ. ಅಂಥವರಲ್ಲಿ ಡಾ. ನೇಗಿನಹಾಳ ಒಬ್ಬರು.ಸಂಶೋಧನಾ ವಿಷಯದಲ್ಲಿ ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಮಹಾಮೇಧಾವಿ. ಸಂಶೋಧನಾ ನಿರ್ಣಯಗಳನ್ನು ಕೊಡುವಾಗ ಯಾವ ಮುಲಾಜಿಗೂ ಒಳಗಾಗದೆ ಧೈರ್ಯಶಾಲಿ, ಪ್ರತಿಭೆ, ದಕ್ಷತೆ, ಗುಣಮಟ್ಟ ಮತ್ತು ಪ್ರಾಮಾಣಿಕತೆಗಳನ್ನೇ ಅಳತೆಗೋಲುಗಳನ್ನಾಗಿ ಮಾಡಿಕೊಂಡ ಮೌಲ್ಯಾರಾಧಕ. ಯಾವ ಕಾಲಕ್ಕೂ ರಾಜಕಾರಣಿಗಳನ್ನು ಓಲೈಸದ ಆದರ್ಶವಾದಿ. ಕೈಗೆತ್ತಿಕೊಂಡ ಯೋಜನೆಗಳನ್ನು ಯಾವ ಅಪಸ್ವರಕ್ಕೆ ಆಸ್ಪದವೀಯದಂತೆ ಸಕಾಲದಲ್ಲಿ ಪೂರ್ತಿಗೊಳಿಸಿದ ದಕ್ಷ ಆಡಳಿತಗಾರ.

ಡಾ. ನೇಗಿನಹಾಳ ಹುಟ್ಟು ಪ್ರತಿಭಾವಂತರು. ಮೊದಲಿನಿಂದಲೂ ಓದಿಗೆ ಹೆಚ್ಚು ಒಲವು. ಆಟದಲ್ಲಿ ಆಸ್ಥೆ ಕಡಿಮೆ. ಹಾಳು ಹರಟೆಯಲ್ಲಿ ಹೊತ್ತು ಕಳೆದವರೇ ಅಲ್ಲ. ಗಣಿತ-ವಿಜ್ಞಾನಗಳಲ್ಲಿ ತುಂಬ ಹರಿತ. ಹೀಗಾಗಿ ಪ್ರತಿ ಪರೀಕ್ಷೆಗಳಲ್ಲಿ ಪ್ರಥಮಸ್ಥಾನ ಬಿಟ್ಟುಕೊಟ್ಟವರಲ್ಲ.

ನಾಡು-ನುಡಿಗಳ ಸೇವೆಗಾಗಿ, ಸಮಾಜದ ಸರ್ವತೋಮುಖವಾದ ಪ್ರಗತಿ-ಸುಗತಿಗಳಿಗಾಗಿ ತಮ್ಮ ತನು-ಮನಗಳನ್ನು ಅಂತಃಕರಣಪೂರ್ವಕವಾಗಿ ಧಾರೆಯೆರೆದು ಕೀರ್ತಿಶೇಷರಾದ ಡಾ. ಎಂ.ಬಿ. ನೇಗಿನಹಾಳ ಅವರ ಪವಿತ್ರೋಜ್ವಲವಾದ ಚರಿತ್ರೆ ನಮಗೆಲ್ಲ ಸ್ಪೂರ್ತಿಪ್ರದ.

ಅವರದು ತೆರೆದ ಮನಸ್ಸು ಅಡ್ಡಗೋಡೆಗಳಿಂದ ಅದು ಸಂಕುಚಿತವಾದುದಲ್ಲ. ಮೂಡಣ-ಪಡುವಣ ಗಾಳಿ-ಬೆಳಕುಗಳಿಂದ ಬೆಳಗಲ್ಪಟ್ಟುದು. ಜೊತೆಗೆ ನಿರಂತರ ಅಧ್ಯಯನ ಮನಸ್ಸನ್ನು ಹದಗೊಳಿಸಿತ್ತು. ಮನಸ್ಸು ವಿಶಾಲವಾದಷ್ಟು ಬದುಕು ಶ್ರೀಮಂತವಾಗುತ್ತದೆ. ಆನಂದ ಹೆಚ್ಚುತ್ತದೆ ಎಂಬ ಸಾರ್ವತ್ರಿಕ ಸತ್ಯವನ್ನು ಕಂಡುಕೊಂಡಿದ್ದರು. ಅವರ ಹೃದಯ ಅಂತಃಕರುಣೆಯ ಕಡಲು. ಮಾನವೀಯ ಮೌಲ್ಯಗಳಿಂದ ಅದರ ಮೌಲಿಕತೆಗೆ ಮೆರಗು ಬಂದಿತ್ತು.

ಸಮಾಜದ ಅವನತಿಗೆ ಅಜ್ಞಾನವೇ ಮೂಲಕಾರಣ. "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ" ಎಂಬ ವಚನೋಕ್ತಿಯಂತೆ ಜನತೆಯ ಏಳ್ಗೆಗೆ

ಸರಿಯಾದ ಶಿಕ್ಷಣವೇ ಮೂಲವೆಂದು ಡಾ. ನೇಗಿನಹಾಳ ಅವರ ನಂಬುಗೆ. ಶೈಕ್ಷಣಿಕ ಪ್ರಸಾರದಿಂದ ಸಮಾಜ ಪರಿವರ್ತನೆ ಸಾಧ್ಯವೆಂದರಿತುಕೊಂಡರು. ಹೀಗಾಗಿ ತಮ್ಮ ಅಮೋಘವಾದ ಸಮಾಜ ಪ್ರೇಮ ಪ್ರವಾಹವನ್ನು ಶಿಕ್ಷಣ ಕ್ಷೇತ್ರಕ್ಕೆ ತಿರುಗಿಸಿದರು.

ಬಸವಾದಿ ಶರಣರ ವಚನ-ಸ್ವರವಚನ, ಕಾವ್ಯಗಳನ್ನು ಅತ್ಯಂತ ಶಾಸ್ತ್ರಶುದ್ಧವಾಗಿ ಪರಿಷ್ಕರಿಸಿ, ಜನಸಮುದಾಯಕ್ಕೆ ಶರಣರ ಸಂದೇಶವನ್ನು ತಲುಪಿಸಿದ ಆಧುನಿಕ ವಿದ್ವಾಂಸರಲ್ಲಿ ಡಾ ಎಂ.ಬಿ. ನೇಗಿನಹಾಳ ಒಬ್ಬರು. ಕನ್ನಡ ಸಾಹಿತ್ಯ ಪರಂಪರೆಯ ಪ್ರಾರಂಭದ ಮಾರ್ಗ ಸಾಹಿತ್ಯವನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಿದವರು ಪಾಶ್ಚಿಮಾತ್ಯ ವಿದ್ವಾಂಸರು. ಮಧ್ಯಕಾಲೀನ ನಡುಗನ್ನಡ ಸಾಹಿತ್ಯ ಪರಂಪರೆಯ ಉನ್ನತ ಮೌಲ್ಯದ ವಚನ ಸಾಹಿತ್ಯವನ್ನು ಅವರು ಏಕೆ ಗಮನಿಸಲಿಲ್ಲ ತಿಳಿಯಲಾರದು. ಆದರೆ ಡಾ॥ ಫ.ಗು.ಹಳಕಟ್ಟಿಯವರು ೧೯೨೩ರಲ್ಲಿ ಮೊಟ್ಟಮೊದಲು ವಚನ ಶಾಸ್ತ್ರ ಸಾರ ಪ್ರಕಟಿಸುವ ಮೂಲಕ ವಚನಗಳನ್ನು ನಾಡಿನ ಓದುಗರಿಗೆ ನೀಡಿದರು. ಅಂದಿನಿಂದ ದೇಶೀಯ ವಿದ್ವಾಂಸರು ಅಪಾರ ಪ್ರಮಾಣದಲ್ಲಿ ವಚನಗಳನ್ನು ಸಂಶೋಧಿಸುವ, ಸಂಪಾದಿಸುವ, ಪರಿಷ್ಕರಿಸುವ ಕಾರ್ಯದಲ್ಲಿ ತೊಡಗಿದರು. ಡಾ॥ ಆರ್.ಸಿ. ಹಿರೇಮಠ, ಡಾ॥ ಎಲ್. ಬಸವರಾಜು, ಡಾ॥ ಎಂ.ಎಂ. ಕಲಬುರ್ಗಿ ಮುಂತಾದ ವಿರಳ ವಿದ್ವಾಂಸರ ಸಾಲಿನಲ್ಲಿ ಇನ್ನೊಂದು ಗಟ್ಟಿಯಾಗಿ ನಿಲ್ಲುವ ಹೆಸರು ಡಾ. ಎಂ.ಬಿ. ನೇಗಿನಹಾಳ

ಡಾ॥ ಆರ್.ಸಿ. ಹಿರೇಮಠ ಅವರ ಅಪಾರ ವಿದ್ವತ್ತು, ಡಾ॥ ಎಂ.ಎಂ. ಕಲಬುರ್ಗಿ ಅವರ ಶಿಸ್ತು-ಶ್ರಮ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸಂಶೋಧನೆಯಲ್ಲಿ ತುಂಬ ಮುತುವರ್ಜಿ ವಹಿಸಿದರು. ಇದು ಅವರ ಭವಿಷ್ಯದ ಬದುಕಿಗೆ ದಾರಿ ಮಾಡಿಕೊಟ್ಟಿತು. ಅವರೇ ಹೇಳುವಂತೆ "ಸಂಶೋಧನಾ ಕ್ಷೇತ್ರದ ಬಗೆಗೆ ನನ್ನಲ್ಲಿ ವಿಶೇಷ ಕುತೂಹಲ ಮೂಡಿಸಿದವರು ಗುರುಗಳಾದ ಡಾ॥ ಆರ್.ಸಿ. ಹಿರೇಮಠ ಅವರು. ಅವರ ಸಮರ್ಥ ಮಾರ್ಗದರ್ಶನದಲ್ಲಿ ಸಂಶೋಧಕನಾಗಿ ಆಗ ಮಾಡಿದ ಶಾಸನಗಳ ಅಧ್ಯಯನ ಕಾಯಕದ ಅನುಭವ ನನ್ನ ಈ ವ್ಯವಸಾಯಕ್ಕೆ ಮಾರ್ಗದರ್ಶಿ".

ಕನ್ನಡ ಅಧ್ಯಯನ ಪೀಠದ ರೀಡರ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಅವರು ಕನ್ನಡ ಪೀಠದ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಡಾ. ನೇಗಿನಹಾಳ ಅವರು ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ನಿರ್ವಹಿಸಿದ ಕಾರ್ಯ ಸ್ಮರಣೀಯ. ಅವರೊಬ್ಬ ಸಮರ್ಥ ಆಡಳಿತಗಾರರು. ಯಾರೊಂದಿಗೂ ಏರು ಧ್ವನಿಯಲ್ಲಿ ಮಾತನಾಡಿದವರಲ್ಲ, ಯಾರಮೇಲೂ ಎಂದೂ

ಕೋಪಿಸಿಕೊಂಡವರಲ್ಲ. ಅತಿ ಬೇಸರವಾದಾಗ ಹುಸಿಮುನಿಸು ಕಾಣಿಸಬಹುದೆ ಹೊರತು, ನಿಜವಾದ ಸಿಟ್ಟು ಇಲ್ಲ, ಮುಗುಳ್ನಗೆ ಅವರ ಸಂಗಾತಿ. ಎಂಥ ಪರಿಸ್ಥಿತಿಯಲ್ಲೂ ಸ್ಥಿತಪ್ರಜ್ಞತ್ವ ಕಳೆದುಕೊಂಡವರಲ್ಲ. ಸರಳತೆ–ಪ್ರೀತಿ ಅಂತಃಕರಣ ತುಂಬಿರುವ ಅವರ ಜೇನಿನಂಥ ಮಾತುಗಳು, ನವಿರಾದ ಹಾಸ್ಯದೊಂದಿಗೆ ಎಂಥವರನ್ನು ಮುಗ್ಧಗೊಳಿಸುತ್ತಿದ್ದವು.

■■

## ಡಾ. ನೇಗಿನಹಾಳ ಕಂಡಷ್ಟು-ತಿಳಿದಷ್ಟು

ಡಾ. ನೇಗಿನಹಾಳಅವರು ಪರೋಪಕಾರ ಜೀವಿಗಳು. ಪರರ ಕಷ್ಟ ನೋಡಿ ಸುಮ್ಮನಿರುವ ಸ್ವಭಾವ ಇವರದಲ್ಲ. ತಮ್ಮ ಕೈಲಾದಷ್ಟು ಸಹಾಯ ಮಾಡುವುದು ಇವರ ಹುಟ್ಟುಗುಣ. ಬಡವಿದ್ಯಾರ್ಥಿಗಳು ಬಂದರಂತೂ ಅವರನ್ನು ಎಂದೂ ಬರಿಗೈಯಿಂದ ಕಳಿಸಿದವರಲ್ಲ. ತಮ್ಮ ಹೆಂಡತಿ, ಮಕ್ಕಳಿಗಾಗಿ ಬೇಕೆನ್ನದೆ ಬೇಡಲು ಬಂದ ದೀನರಿಗೆ ಕೈಲಾದಷ್ಟು ಸಹಾಯ ನೀಡುವುದರಿಂದಾಗಿ ಹಲವಾರು ಸಲ ಮನೆಯವರಿಂದ ಬೈಗುಳಗಳನ್ನು ತಿಂದವರು. ಸ್ವಂತ ಕೈಯಿಂದ ಖರ್ಚು ಮಾಡಿಕೊಂಡು ಬಡವರಿಗೆ ನೌಕರಿ ಕೊಡಿಸುವ ಸಲುವಾಗಿ ಪ್ರಯತ್ನಿಸುತ್ತಿದ್ದರು. ಕೊಡುವುದರಲ್ಲಿಯೆ ಡಾ. ನೇಗಿನಹಾಳ ಅವರಿಗೆ ತೃಪ್ತಿ.

ಡಾ. ನೇಗಿನಹಾಳ ಅವರು ಸರಳಜೀವಿ, ಆಡಂಬರಕ್ಕೆ ಮನಸೋತವರಲ್ಲ. ಮಕ್ಕಳು ಮೊಮ್ಮಕ್ಕಳಿಗೆ ಮಾತ್ರ ಎಂದೂ ಯಾವುದಕ್ಕೂ ಕಡಿಮೆ ಮಾಡುತ್ತಿರಲಿಲ್ಲ. ತಾವು ಮಾತ್ರ ಸಾದಾ-ಸೀದಾ. ಬಟ್ಟೆ ತೊಡುವುದರಲ್ಲಂತೂ ಒಂದು ಸಾದಾ ಪ್ಯಾಂಟು, ಒಂದು ಸಾದಾ ಬುಶ್‌ಶರ್ಟು. ವಿದ್ಯಾರ್ಥಿಯಿದ್ದಾಗಿನಿಂದಲೂ ತಾವು ಹೊಲಿಸಿ ಕೊಳ್ಳುತ್ತಿದ್ದಂತಹ ಬಟ್ಟೆಗಳನ್ನು ಸ್ನೇಹಿತರಿಗೂ ಹೊಲಿಸಿಕೊಡುತ್ತಿದ್ದರು. ಅದರಲ್ಲಿ ಯಾವ ಸ್ವಾರ್ಥ, ದುರಾಸೆ ಇರುತ್ತಿದ್ದಿರಲಿಲ್ಲ.

ಡಾ. ನೇಗಿನಹಾಳಅವರು ಯಾವಾಗಲೂ ನಗುಮುಖದವರು. ಸಿಟ್ಟೆಂಬುದು ಇವರಲ್ಲಿ ಕ್ವಚಿತ್. ತಮ್ಮ ತೊಂದರೆಯನ್ನು ಎಂದೂ ಯಾರ ಮುಂದೆಯೂ ಹೇಳಿಕೊಂಡವರಲ್ಲ. ಪರರ ಕಷ್ಟ ತಾಪತ್ರಯ ಪರಿಹಾರಕ್ಕಾಗಿ ಚಿಂತಿಸುತ್ತಿದ್ದರು. ಡಾ. ನೇಗಿನಹಾಳಅವರದು ಹೆಂಗರುಳು.

ಡಾ. ನೇಗಿನಹಾಳ ಅವರ ಸಮಯಪ್ರಜ್ಞೆ ದೊಡ್ಡದು. ವೇಳೆಗೆ ಸರಿಯಾಗಿ ಕೆಲಸ ಮಾಡುವುದೆಂದರೆ ಇವರಿಗೆ ಹಿಗ್ಗು. ಕಾಲೇಜು ಇಲ್ಲವೆ ವಿಶ್ವವಿದ್ಯಾಲಯಕ್ಕೆ ಹೋಗುವಲ್ಲಿ, ಯಾವುದೇ ಸಭೆ-ಸಮಾರಂಭಗಳಿಗೆ ಹಾಜರಾಗುವಲ್ಲಿ ವೇಳೆಗೆ ಮಹತ್ವ ನೀಡಿದವರಾಗಿದ್ದರು. ವೇಳೆಗೆ ಸರಿಯಾಗಿ ಎಂಥ ಕೆಲಸವೇ ಇರಲಿ ಅದನ್ನು ಮಾಡಿ ಮುಗಿಸುವ ಕಾಯಕಧೀರರಿವರು. ಸಮಯಪ್ರಜ್ಞೆಯಿದ್ದವರನ್ನು

ಹೆಚ್ಚು ಪ್ರೀತಿಸುತ್ತಿದ್ದರು. 'ಸದುವಿನಯವೆ ಸದಾಶಿವನ ಒಲುಮೆಯಾಗಿತ್ತು'– ಡಾ. ನೇಗಿನಹಾಳಅವರಿಗೆ.

ಡಾ. ನೇಗಿನಹಾಳಅವರು ಸದೃಢಕಾಯದ ಉಕ್ಕಿನ ಮನುಷ್ಯರಾಗಿದ್ದರು. ಸಾದಾಗಪ್ಪಿನ ನೇಗಿನಹಾಳಅವರದು ಯಾವಾಗಲೂ ನಗುಮುಖಿ. ಉಳಿದವರಂತೆ ಎಂದೂ ಮುಖ ಕಿವುಚಿಕೊಂಡು ಮಾತನಾಡಿದವರಲ್ಲ. ಒಳಗೊಂದು ಹೊರಗುಂದು ಭಾವನೆಯವರಲ್ಲ. ಅತ್ಯಂತ ಕಳಕಳಿಯಿಂದ ಹಾರ್ದಿಕವಾಗಿ, ಹೃದಯ ಬಿಚ್ಚಿ ಮಾತನಾಡಿಸುವ ವಿಶಾಲ ಮನೋಧರ್ಮದವರಾಗಿದ್ದರು.

'ಡಾ. ನೇಗಿನಹಾಳರ ಮನ ತಿಳಿಗೊಳದಂತೆ. ಅವರ ಗುಣವಂತೂ ಆ ತಿಳಿಗೊಳದಲ್ಲಿ ಬಿರಿದರಳು ಸದ್ಭಾವದ ಸ್ನೇಹ ಸೂಸುವ ಶ್ರೀಗಂಧ, ಮಾನವೀಯತೆಯನ್ನು ಮೈಗೂಡಿಸಿಕೊಂಡ ಮಹಾಮಾನವತಾವಾದಿಯಾಗಿದ್ದರು ಡಾ. ನೇಗಿನಹಾಳ' ಎಂಬುದು ಅವರ ಪರಮ ಸ್ನೇಹಿತರಾದ ಪ್ರೊ ಸಿದ್ದಣ್ಣ ಉತ್ನಾಳ ಅವರ ಅಭಿಪ್ರಾಯ.

ಡಾ. ನೇಗಿನಹಾಳ ಅವರು ತಮ್ಮ ಮಾತಿನಿಂದ ಜನಸ್ತೋಮವನ್ನು ನಕ್ಕು ನಗಿಸಿದವರು. ತಮ್ಮ ಪಾಂಡಿತ್ಯದಿಂದ ವಿದ್ಯಾರ್ಥಿ ವಿಶ್ವದ ಮನವನ್ನು ಮನದಣಿಯೆ ತಣಿಸಿದರು. ತಮ್ಮ ಪ್ರತಿಭೆಯಿಂದ ರಸಿಕಸ್ತೋಮಕ್ಕೆ ಸುಧೆಯ ಸೋನೆಯನ್ನೇ ಧಾರೆಯೆರೆದವರು. ತಮ್ಮ ಲೇಖನಿಯಿಂದ ವಿವಿಧ ಕೃತಿಗಳನ್ನು ರಚಿಸಿ ಸರಸ್ವತಿಯ ಸಿರಿಮುಡಿಯ ಸಿಂಗರಿಸಿದವರು–ಕಿರಿಯ ತಾನೆಂದು ವಿನಯಭಾವ ಮೆರೆವ ಡಾ. ಎಂ.ಬಿ. ನೇಗಿನಹಾಳ ಸಂಸ್ಕೃತಿಯ ಸಾಕಾರ ರೂಪವೇ ತಾವಾದ ಓ ಸುಸಂಸ್ಕೃತ ಶಕ್ತಿ'– ಎಂದು ಅವರ ಆತ್ಮೀಯರಾದ ಡಾ. ಅಶೋಕ ಪಾಟೀಲ ಹಾಡಿದ್ದಾರೆ.

ಡಾ. ನೇಗಿನಹಾಳ ಅವರ ಹಿತಚಿಂತಕರೂ ಹಿರಿಯ ಸ್ನೇಹಿತರೂ ಆದ ಶ್ರೀ ಡಿ.ಬಿ. ತಳವಾರ ಅವರ ಮಾತಿನಲ್ಲಿ ಹೇಳುವುದಾದರೆ:

–'ಬೇಕು ಬೇಡೆಂಬ ಎರಡು ಭವಬೀಜಗಳನ್ನೇ ಹುರಿದು ವೈರಾಗ್ಯಮೂರ್ತಿಗಳ ಸ್ಥಾನದಲ್ಲಿ ಹುಟ್ಟಿ ಬೆಳೆದ ಡಾ. ನೇಗಿನಹಾಳ ಅವರಲ್ಲಿ ಸುಂಸ್ಕೃತಿಯ ಗುಣಗಳು ಮೈಗೂಡಿ ಬಂದಂತಿವೆ. ಬೇಕೆಂದು ಬಯಸದೆ, ಬೇಡವೆಂದು ನಿರಾಕರಿಸದೆ ಬಂದಂತಹ ಮಣಿಹವನ್ನು ಆನಂದದಿಂದ ಸ್ವೀಕರಿಸಿ ತಮ್ಮ ಪಾಲಿನ ಕರ್ತವ್ಯವನ್ನು ಮಾಡುತ್ತಲಿದ್ದ ಅವರ ಬದುಕು ಬಂಗಾರ, ಮನಸ್ಸು ಪರಿಶುದ್ಧ, ಯಾವುದಕ್ಕೂ ಯಾರ ಮೇಲೂ ಕರುಬಿದವರಲ್ಲ. ಊರ ಮುಂದೆ ಹಾಲ ಹಳ್ಳ ಹರಿಯುತ್ತತಿದ್ದರೂ ಅವರ ಕೈ ಶುದ್ಧ, ಬಾಯಿ ಶುದ್ಧ, ತನು ಶುದ್ಧ, ಮನ ಶುದ್ಧ, ನಡೆ ಚೆನ್ನ, ನುಡಿ ಚೆನ್ನ, ಅವರದು ರಸಮಯವಾದ ಕೌಟುಂಬಿಕ ಜೀವನ, ಪ್ರಫುಲ್ಲಿತವಾದ ಸಾಂಘಿಕ

ಜೀವನ. ಅಪಾರವಾದ ಗೆಳೆಯರ ಬಳಗ. ವಿಶ್ರಾಂತಿಯಿಲ್ಲದ ದುಡಿಮೆ. ದುಡಿದು ಬೇಸತ್ತಾಗ ನಿರಂತರ ಹರಿಯುವ ಹಾಸ್ಯ. ಇವು ನೇಗಿನಹಾಳಅವರ ವ್ಯಕ್ತಿ ವೈಶಿಷ್ಟ್ಯಗಳು' ಎಂಬುದನ್ನು ನೆನೆಸಿಕೊಂಡಾಗ ಡಾ. ನೇಗಿನಹಾಳಅವರ ಘನವ್ಯಕ್ತಿತ್ವದ ಅರಿವಾಗುತ್ತದೆ.

ಮಾತಿನಲಿ ಮಾಧುರ್ಯ ನಡತೆಯಲಿ ನಯ–ವಿನಯ
ನಗುವೆ ಬಾಳಿನ ಗೆಲುವು ಎಂಬ ನೀತಿ,
ಸೋತು ಗೆಲ್ಲುವ ಫಲವು ಅರವಿನಾಳದ ಬಲವು
ಕಿರಿಯನೆನುವೊಲು ಹಿರಿಯನಾದ ರೀತಿ!
ನಗೆಯ ಕಡಲಲಿ ಬಾಳ ದೋಣಿಯನು ಸಾಗಿಸುತ
ನೋವನುಂಡರೂ ನಿತ್ಯ ನಲಿದ ಜೀವ
ಇದ್ದದುದ ವಂಚಿಸದೆ, ಇಲ್ಲದುದ ನೆನೆಯದೆಯೆ
ಸಂದುದೆ ಹಸಾದವೆಂದುಣುವ ಭಾವ!

.....................................................

ಶಿಷ್ಯರಲಿ ಸಮದರ್ಶಿ, ಸ್ನೇಹಿತರ ಪ್ರಿಯದರ್ಶಿ,

ಎಂದು ಕವಿ–ಸಾಹಿತಿ ಮಹದೇವ ಬಣಕಾರರು ಡಾ. ನೇಗಿನಹಾಳ ಅವರ ಘನವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಈ ಮೇಲಿನ ಹಾಡಿನಲ್ಲಿ ಸೆರೆಹಿಡಿದಿದ್ದಾರೆ.

**ಡಾ. ನೇಗಿನಹಾಳ ಅವರಿಗೆ ಮಾನ, ಸನ್ಮಾನ, ಗೌರವ**

ಸಚ್ಚಾರಿತ್ರ್ಯಶೀಲರೂ, ಗುಣಮನ ಸಂಪನ್ನರೂ, ಘನಪಂಡಿತರೂ ಆದ ಸಾಹಿತಿ ಡಾ. ನೇಗಿನಹಾಳ ಅವರನ್ನು ಇಡೀ ನಾಡಿಗೆ ನಾಡೇ ಮಾನ–ಸನ್ಮಾನ ನೀಡಿ ಗೌರವಿಸಿದೆ. ಅದನ್ನು ಬಯಸದ ಅವರಿಗೆ ಅವು ತಾವಾಗಿಯೆ ಬಂದು ದಕ್ಕಿವೆ. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳು ಡಾ. ನೇಗಿನಹಾಳಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿರುತ್ತವೆ. ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಿದೆ.

ಕನ್ನಡ ಸಾರಸ್ವತ ಪ್ರಪಂಚಕ್ಕೆ ಡಾ. ನೇಗಿನಹಾಳ ಅವರೆಂದರೆ ಪಂಚಪ್ರಾಣ. ಇದಕ್ಕೆ ಕಾರಣ ಅವರ ಸರಳ ಸಜ್ಜನಿಕೆ; ಡಾ. ನೇಗಿನಹಾಳಅವರದು ಸಾದಾ ಜೀವನ; ಅವರು ಸ್ನೇಹಮಯಿ, ಆದರ್ಶವಾದಿ, ಅಜಾತಶತ್ರು...ಮುಗುಳ್ನಗೆ ಅವರ ಮುಖದ ಮೇಲೆ ಸದಾ ಲಾಸ್ಯವಾಡುತ್ತಿತ್ತು. ಹೃದಯದ ಮಡಿವಂತಿಕೆಯಿಂದ ಶ್ರೀಸಾಮಾನ್ಯರಿಗೂ ಅವರು ಬೆಲದ್ದೇರಾಗಿದ್ದರು.

## ಮರಣ

ಡಾ. ನೇಗಿನಹಾಳ ಅವರು ಮಂಗಳವಾರ ದಿ. ೪ ಮೇ ೧೯೯೯ರಂದು ನಿಧನರಾದರು. ಕನ್ನಡ ನಾಡಿನ ಧೀಮಂತ ವಾಗ್ಮಿ, ಪಂಡಿತ, ಸಂಶೋಧಕನನ್ನು ಕಳೆದುಕೊಂಡು ನಾಡು ಬಡವಾಯಿತು.

Lives of great men all remind us

We can make our lives sublime

And departing leave behinmd us

Foot prints on the sands of time.

ಎಂದ ಹಾಗೆ ಮಹಾನ್ ವ್ಯಕ್ತಿ ಡಾ. ನೇಗಿನಹಾಳ ಅವರು ನಡೆದ ದಾರಿಯಲ್ಲಿ ನಾವೂ ನಡೆದಿದ್ದಾರೆ ನಮ್ಮ ಜೀವನವೂ ಪಾವನ.

# ಅನುಬಂಧ

# ಡಾ. ನೇಗಿನಹಾಳ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಂದು ಹಳ್ಳಿ ನೇಗಿನಹಾಳ. ಅಲ್ಲಿನ ಒಂದು ಪರಿಶಿಷ್ಟ ಜಾತಿಯ ಕುಟುಂಬದಲ್ಲಿ ೧೯೪೦ರಲ್ಲಿ ಹುಟ್ಟಿದವರು ಎಂ.ಬಿ. ನೇಗಿನಹಾಳ. ತುಂಬ ಬಡತನದಲ್ಲಿ ಬೆಳೆದು ಬಂದವರು ಅವರು. ಹುಡುಗನಾಗಿದ್ದಾಗ, ತರುಣರಾಗಿದ್ದಾಗ ಹಲವು ಕಷ್ಟಗಳನ್ನು ಎದುರಿಸುತ್ತಾ ತಮ್ಮ ಪ್ರತಿಭಾಶಕ್ತಿಯಿಂದಲೇ ಮುಂದೆ ಬಂದವರು ನೇಗಿನಹಾಳ. ೧೯೬೩ರಲ್ಲಿ ಎಸ್.ಎಸ್.ಸಿ. ಪರೀಕ್ಷೆಗೆ ಕುಳಿತಾಗ ಪ್ರಪ್ರಥಮರಾಗಿ ತೇರ್ಗಡೆ ಹೊಂದಿ ಪವಾಡವನ್ನೇ ಈ ಹಳ್ಳಿಯ ಹುಡುಗ ಮೆರೆದರು. ಸುತ್ತಲಿನ ಜನರೆಲ್ಲ ಮೂಗಿನ ಮೇಲೆ ಬೆರಳಿಟ್ಟರು! ಆ ಪರೀಕ್ಷೆಯಲ್ಲಿ ಅವರು ತೋರಿದ ಸಾಮರ್ಥ್ಯವನ್ನು ಮುಂದಿನ ಎಲ್ಲ ಪರೀಕ್ಷೆಗಳಲ್ಲಿಯೂ ಉಳಿಸಿಕೊಂಡರು. ೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪರೀಕ್ಷೆಗೆ ಕುಳಿತಾದ ಕನ್ನಡದಲ್ಲಿ ವಿಶ್ವವಿದ್ಯಾಲಯಕ್ಕೇ ಪ್ರಥಮರಾಗಿ ಉತ್ತೀರ್ಣಗೊಂಡರು. ೧೯೭೦ರಲ್ಲಿ ಎಂ.ಎ. ಪರೀಕ್ಷೆ ತೆಗೆದುಕೊಂಡಾಗ ವಿಶ್ವವಿದ್ಯಾಲಯಕ್ಕೇ ಮೂರನೆಯವರಾದರು. ೧೯೭೭ರಲ್ಲಿ 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಮತ್ತು ಸಾಹಿತ್ಯಿಕ ಅಧ್ಯಯನ' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿ ಪಡೆದರು. ನೇಗಿನಹಾಳ ಒಬ್ಬ ಆದರ್ಶಪ್ರಾಯರಾದ ಅಧ್ಯಾಪಕರಾಗಿದ್ದರು.

ಅವರು ಶೈಕ್ಷಣಿಕ ಕ್ಷೇತ್ರದ ಅನೇಕ ಮಹತ್ವದ ಹುದ್ದೆಗಳನ್ನು ಪಡೆದಿದ್ದರು. ಎಂ.ಎ. ಆದೊಡನೆ ೧೯೭೦ರಿಂದ ೧೯೫೪ರ ವರೆಗೆ ಹುಬ್ಬಳ್ಳಿಯ ಶ್ರೀ ಕಾಡಸಿದ್ಧೇಶ್ವರ ಕಾಲೇಜಿನಲ್ಲಿಯೂ, ಹಾವೇರಿಯ ಜಿ.ಎಚ್. ಕಾಲೇಜಿನಲ್ಲಿಯೂ ಕನ್ನಡ ಉಪನ್ಯಾಸಕರಾಗಿ ಕೆಲಸ ಮಾಡಿದರು. ೧೯೫೪ರಲ್ಲಿ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ರೀಡರ್ ಆಗಿಯೂ ಕನ್ನಡ ವಿಭಾಗದ ಮುಖ್ಯಸ್ಥರಾಗಿಯೂ ನೇಮಕಗೊಂಡರು. ಅದೇ ವರ್ಷದ ಕೊನೆಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರೀಡರ್ ಎಂದು ಆಯ್ಕೆಯಾದರು. ಅವರನ್ನು ವಿಶ್ವವಿದ್ಯಾಲಲಯ ತನ್ನ ಬೆಳಗಾವಿ ಸ್ನಾತಕೋತ್ತರ ಕೇಂದ್ರದ ಸ್ಥಳೀಯ ಮುಖ್ಯಸ್ಥರೆಂದು ನೇಮಿಸಿತು. ೧೯೯೦ರಲ್ಲಿ ಅವರನ್ನು ಆಡಳಿತಾಧಿಕಾರಿಯನ್ನಾಗಿ ಗೊತ್ತು ಮಾಡಿತು. ನಾಲ್ಕು ವರ್ಷಗಳ ಕಾಲ ಕೇಂದ್ರದ ಸಮಗ್ರ ಅಭಿವೃದ್ಧಿಯ ಕಾರ್ಯದಲ್ಲಿ ನೇಗಿನಹಾಳ ತಮ್ಮನ್ನು ತೊಡಗಿಸಿಕೊಂಡರು.

೧೯೯೪ರಲ್ಲಿ ಡಾ. ನೇಗಿನಹಾಳ ಕನ್ನಡ ಪ್ರಾಧ್ಯಾಪಕ ಹುದ್ದೆಗೆ ಭಡತಿ ಪಡೆದರು. ನಾಲ್ಕಾರು ಜನ ವಿದ್ಯಾರ್ಥಿಗಳಿಗೆ ಪಿಎಚ್.ಡಿ. ಮಾರ್ಗದರ್ಶನ ಮಾಡುತ್ತಿದ್ದರು.

ಮೊನ್ನೆ ಮೇ ನಾಲ್ಕರಂದು ತೀವ್ರ ಹೃದಯಾಘಾತದಿಂದ ಅವರು ತೀರಿಕೊಂಡರು. ಈ ವಾರ್ತೆ ಆಕಾಶವಾಣಿಯಿಂದ ಪ್ರಸಾರಗೊಂಡದನ್ನು ಕೇಳಿದವರಿಗೆಲ್ಲ ನಂಬಲಾಗದಷ್ಟು ಅನಿರೀಕ್ಷಿತ ಆಶ್ಚರ್ಯ. ಅದರ ಜೊತೆಗೇ ದುಃಖ, ವಿಷಾದ. ೫೯ ವರ್ಷ ಸಾಯುವ ವಯಸ್ಸಲ್ಲ! ನಿವೃತ್ತಿಗೆ ಒಂದೇ ವರ್ಷದ ಮೊದಲು ಡಾ. ನೇಗಿನಹಾಳ ತೀರಿಕೊಂಡರು. ನಿವೃತ್ತರಾದ ಮೇಲೆ ಹಲವು ಯೋಜನೆಗಳನ್ನು ಹಿಡಿದು ಕೆಲಸ ಮಾಡಬೇಕೆಂದು ಅವರು ಲೆಕ್ಕ ಹಾಕಿಕೊಂಡಿದ್ದರು. ಅವರೇ ಮಾಡಬಹುದಾಗಿದ್ದ ಆ ಕೆಲಸಗಳು ಈಗ ಅವರು ಇಲ್ಲದೆ ಕನಸುಗಳಂತೆ ಕರಗಿ ಹೋಗಿವೆ! ಅವರಿಗೆ ಮೊದಲಿನಿಂದಲೂ ಆರೋಗ್ಯ ಸರಿಯಾಗಿರಲಿಲ್ಲ. ಈಚೆಗೆ ಕೆಲವು ವರ್ಷಗಳಿಂದ ಹೋಮಿಯೋಪತಿಯಲ್ಲಿ ಅವರು ಆಸಕ್ತರಾಗಿದ್ದರು. ನನಗೂ ಅವರು ಅದನ್ನೇ ಶಿಫಾರಸ್ ಮಾಡುತ್ತಿದ್ದರು!

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರು ೧೯೯೩ರಿಂದ ೧೯೯೯ರವರೆಗೆ ಸೆನೆಟ್ಟಿನ ಸದಸ್ಯರಾಗಿದ್ದರು. ೧೯೯೫ರಿಂದ ೯೭ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ನಿರ್ದೇಶಕರಾಗಿ ಕೆಲಸ ಮಾಡಿದರು. ೧೯೯೫-೯೮ರ ಅವಧಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರೀ ಮಂಡಲಿಯಲ್ಲಿಸ (ಸೆನೆಟ್) ಸದಸ್ಯರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಕಲಾನಿಕಾಯದ ಡೀನರೆಂದು ಕಾರ್ಯನಿರ್ವಹಿಸಿದ್ದ ಡಾ. ನೇಗಿನಹಾಳ ಆ ವಿಶ್ವವಿದ್ಯಾಲಯದ ಅಕಾಡೆಮಿಕ ಕೌನ್ಸಿಲ್ಲಿನ ಸದಸ್ಯರಾಗಿಯೂ ಕೆಲವು ಕಾಲ ಕೆಲಸ ಮಾಡಿದ್ದರು. ಕರ್ನಾಟಕ ಇತಿಹಾಸ ಅಕಾಡೆಮಿಯ ಬೆಳಗಾವಿ ಜಿಲ್ಲಾ ಘಟಕಕ್ಕೆ ಅವರು ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದ ಅವರ ಅವಧಿ ೨೦೦೧ಕ್ಕೆ ಮುಗಿಯುವುದಿತ್ತು! 'ಶತಮಾನದ ಕನ್ನಡ ಸಾಹಿತ್ಯ' ಎಂಬ ಯೋಜನೆಯಲ್ಲಿ ಅವರು 'ಕನ್ನಡ ಸಂಶೋಧನೆ'ಯನ್ನು ಕುರಿತು ಗ್ರಂಥವನ್ನು ಸಂಪಾದಿಸುತ್ತಿದ್ದರು. ಅವರ 'ಮೈಲಾರಲಿಂಗ: ಖಂಡೋಬಾ' ಎಂಬ ಸಾಂಸ್ಕೃತಿಕ ಅಧ್ಯಯನ ಕುರಿತ ಗ್ರಂಥಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಜಾನಪದ-ಯಕ್ಷಗಾನ ಅಕಾಡೆಮಿ ಎರಡೂ ಸಂಸ್ಥೆಗಳು ಪುರಸ್ಕಾರವಿತ್ತು ಗೌರವಿಸಿವೆ.

ಡಾ. ನೇಗಿನಹಾಳ ಅವರು ಹತ್ತು ಹಲವು ವಿಷಯಗಳಲ್ಲಿ ಆಸಕ್ತರು. ಆ ವಿಷಯಗಳೆಲ್ಲಲ್ಲ ಅಧ್ಯಯನಶೀಲರು. ಕನ್ನಡ ಸಾಹಿತ್ಯ, ಶಾಸನಶಾಸ್ತ್ರ, ಭಾಷಾ ವಿಜ್ಞಾನ ಮತ್ತು ಜಾನಪದ ಮೊದಲಾದ ವಿಚಾರಗಳಲ್ಲಿ ಅವರು ಆಳವಾದ ಅಧ್ಯಯನ ಮಾಡಿದ್ದರು; ವ್ಯಾಪಕವಾದ ಪರಿಶ್ರಮ ಪಟ್ಟಿದ್ದರು. ಮಹಾರಾಷ್ಟ್ರ, ಆಂಧ್ರಪ್ರದೇಶ

ಮತ್ತು ಕರ್ನಾಟಕದ ವಿವಿಧ ಭಾಗಗಳಲ್ಲಿ ಅವರು ಸಂಚರಿಸಿ ಜಾನಪದ ಕ್ಷೇತ್ರಕಾರ್ಯ ಕೈಗೊಂಡಿದ್ದರು. ಅವರು ತಮ್ಮ ತಲೆಮಾರಿನ ಲೇಖಕರಲ್ಲಿ ತುಂಬ ಪ್ರಸಿದ್ಧರಾಗಿದ್ದರು. ಅದರಲ್ಲಿಯೂ ಶಾಸನಗಳನ್ನು ಓದುವುದರಲ್ಲಿ, ಅರ್ಥೈಸುವುದರಲ್ಲಿ ಅವರದು ವಿಶೇಷ ಪರಿಶ್ರಮ. ಹಳೆಯ ಶಾಸನಗಳನ್ನು ಓದುವುದರಲ್ಲಿ ಅವರು ಪರಿಣಿತರಾಗಿದ್ದರು.

ಪ್ರಸಿದ್ಧ ವಿದ್ವಾಂಸರಾಗಿದ್ದ ಡಾ. ಡಿ.ಎಲ್.ನರಸಿಂಹಾಚಾರ್ಯರು 'ಡಂಗ' ಎಂಬ ಪದಕ್ಕೆ 'ಸುಂಕದ ಕಟ್ಟೆ' ಎಂದು ಅರ್ಥ ಮಾಡಿದ್ದರು. ಡಾ. ನೇಗಿನಹಾಳರು ಅದು ಸುಂಕದ ಕಟ್ಟೆಯಲ್ಲ; ಅದು ಒಂದು ರಾಜ್ಯ ಎಂದು ಹೇಳಿದ್ದಾರೆ. ಈ ಪ್ರತಿಪಾದನೆ ಐತಿಹಾಸಿಕ ಮಹತ್ವದ್ದಾಗಿದೆ. ಬಾದಾಮಿ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಸುಮಾರು ಇಪ್ಪತ್ತು ಪೂರ್ವದ ಹಳಗನ್ನಡ ಶಾಸನಗಳನ್ನು ಪತ್ತೆ ಹೆಚ್ಚಿ ಓದಿ ಪ್ರಕಟಿಸಿದ್ದು ಅವರ ಒಂದು ಸಾಧನೆ. 'ವಡ್ಡಾರಾಧನೆ'ಯ ಭಾಷೆಯನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದ ಡಾ.ನೇಗಿನಹಾಳ ಆ ಆಧಾರದ ಮೇಲೆ ಆ ಕೃತಿ ಪೂರ್ವದ ಹಳಗನ್ನಡ ಕಾಲದಲ್ಲಿ ಎಂದರೆ ಕ್ರಿ.ಶ. ಒಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಹುಟ್ಟಿದೆಯೆಂದು ಊಹಿಸಿದ್ದಾರೆ. ಬೆಳಗಾವಿ ಜಿಲ್ಲೆಯ ವೀರಶೈವ ವಿರಕ್ತಮಠಗಳು ಕ್ರಿ.ಶ. ೧೬ನೇ ಶತಮಾನದ ಕೊನೆ, ಅಥವಾ ೧೭ನೆಯ ಶತಮಾನದ ಆದಿಭಾಗದಲ್ಲಿ ಹುಟ್ಟಿಕೊಂಡವೆಂಬ ಅಂಶವನ್ನು ವ್ಯಾಪಕ ಕ್ಷೇತ್ರಕಾರ್ಯದ ಬಲದಿಂದ ಅವರು ತೋರಿಸಿಕೊಟ್ಟಿದ್ದಾರೆ.

ಜಾನಪದ ದೇವರು ಜುಂಜಪ್ಪ, ಕೆಲವು ವಿದ್ವಾಂಸರ ಪ್ರಕಾರ ದಕ್ಷಿಣ ಕರ್ನಾಟಕದವನು, ಅದೂ ಕೇವಲ ಕಾಡುಗೊಲ್ಲರಲ್ಲಿ. ಆದರೆ ಡಾ. ನೇಗಿನಹಾಳ ಅವರ ಪ್ರಕಾರ ಈ ಅಭಿಪ್ರಾಯ ಸರಿಯಲ್ಲ. ಉತ್ತರಕರ್ನಾಟಕದಲ್ಲಿಯೂ ಈ ಸಂಪ್ರದಾಯ ಇದೆ ಎಂದು ಅವರು ಹೇಳುತ್ತಾರೆ. ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿಯೂ ಈ ಸಂಪ್ರದಾಯ ಇರುವುದನ್ನು ಅವರು ತೋರಿಸುತ್ತಾರೆ. ಮೈಲಾರದೇವರನ್ನು ಕುರಿತು ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ವಿಸ್ತಾರವಾದ ಕ್ಷೇತ್ರಕಾರ್ಯ ನಡೆಸಿ ಈ ದೇವರಿಗೆ ಸಂಬಂಧಿಸಿದ ಸಾಂಸ್ಕೃತಿಕ ಮಾನವ ಶಾಸ್ತ್ರೀಯ ಅಧ್ಯಯನವನ್ನು ಅವರು ಸಿದ್ಧಪಡಿಸಿದ ಪ್ರಕಟಿಸಿದ್ದಾರೆ. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನದಲ್ಲಿ, ಪೂರ್ವದ ಹಳಗನ್ನಡದ, ಸುಮಾರು ೫೦ ಪುಟಗಳಷ್ಟು ವೈಶಿಷ್ಟ್ಯಗಳನ್ನು ಗುರುತಿಸಿದ್ದಾರೆ. ಸಾಹಿತ್ಯಿಕ ಅಧ್ಯಯನದಲ್ಲಿ ಸುಮಾರು ಅರವತ್ತಕ್ಕಿಂತಲೂ ಹೆಚ್ಚು ಪದ್ಯಗಳು ಕವಿರಾಜಮಾರ್ಗ ಪೂರ್ವದಲ್ಲಿ ಪತ್ತೆಯಾಗಿರುವುದನ್ನು ತೋರಿಸುತ್ತಾರೆ.

ಕ್ರಿಪೂ. ೬ ರಿಂದ ೩ ಶತಮಾನದವರೆಗಿನ ಶಾಸನಗಳಲ್ಲಿ ಪ್ರಾಕೃತ, ಸಂಸ್ಕೃತ,

ಭಾಷೆಗಳಲ್ಲಿ ತೋರಿಬರುವ ಕನ್ನಡ ಭಾಷೆಯ ಪದಗಳ ದೀರ್ಘವಾದ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಜಾನಪದ ಮಹಾಕಾವ್ಯಗಳು ಲಭ್ಯ ಎಂಬುದು ಒಂದು ನಂಬಿಕೆ. ಇದಕ್ಕೆ ಪ್ರತಿಯಾಗಿ ಉತ್ತರ ಕರ್ನಾಟಕದಲ್ಲಿಯೂ ಅಂಥ ಮಹಾಕಾವ್ಯಗಳಿರುವುದನ್ನು ಡಾ. ನೇಗಿನಹಾಳ ಮೊದಲ ಬಾರಿಗೆ ಗುರುತಿಸಿದ್ದಾರೆ. ಅವುಗಳ ಪೈಕಿ ಮೈಲಾರಲಿಂಗನ ಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಹಲ್ಮಿಡಿ ಶಾಸನದ ಭಾಷಿಕ ವಿಶ್ಲೇಷಣೆಯನ್ನು ತುಂಬ ಸಮರ್ಪಕವಾಗಿ, ಸೂಕ್ಷ್ಮರೀತಿಯಲ್ಲಿ ಮಾಡಿದ್ದಾರೆ. ಬೆಳಗಾವಿ ಜಿಲ್ಲೆಯ 'ಅಲಭೈರಿ' ಎಂಬ ತತ್ವಪದಕಾರನನ್ನು ಬೆಳಕಿಗೆ ತಂದ ಕೀರ್ತಿ ನೇಗಿನಹಾಳರಿಗೇ ಸಲ್ಲಬೇಕು. ತಮಗೆ ದೊರೆತ ನೂತನ ಹಸ್ತಪ್ರತಿಯೊಂದರ ನೆರವಿನಿಂದ ಸಂಪಾದಿಸಿ, ಈಗ ಅಚ್ಚಿನಲ್ಲಿರುವ 'ಸಿದ್ಧರಾಮ ಚಾರಿತ್ರ'ದಲ್ಲಿ, ಹಲವಾರು ಚಾರಿತ್ರಿಕ ಸಂಗತಿಗಳನ್ನು ಮೊದಲ ಬಾರಿಗೆ ಚರ್ಚಿಸಿದ್ದಾರೆ.

ಹೀಗೆ ಡಾ. ನೇಗಿನಹಾಳ ಅವರು ತಮ್ಮ ಲೇಖನಗಳಲ್ಲಿ ಪ್ರಸ್ತಾಪಿಸಿದ, ಚರ್ಚಿಸಿದ, ವಿಶ್ಲೇಷಿಸಿದ ವಿಚಾರಗಳು, ಎತ್ತಿದ ಸಮಸ್ಯೆಗಳು ಒಂದೆರಡಲ್ಲ. ಇತ್ತೀಚೆಗೆ ಹಂಪೆಯ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ 'ನೇಗಿನಹಾಳ ಪ್ರಬಂಧಗಳು' ಎಂಬ ಹೊತ್ತಗೆಯಲ್ಲಿಯೇ ಅರುವತ್ತು ಸಂಪ್ರಬಂಧಗಳಿವೆ. ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿಯವರು ತಮ್ಮ ಮೊದಲ ಮಾತಿನಲ್ಲಿ ಹೀಗೆ ಹೇಳುತ್ತಾರೆ : 'ಡಾ. ಎಂ.ಬಿ. ನೇಗಿನಹಾಳ ಅವರು ನಮ್ಮ ಕಾಲದ ಮಹತ್ವದ ಸಂಸ್ಕೃತಿ ಶೋಧಕರು. ಭಾಷಿಕ, ಜಾನಾಂಗಿಕ, ಜಾನಪದ ಹೀಗೆ ಹತ್ತು ಹಲವು ನೆಲೆಗಳಲ್ಲಿ ಅವರ ಅಧ್ಯಯನ ಇಲ್ಲಿ ಸಾಗಿದೆ. ಇಲ್ಲಿಯ ಅನೇಕ ಸಂಗತಿಗಳು ಕನ್ನಡ ಸಂದರ್ಭದಲ್ಲಿ ಮೊದಲ ಬಾರಿಗೆ ಚರ್ಚಿತವಾಗಿವೆ. ಡಾ. ನೇಗಿನಹಾಳರ ವ್ಯಾಪಕವಾದ ಓದನ್ನು, ಚಿಕಿತ್ಸಕ ಮನೋಧರ್ಮವನ್ನು ಇಲ್ಲಿನ ಬರಹಗಳಲ್ಲಿ ಗುರುತಿಸಬಹುದು. ಒಟ್ಟಿನಲ್ಲಿ 'ನೇಗಿನಹಾಳ ಪ್ರಬಂಧಗಳು' ಕನ್ನಡ ವಿಶ್ವವಿದ್ಯಾನಿಲಯದ ಹೆಮ್ಮೆಯ ಪ್ರಕಟಣೆಯಾಗಿದೆ'.

ಇಲ್ಲಿನ ಲೇಖನಗಳಲ್ಲಿ ಮೊದಲನೆಯದು 'ಪೊನ್ನನ ಭುವನೈಕ್ಯ ರಾಮಾಭ್ಯುದಯ'. ೧೯೭೦ರಲ್ಲಿ ಎಂ.ಎ. ಪದವಿ ಪಡೆದ ಡಾ. ನೇಗಿನಹಾಳರು ೧೯೭೧ರಲ್ಲಿ ಪ್ರಪ್ರಥಮವಾಗಿ ಬರೆದ ಲೇಖನ ಇದು. ಅದನ್ನು ಕುರಿತಂತೆ ನಮ್ಮ ವಿದ್ವಾಂಸರು ಹಲವಾರು ಸಾರಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಭುವನೈಕ್ಯ ರಾಮಾಭ್ಯುದಯದ ನಾಯಕ ಶಂಕರಗಂಡನೇ ಎಂದು ಡಾ. ನೇಗಿನಹಾಳರು ದೃಢವಾದ ನಿಲುವು ತಾಳಿದ್ದರು! 'ಕಾಲಕಾಲಕ್ಕೆ ಹೊಸ ಹೊಸ ವಿಷಯಗಳು, ಸಮಸ್ಯೆಗಳು ಹುಟ್ಟಿಕೊಂಡಂತೆ, ಸಂಶೋಧನ ಕ್ಷೇತ್ರದಲ್ಲಿ ಅವುಗಳನ್ನು ಕುರಿತ ಚರ್ಚೆಗಳು

ನಡೆಯುವುದು ಸ್ವಾಭಾವಿಕ' ಎಂದು ಅವರು ಭಾವಿಸಿದ್ದರು. ಇದು ನಿಜವಾದ ಸಂಶೋಧಕನ ದೃಷ್ಟಿ!

ಡಾ. ನೇಗಿನಹಾಳರು ಈಗ ನಮ್ಮೊಂದಿಗಿಲ್ಲ. ಆದರೆ ಅವರು ಮಾಡಿದ ಕೆಲಸವನ್ನು ಉಳಿಸಿ ಹೋಗಿದ್ದಾರೆ. ಮುಂದಿನ ತಲೆಮಾರಿನವರೆಗೆ ಅವರ ಕೆಲಸ ಪ್ರೇರಣೆಯನ್ನೂ, ಸ್ಫೂರ್ತಿಯನ್ನೂ ನೀಡುವುದಾದರೆ ಅದಕ್ಕಿಂತ ಮಿಗಿಲಾದದ್ದು ಬೇರೇನಿದೆ.

ಡಾ. ಹಾ.ಮಾ.ನಾಯಕ

ಸುಧಾ ವಾರಪತ್ರಿಕೆ

ಜೂನ್ ೩, ೧೯೯೯

■■

## ಶಿಷ್ಯಾದಿಚ್ಛೇತ್ ಪರಾಜಯಪುರ

ಡಾ. ಎಂ.ಬಿ.ನೇಗಿನಹಾಳರ ಬಹುಮುಖಿ ವ್ಯಕ್ತಿತ್ವವನ್ನು ಅರಿಯಬೇಕೆಂಬ ಉದ್ದೇಶದಿಂದ ನಾನು ದಿನಾಂಕ ೧೩ ಫೆಬ್ರುವರಿ ೨೦೧೦ ರಂದು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತಕುಲಪತಿಗಳೂ, ಖ್ಯಾತ ಸಂಶೋಧಕರೂ ಆದ ಡಾ. ಎಂ. ಎಂ. ಕಲಬುರ್ಗಿ ಅವರನ್ನು ಭೇಟಿಯಾಗಿ ಡಾ. ಎಂ.ಬಿ.ನೇಗಿನಹಾಳ ಅವರೊಂದಿಗೆ ನಿಮ್ಮ ನೆನಪುಗಳು ಹೇಗಿದ್ದವು? ಎಂದು ಕೇಳಿದೆ.

ಡಾ. ಎಂ. ಎಂ. ಕಲಬುರ್ಗಿ ಅವರು ಡಾ. ನೇಗಿನಹಾಳರ ಕುರಿತು ತುಂಬ ಭಾವುಕರಾಗಿ ಮಾತನಾಡಿದರು. ಸುಮಾರು ಎರಡು ಗಂಟೆಗಳ ಕಾಲ ನೇಗಿನಹಾಳರ ಪ್ರಾಧ್ಯಾಪಕ ಜೀವನ ಮೊದಲು ಮಾಡಿಕೊಂಡು ಅವರ ಸಂಶೋಧನಾ ಕಾರ್ಯಗಳ ಕುರಿತು ತುಂಬ ಆಪ್ತವಾಗಿ ಹೇಳಿದರು.ಅವರು ಅಂದು ಹೇಳಿದ ವಿವರಗಳ ಆಧಾರದ ಮೇಲೆ ಹೇಳುವುದಾದರೆ:

'ಡಾ. ನೇಗಿನಹಾಳ ನನ್ನ ಶಿಷ್ಯರೂ ಹೌದು, ಸಹೋದ್ಯೋಗಿಯೂ ಹೌದು. ಅವರು ಕೆಲವು ವಿಷಯಗಳಲ್ಲಿ ನನಗಿಂತಲೂ ಬುದ್ಧಿವಂತರಾಗಿದ್ದರು. ನನ್ನ ಅತ್ಯಂತ ಆತ್ಮೀಯ ಶಿಷ್ಯರಲ್ಲಿ ಡಾ. ವೀರಣ್ಣ ರಾಜೂರ ಮತ್ತು ಡಾ. ಎಂ.ಬಿ.ನೇಗಿನಹಾಳ ಅತ್ಯಂತ ಪ್ರಮುಖರು. ಯಾಕೆಂದರೆ ಇಬ್ಬರೂ ನನ್ನ ಸಂಶೋಧನೆಯ ಕಾರ್ಯವನ್ನು ಅಚ್ಚುಕಟ್ಟಾಗಿ ಮುಂದುವರಿಸಿದರು. ಅವರು ಪಿಎಚ್.ಡಿಗೆ ವಿಷಯ ಆಯ್ದುಕೊಂಡಿದ್ದು 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ'. ಈ ವಿಷಯ ಕೇಳಿದಾಗ ನನಗೆ ಡಾ. ನೇಗಿನಹಾಳರ ಬಗ್ಗೆ ಒಲವು ಮೂಡಿತು. ಪ್ರಾಚೀನ ಶಾಸನಗಳ ಭಾಷಿಕ ಅಧ್ಯಯನ ವಿಷಯದಲ್ಲಿ ಈ ಮೊದಲು ಪ್ರಯತ್ನ ಮಾಡಿದವರು ಡಾ. ಎನ್. ನರಸಿಂಹಯ್ಯ ಮತ್ತು ಡಾ. ಜಿ.ಎಸ್. ಗಾಯಿ ಅವರು. ಆದರೆ ಅವರ ಅಧ್ಯಯನಕ್ಕೆ ಅದರದೇ ಆದ ಒಂದು ಮಿತಿ ಮತ್ತು ಶಕ್ತಿ ಇತ್ತು. ಡಾ. ನೇಗಿನಹಾಳ ಅವರು ಸಮಗ್ರ ಅಧ್ಯಯನದ ಕೊರತೆಯನ್ನು ನಿವಾರಿಸಿದರು. ಅಂತೆಯೇ ಅವರ ಮಹಾಪ್ರಬಂಧಕ್ಕೆ ಒಂದು ಬೆಲೆ ಇದೆ.

೧೯೭೦ರಲ್ಲಿ ಅವರು ಮೊಟ್ಟಮೊದಲು 'ಪೊನ್ನನ ಭುವನೈಕ್ಯರಾಮಾಭ್ಯುದಯ' ಎಂಬ ಲೇಖನವನ್ನು ಬರೆದರು. ಅದು ಲೇಖನ ರೂಪ ಪಡೆಯುವಲ್ಲಿ ನಾನೇ

ಮಾರ್ಗದರ್ಶನ ಮಾಡಿದ್ದೆ. ಆದರೆ ಅಲ್ಲಿಯ ವಿಚಾರಗಳು ನಮಗೂ ಹೊಳೆದಿರಲಿಲ್ಲ.

ಶಬ್ದಮಣಿದರ್ಪಣದ ಒಂದು ಸೂತ್ರದಲ್ಲಿ ಉದಾಹರಣೆಯಾಗಿರುವ ಪದ್ಯ ಹೀಗಿತ್ತು:

ಉದಯಾಸ್ತೋನ್ನತ ಶೈಲಸೇತು ಹಿಮವತ್ಕುತ್ಕೀಲ ಪರ್ಯಂತ ಸಂ
ಪದೆಯಂ ವಾರ್ಧಿತರತ್ತರಂಗಸನಿನದತ್ಕಾಂಚೀಕಳಾಪಾಂಚಿತಾ
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ
ರ್ಚಿದ ಗೆಲ್ಲಂ ಭುವನೈಕ್ಯರಾಮ ಮಹಿಪಂಗಕ್ಕುಂ ಪೆಱರ್ಗಕ್ಕುಮೇ

ಅಂದರೆ ಸಮಸ್ತ ಭರತಖಂಡವನ್ನು ಸಾಧಿಸಿ ಕಬ್ಬಿಗನಿಗೆ ಒಪ್ಪಿಸಿದ ಗೆಲವು ಭಯವನೈಕ್ಯರಾಮನೃಪನ ಹೊರತು ಬೇರೆಯವರಿಗಲ್ಲ' ಎಂದು ಅದರ ಅರ್ಥ.

ಅಂದರೆ ಭುವನೈಕ್ಯರಾಮನು ಯುದ್ಧದಲ್ಲಿ ಗೆದ್ದ ಸಮಸ್ತ ವಸುಂಧರೆಯನ್ನು 'ಕಬ್ಬಿಗ'ನಿಗೆ ಕೊಟ್ಟನೆಂದು ಅರ್ಥವೇ? ಇದು ಆಭಾಸ; ಆದ್ದರಿಂದ ಇಲ್ಲಿಯ ಕಬ್ಬಿಗ ಪದದ ಬದಲಾಗಿ ಅದು ಕಚ್ಚೆಗ ಎಂದಿರಬೇಕು. ಆಗ ಕಚ್ಚೆಗನೆಂದರೆ ರಾಷ್ಟ್ರಕೂಟ ಚಕ್ರವರ್ತಿಯಾದ ೩ನೇ ಕೃಷ್ಣನೆಂದಾಗಬಹುದು. 'ಭುವನೈಕ್ಯರಾಮ'ನೆಂದು ಬಿರಿದಿರುವವನು ಆತನ ಸಾಮಂತ ಶಂಕರಗಂಡನಾಗಿರಬೇಕು ಎಂಬ ವಿಚಾರವನ್ನು ಮೊದಲು ಹೇಳಿದವರು ಡಾ. ನೇಗಿನಹಾಳರು. ಕಾವ್ಯಾಲೋಕನದ ೬೨ನೇ ಪದ್ಯದಲ್ಲಿ ಒಂದೆಡೆ 'ರಟ್ಟರಮೇರು ದಂತಿಗಂ' ಎಂಬ ಪದ ಬರುತ್ತದೆ. ರಟ್ಟರಮೇರುವೆಂಬುದು ರಾಷ್ಟ್ರಕೂಟ ಮೂರನೆಯ ಕೃಷ್ಣನ (ಪಟ್ಟದ)ಆನೆಯಾಗಿರಬಹುದೆಂದು ಕೆಲವು ವಿದ್ವಾಂಸರ ಊಹೆಯಾಗಿತ್ತು. ಇದನ್ನು ಡಾ. ನೇಗಿನಹಾಳರು ತುಂಬ ಅರ್ಥವತ್ತಾಗಿ ವಿಶ್ಲೇಷಿಸಿದರು. ಬೆಟಗೇರಿಯ ಶಾಸನದಲ್ಲಿ ಶಂಕರಗಂಡನ ಕೆಲವು ಬಿರುದುಗಳಲ್ಲಿ 'ರಟ್ಟರ [ಮೇರು]' ಎಂಬುದೊಂದು ಉಂಟು. ಇಲ್ಲಿ 'ರಟ್ಟರಮೇರುದಂತಿ' ಎಂದರೆ ರಟ್ಟರ ಮೇರುವಿನ ದಂತಿ ಎಂಬ ಹೊಸ ಅರ್ಥವನ್ನು ಹೇಳಬೇಕಾಗುತ್ತದೆ. ಹೀಗಾಗಿ ಈ ಪದ್ಯದಲ್ಲಿ ಬರುವ 'ರಟ್ಟರ ಮೇರು' ಶಂಕರಗಂಡನೆಂದೆ ತಿಳಿಯಬಹುದು. ಇದು ಭುವನೈಕ್ಯರಾಮಾಭ್ಯುದಯದಿಂದ ಎತ್ತಿದ ಪದ್ಯವಾಗಿದ್ದ ಪಕ್ಷದಲ್ಲಿ ಅದರ ನಾಯಕನು ಶಂಕರಗಂಡನೆಂದೇ ಹೇಳಬೇಕಾಗುತ್ತದೆ. ಎಂಬ ನಿರ್ಣಯಕ್ಕೆ ಡಾ. ನೇಗಿನಹಾಳರು ಬಂದರು. ಪೂರ್ವಸೂರಿಗಳಾದ ಡಿ.ಎಲ್.ಎನ್. ಅವರ ವಿಚಾರಗಳಿಗಿಂತ ಸ್ಪಷ್ಟವಾಗಿ ಡಾ. ನೇಗಿನಹಾಳರು ಭುವನೈಕ್ಯರಾಮಾಭ್ಯುದಯದ ಕಾವ್ಯನಾಯಕ ಶಂಕರಗಂಡನೆಂದು ಸಿದ್ಧಪಡಿಸಿದರು. ಭುವನೈಕ್ಯರಾಮಾಭ್ಯುದಯವು ಲೌಕಿಕ ಕಾವ್ಯವೆಂಬುದು ನಿಜ. ಬೆಟಗೇರಿಯ ಶಾಸನ, ಕಾವ್ಯಾವಲೀಕನದ ೬೮ನೇ ಪದ್ಯ ಸೂಚಿಸುವ 'ಜಯಧೀರ' ಎಂಬ ಬಿರುದು, ಶಬ್ದಮಣಿ ದರ್ಪಣದ ೧೬೭ನೇ ಸೂತ್ರದ 'ಕಬ್ಬಿ[ಕಚ್ಚೆ]ಗ ಎಂಬ

ಹೆಸರು, ಬೆಟಗೇರಿಯ ಶಾಸನ ಹಾಗೂ ಕಾವ್ಯಾವಲೋಕನದ ೬೨೦ನೇ ಪದ್ಯಗಳಲ್ಲಿಯ ರಟ್ಟರಮೇರು, ಮತ್ತು ಭುವನೈಕ್ಯರಾಮನೆಂಬ ಬಿರುದು ಇವೆಲ್ಲ ಸಂಗತಿಗಳು ಕಾವ್ಯನಾಯಕನು ಶಂಕರಗಂಡನಾಗಿರಬೇಕೆಂಬ ಊಹೆಗೆ ಬಲವಾದ ಆಧಾರಗಳಾಗುತ್ತವೆ.

ಡಾ. ಎಂ. ಎಂ. ಕಲಬುರ್ಗಿ ಅವರು ಮುಂದುವರಿದು ಹೇಳಿದರು– 'ನಾನು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾದ ಸಂದರ್ಭದಲ್ಲಿ ಅವರ ಸಮಗ್ರ ಲೇಖನ ಸಂಪುಟವೊಂದನ್ನು ಹೊರತಂದೆ. ಆ ಸಂದರ್ಭದಲ್ಲಿಯೂ ಅವರು ಭುವನೈಕ್ಯರಾಮಾಭ್ಯುದಯದ ಕಾವ್ಯನಾಯಕ ಶಂಕರಗಂಡನೆ ಎಂಬ ನಿಲುವಿಗೆ ಬದ್ಧರಾಗಿದ್ದರು. ಅವರೇ ಅಲ್ಲಿ ಹೀಗೆ ಹೇಳುತ್ತಾರೆ : 'ಇಲ್ಲಿನ ಮೊದಲ ಲೇಖನ 'ಪೊನ್ನನ ಭುವನೈಕ್ಯರಾಮಾಭ್ಯುದಯ' ನಾನು ೧೯೭೧ರಲ್ಲಿ ಪ್ರಪ್ರಥಮವಾಗಿ ಬರೆದುದು. ಅದನ್ನು ಕುರಿತಂತೆ ನಮ್ಮ ವಿದ್ವಾಂಸರಿಂದ ಹಲವಾರು ಬಾರಿ ಪ್ರತಿಕ್ರಿಯೆಗಳು ವ್ಯಕ್ತವಾದವು. ಆ ಲೇಖನ ಪುನರ್ಮುದ್ರಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಸಂಕ್ಷಿಪ್ತವಾಗಿಯಾದರೂ ಕೊಂಚ ವಿವರಣೆ ಅಗತ್ಯವೆಂದು ಕಾಣುತ್ತದೆ:

ಭುವನೈಕ್ಯ ರಾಮಾಭ್ಯುದಯದ ನಾಯಕ ಶಂಕರಗಂಡನೇ ಎನ್ನುವುದು ಈಗಲೂ ನನ್ನ ದೃಢವಾದ ನಿಲುವು. ಶಬ್ದಮಣಿದರ್ಪಣಕಾರ ಕೇಶಿರಾಜ 'ಉದಯಾಸ್ತೋನ್ನತ.... ಭುವನೈಕ್ಯರಾಮ ಮಹಿಪಂಗಕ್ಕುಂ ಪೆಱರ್ಗಕ್ಕುಮೇ' ಎಂಬ ಆ ಪದ್ಯದಲ್ಲಿನ ನೆಲನೆಂಬ ನಪುಂಸಕ ಲಿಂಗಾರ್ಥದ ಶಬ್ದಕ್ಕೆ ಆಸೇತು ಹಿಮಾಚಲ ವಿಸ್ತಾರವಾಗುಳ್ಳ 'ಧರಾವನಿತೆ' ಎಂಬ ಸ್ತ್ರೀಲಿಂಗಾರ್ಥವಿದೆಯೆಂದು ಖಚಿತವಾಗಿ ಹೇಳಿದ್ದಾನೆ. ಕಬ್ಬೀ[ಚ್ಚೆ]ಗನಿಗೆ ಭುವನೈಕ್ಯರಾಮ ಮಹಿಪನು ಒಪ್ಪಿಸಿದ ನೆಲವೆಂದರೆ 'ಉದಯಾಸ್ತೋನ್ನತ ಶೈಲ ಸೇತು ಹಿಮವತ್ಕುಕ್ಷೀಲ ಪರ್ಯಂತ ಸಂಪದೆ'ಯಾದ ಅಖಂಡ ಭಾರತವೇ ಹೊರತು ಯಾವುದೋ ಒಂದು ತುಂಡು ನೆಲವಲ್ಲ. ಆದ್ದರಿಂದ ಭುವನೈಕ್ಯರಾಮ ಮಹಿಪನೆಂದರೆ ಮಾಂಲಿಕ ಶಂಕರಗಂಡನೇ ಹೊರತು ಚಕ್ರವರ್ತಿ ಮುಮ್ಮಡಿ ಕೃಷ್ಣನಲ್ಲ. 'ಶುಭತ್ತುಂಗ' ಇತ್ಯಾದಿ ಹೆಸರುಗಳೊಂದಿಗೆ ಕಂಡು ಬರುವ ಪದ್ಯ-ಪದ್ಯವೇಷ್ಟನಗಳನ್ನು ರಾಷ್ಟ್ರಕೂಟ ಸಾಮ್ರಾಟರಾದ ಮೂವರು ಕೃಷ್ಣರಲ್ಲಿ ಯಾವನಿಗಾದರೂ ಅನ್ವಯಿಸಬಹುದು. ಅಂಥ ಬೇರೆ ಒಂದೋ ಹಲವೋ ಕಾವ್ಯಗಳಿರುವುದು ಶಕ್ಯ. ಪೊನ್ನ ಕವಿಯ ಭುವನೈಕ್ಯರಾಮಾಭ್ಯುದಯಕ್ಕೇ ಅವನ್ನೆಲ್ಲ ಅನ್ವಯಿಸಬೇಕಿಲ್ಲ ಎಂದು ಡಾ. ನೇಗಿನಹಾಳರು ಪ್ರತಿಪಾದಿಸಿದರು.

ಅವರ ನನ್ನ ಆತ್ಮೀಯತೆ ಎಷ್ಟರ ಮಟ್ಟಿಗೆ ಪ್ರಿಯವಾಗಿತ್ತು ಅಥವಾ ಅವರಿಗೂ ನನಗೂ ಯಾವ ಋಣಾನುಬಂಧವಿತ್ತೋ ಗೊತ್ತಿಲ್ಲ. ಅವರು ನಿಧನರಾದ ದಿನ ನಾನು ನನ್ನ ಊರಾದ ಸಿಂದಗಿಯಲ್ಲಿದೆ. ಊರ ಹೊರಗಿನಿಂದ ಹೋಗಬೇಕಾಗಿದ್ದ

ನಾನು ಮನೆಮಂದಿಗೆಲ್ಲ ಭೇಟಿಯಾದರಾಯಿತೆಂದು ಮನೆಗೆ ಬಂದೆ. ಅಷ್ಟರಲ್ಲಿ ಅಕಸ್ಮಾತ್ತಾಗಿ ಫೋನ್ ಬಂದಿತ್ತು. ಡಾ. ನೇಗಿನಹಾಳ ಅವರು ನಿಧನರಾದ ವಿಷಯ ತಿಳಿಯಿತು. ಕೇವಲ ಎರಡು ನಿಮಿಷದಲ್ಲಿ ನಾನು ಹೊರಹೋಗುತ್ತಿದ್ದೆ. ಯಾವುದೋ ನಮ್ಮ ಆತ್ಮೀಯ ಸಂಬಂಧ ಅವರ ನಿಧನದ ಸುದ್ದಿಯನ್ನು ತಿಳಿಸಿತು. ತಕ್ಷಣ ನನ್ನ ಎಲ್ಲ ಕಾರ್ಯಕ್ರಮಗಳನ್ನು ರದ್ದುಪಡಿಸಿ, ಬೆಳಗಾವಿಗೆ ಹೋಗಿ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡೆ ಎಂದು ಡಾ. ಕಲಬುರ್ಗಿ ಅವರು ಹೇಳುವಾಗ ಒಂದು ಕ್ಷಣ ಭಾವುಕರಾದರು.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಅವರನ್ನು ಬಹಳ ಜನ ಕಾಡಿದರು. ಅವರು ಬೆಳಗಾವಿ ಸ್ನಾತಕೋತ್ತರ ಕೇಂದ್ರದಲ್ಲಿದ್ದ ಸಂದರ್ಭದಲ್ಲಿ ಕುಲಪತಿಗಳಾಗಿದ್ದ ಡಾ. ರಾಮೇಗೌಡ ಅವರು ನನ್ನನ್ನು ಕರೆದು ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಸ್ಥಾನವನ್ನು ಯಾರಿಗೆ ವಹಿಸಬೇಕೆಂದು ಕೇಳಿದರು. ಆಗ ನಾನು 'ನ್ಯಾಯವಾಗಿ ಈ ಸ್ಥಾನ ಡಾ. ನೇಗಿನಹಾಳ ಅವರಿಗೇ ಸಲ್ಲಬೇಕು. ಮುಖ್ಯಸ್ಥನಾಗುವ ಎಲ್ಲ ಅರ್ಹತೆಗಳು ಅವರಿಗಿವೆ. ಅವರೇ ಸೂಕ್ತ ಎಂದು ಗಟ್ಟಿಯಾಗಿ ಪ್ರತಿಪಾದಿಸಿದೆ.' ಕುಲಪತಿ ಡಾ. ರಾಮೇಗೌಡ ಅವರು ನನ್ನ ಮಾತಿಗೆ ಬೆಲೆ ಕೊಟ್ಟು ಡಾ. ನೇಗಿನಹಾಳ ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಿದರು. ನಂತರ ಇತರ ಕೆಲವು ಪ್ರಾಧ್ಯಾಪಕರು ಅವರನ್ನು ಬಹಳಷ್ಟು ಕಾಡಿದರು. ಇದರಿಂದ ಬೇಸತ್ತ ನೇಗಿನಹಾಳ ಅವರಿಗೆ ನಾನು ನೈತಿಕ ಬೆಂಬಲ ನೀಡಿದೆ. ಯಾರು ಏನೇ ಮಾಡಲಿ, ನಿನಗೆ ನನ್ನ ಬೆಂಬಲ ಇದೆ. ಒಳ್ಳೆಯ ಕಾರ್ಯ ಮಾಡು ಎಂದು ಹೇಳಿದೆ. ಅಂತೆಯೇ ಜಾನಪದ ಸಮ್ಮೇಳನ, ಹೀಗೆ ನನ್ನ ಶಿಷ್ಯರಾಗಿದ್ದ ಡಾ. ನೇಗಿನಹಾಳ ಒಮ್ಮೊಮ್ಮೆ ನನಗಿಂತಲೂ ತೀಕ್ಷ್ಣವಾಗಿ ಕೆಲವು ಹೊಸ ಹೊಳಹುಗಳನ್ನು ಕಂಡುಹಿಡಿಯುತ್ತಿದ್ದರು. ಇಂಥ ಸಂದರ್ಭದಲ್ಲಿ ಅವರ ವಿಚಕ್ಷಣಾ ದೃಷ್ಟಿಗೆ ನಾನು ಬೆರಗಾಗುತ್ತಿದ್ದೆ.

ಹೀಗೆ ಡಾ. ಕಲಬುರ್ಗಿ ಅವರು ಡಾ. ನೇಗಿನಹಾಳ ಅವರ ವ್ಯಕ್ತಿತ್ವವನ್ನು ತುಂಬ ಅರ್ಥಪೂರ್ಣವಾಗಿ ತಿಳಿಸಿದರು. ಗುರುವಿನ ಮೀರಿಸಿದ ಶಿಷ್ಯ ಎಂಬ ಅಗ್ಗಳಿಕೆಗೆ ಪಾತ್ರರಾದ ಡಾ. ನೇಗಿನಹಾಳ ಅವರು ಕನ್ನಡ ನಾಡು ಕಂಡ ಶ್ರೇಷ್ಠ ಚಿಂತಕರು.

■■

## ಕನ್ನಡ ಸಂಶೋಧನಾ ಕ್ಷೇತ್ರದ ದಿಗ್ಗಜ

ಡಾ. ನೇಗಿನಹಾಳರ ನೇರ ಶಿಷ್ಯರಲ್ಲದಿದ್ದರೂ ಶಿಷ್ಯ ಸ್ಥಾನದಲ್ಲಿ ನಿಂತು ಅವರಿಂದ ಸಂಶೋಧನೆಯ ನೆಲೆಗಳನ್ನು ಅಧ್ಯಯನ ಮಾಡಿದ ಬೆಳಗಾವಿ ಇನ್ನೊರ್ವ ಹಿರಿಯ ವಿದ್ವಾಂಸರಾದ ಡಾ. ರಾಮಕೃಷ್ಣ ಮರಾಠೆ ಅವರನ್ನು ದಿನಾಂಕ ೨೮ ಏಪ್ರಿಲ್ ೨೦೧೦ ರಂದು ಭೇಟಿಯಾಗಿ ಡಾ. ನೇಗಿನಹಾಳ ಅವರ ಕುರಿತು ಮಾತನಾಡಿಸಿದಾಗ ತುಂಬ ಸಂತೋಷದಿಂದಲೇ ಮಾತು ಆರಂಭಿಸಿದ ಅವರು ವ್ಯಸನದಿಂದ ಮಾತು ಮುಗಿಸಿದರು. ಅವರ ಮಾತುಗಳ ಸಾರ ಹೀಗಿದೆ:

ಡಾ. ನೇಗಿನಹಾಳ ಅವರು ಬೆಳಗಾವಿ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿ ಎಂದು ನೇಮಕಗೊಂಡಾಗ ನಮಗೆ ತುಂಬ ಸಂತೋಷವಾಯಿತು. ಬೆಳಗಾವಿಯಲ್ಲಿ ಒಂದು ಕಚೇರಿ ಮಾಡಿಕೊಂಡು ೨೦ ಕಿ.ಮಿ. ದೂರದ ಭೂತರಾಮನಹಟ್ಟಿಯ ಸ್ನಾತಕೋತ್ತರ ಕೇಂದ್ರವನ್ನು ಅವರು ಶ್ರಮವಹಿಸಿ ಕಟ್ಟಿದ ರೀತಿ ಅಭೂತಪೂರ್ವವಾದುದು. ಅವರ ಸಂಯಮ, ನಿಷ್ಠೆಗಳು ಮೆಚ್ಚುವಂತಹವು. ಅವರು ಸಂಶೋಧಕ ವಿದ್ವಾಂಸರಾಗಿದ್ದಂತೆ ದಕ್ಷ ಆಡಳಿತಾಧಿಕಾರಿಗಳೂ ಆಗಿದ್ದು ವಿಶೇಷ.

ಬೆಳಗಾವಿಯಲ್ಲಿ ನಾವು ಮೇಲಿಂದ ಮೇಲೆ ಅವರನ್ನು ಭೇಟಿ ಮಾಡುತ್ತಿದ್ದೆವು. ಅವರು ತಮ್ಮ ಕೊನೆಯ ದಿನಗಳಲ್ಲಿ ಹೋಮಿಯೋಪಥಿ ಔಷಧಿಗೆ ಒಗ್ಗಿಕೊಂಡಿದ್ದರು. ಅದನ್ನು ಸ್ವತಃ ಅಭ್ಯಾಸ ಮಾಡಿದ್ದ ಅವರು ಪ್ರಯೋಗಾತ್ಮಕ ದೃಷ್ಟಿಯಿಂದ ಔಷಧಿಗಳನ್ನು ಉಪಯೋಗಿಸುತ್ತಿದ್ದರು. ಬಹುಶಃ ಅದು ಅವರ ಆರೋಗ್ಯವನ್ನು ಮತ್ತಷ್ಟು ಕೆಡಿಸಿತು ಎಂಬುದು ನನ್ನ ಭಾವನೆ. ಅವರು ನಮಗೂ ಆಗಾಗ ಹೋಮಿಯೋಪಥಿ ಔಷಧಿ ತಗೆದುಕೊಳ್ಳಲು ಸಲಹೆ ನೀಡುತ್ತಿದ್ದರು.

ನನಗೆ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು. 'ನೀವಿನ್ನೂ ಓದಬೇಕು. ಬಹಳ ಓದಬೇಕು. ಸುತ್ತಮುತ್ತಲಿನವರ ಜೊತೆಗೆ ಹೋಲಿಸಿಕೊಂಡು ಸಮಾಧಾನ ಪಟ್ಟುಕೊಳ್ಳಬಾರದು. ವಿದ್ವತ್ತಿನ ಕ್ಷೇತ್ರದಲ್ಲಿ ದೊಡ್ಡ ಸಾಧಕನರನ್ನು ನೋಡಿಕೊಂಡು, ಅವರ ಹಾದಿಯಲ್ಲಿ ನಾವೂ ಹೆಜ್ಜೆಹಾಕಬೇಕೆಂಬ ಛಲವಿರಬೇಕು' ಹೀಗೆ ಹೇಳುತ್ತಿರುವಾಗ ಬೆಳಗಾವಿ ಸಾಹಿತ್ಯಿಕ ವಲಯದ ಬಗ್ಗೆ 'ತುಂಬ ಮಿತಿಗಳಲ್ಲಿ

ವರ್ತಿಸುತ್ತಾರೆ' ಎಂದು ಬೇಸರ ಪಟ್ಟುಕೊಳ್ಳುತ್ತಿದ್ದರು. ಭೇಟಿಯಾದ ತರುಣ ಸಾಹಿತಿಗಳಿಗೆಲ್ಲ 'ಇನ್ನೂ ಓದಬೇಕು, ನಿಮ್ಮ ಬರವಣಿಗೆ ತಪಸ್ಸಿನ ಫಲವಾಗಬೇಕು' ಎಂದು ಹುರಿದುಂಬಿಸುತ್ತಿದ್ದರು.

ನೇಗಿನಹಾಳ ಅವರ ಕ್ಷೇತ್ರಕಾರ್ಯ ಅತ್ಯಂತ ವ್ಯಾಪಕವಾಗಿತ್ತು. 'ಮೈಲಾರ-ಖಂಡೋಬಾ' ಕುರಿತು ಅಧ್ಯಯನ ಮಾಡುವಾಗ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರದ ಅನೇಕ ಕ್ಷೇತ್ರಗಳನ್ನು ಹಲವಾರು ಬಾರಿ ಸುತ್ತಿದರು. ಪ್ರತಿಯೊಂದು ಕ್ಷೇತ್ರದ ವಿಶೇಷತೆಗಳನ್ನು ತಲಸ್ಪರ್ಶಿಯಾಗಿ ತೌಲನಿಕವಾಗಿ ನೋಡಿದರು. ಹೀಗಾಗಿ ಅದೊಂದು ಗಟ್ಟಿ ಸಂಶೋಧನಾಕೃತಿಯಾಗಿ ಮೂಡಿಬರಲು ಸಾಧ್ಯವಾಯಿತು. ಅದೇ ಜಾಡಿನಲ್ಲಿ 'ಸವದತ್ತಿ ಎಲ್ಲಮ್ಮ'ನ ಕುರಿತು ಯುಜಿಸಿ ಅನುದಾನದಲ್ಲಿ ಅಧ್ಯಯನ ನಡೆಸಿದ್ದರು. ಅನೇಕ ವಿವರಗಳನ್ನು, ಆರಾಧನೆಯ ವಿವಿಧ ಆಯಾಮಗಳನ್ನು ಕುರಿತು ಸೂಕ್ಷ್ಮವಾಗಿ ಅಧ್ಯಯನ ನಡೆಸಿದರು. ಆ ಕುರಿತು ಸಂಗ್ರಹಿಸಿದ ಮಾಹಿತಿಗಳನ್ನು, ಚಿತ್ರಗಳನ್ನು ನನ್ನೆದುರು ತೋರಿಸಿದರು. ಅವರ ಅಧ್ಯಯನ ಶ್ರದ್ಧೆ, ಶಿಸ್ತು, ವಿಶ್ಲೇಷಣೆ ನೋಡಿ ತುಂಬ ಅಭಿಮಾನ ಪಟ್ಟುಕೊಂಡೆ. ಅದಿನ್ನೂ ಪೂರ್ಣಗೊಳ್ಳುವ ಹಂತದಲ್ಲಿಯೇ ಅವರು ಇಹಲೋಕ ತ್ಯಜಿಸಿದರು.

ದೈವತಗಳ ಅಧ್ಯಯನದ ಸಂದರ್ಭದಲ್ಲಿ ಅವರು ಆ ದೇವರ ಆಚರಣೆಯ ವಿಧಿಗಳನ್ನೂ ಪಾಲಿಸುತ್ತಿದ್ದರು. ಸವದತ್ತಿ ಯಲ್ಲಮ್ಮನ ಅಧ್ಯಯನ ನಡೆಸಿದ ಸಂದರ್ಭದಲ್ಲಿ ಮಂಗಳವಾರ, ಶುಕ್ರವಾರ ದೇವಿಪೂಜೆ, ಸಾಧ್ಯವಾದರೆ ಸವದತ್ತಿಗೆ ಹೋಗಿ ಬರುವ ಪದ್ಧತಿ ಇಟ್ಟುಕೊಂಡಿದ್ದರು. ಇಂತಹ ನಿಷ್ಠೆಯಿಂದ ಅವರ ಸಂಶೋಧನೆ ಭಾವಗಮ್ಯವಾಗುತ್ತಿತ್ತೆಂದು ಭಾವಿಸಬೇಕಾಗಿಲ್ಲ. ಈ ರೀತಿಯ ತಾದಾತ್ಮ್ಯದಿಂದ ಅವರಿಗೆ ಅನೇಕ ಭಕ್ತರ ಪರಿಚಯವಾಗುತ್ತಿತ್ತು. ಆರಾಧನೆಯ ಒಳ-ಹೊರಗಿನ ಸಂಗತಿಗಳು ತಿಳಿಯುತ್ತಿದ್ದವು. ಇದರಿಂದ ಅಧ್ಯಯನಕ್ಕೆ ಆಳ-ಅಗಲ ಪ್ರಾಪ್ತವಾಗುತ್ತಿತ್ತು.

ನೇಗಿನಹಾಳ ಅವರು ವಿದ್ಯಾರ್ಥಿಗಳನ್ನು ತುಂಬ ಪ್ರೀತಿಸುತ್ತಿದ್ದರು. ಶ್ರಮಪಟ್ಟು ಓದುವವರನ್ನು ಪ್ರೋತ್ಸಾಹಿಸುತ್ತಿದ್ದರು. ಬೆಳಗಾವಿಯ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ಆಡಳಿತಾಧಿಕಾರಿಯಾಗಿ ಮತ್ತು ಧಾರವಾಡ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ಕನ್ನಡದ ಬೆಳವಣಿಗೆ ಮತ್ತು ಕನ್ನಡ ಸ್ನಾತಕ ವಿದ್ಯಾರ್ಥಿಗಳ ಯೋಗಕ್ಷೇಮಕ್ಕಾಗಿ ಹಗಲಿರುಳು ಶ್ರಮಿಸಿದರು. ನಿಜಕ್ಕೂ ಅವರು ನಡೆದು ಹೋದ ಹಾದಿ ಇಂದಿನವರಿಗೆ ಅನುಕರಣೀಯ.

ನನಗೆ ಅವರು 'ಇತರ ಪ್ರಾಧ್ಯಾಪಕರಂತೆ ಕಥೆ-ಕಾದಂಬರಿ ಬರೆಯುತ್ತ ಹೋಗಬೇಡಿ, ಕನ್ನಡ ಪರಂಪರೆಯ ದೃಷ್ಟಿಯಿಂದ ಗಟ್ಟಿಯಾದ ಕೆಲಸ ಮಾಡಿರಿ'

ಎಂದು ಹೇಳುತ್ತಿದ್ದರು. ಅವರ ಪ್ರೇರಣೆಯಿಂದ ಮೊದಮೊದಲು ನಾಟಕ-ಕಥೆ ಬರೆಯುತ್ತಿದ್ದ ನಾನು ಸೃಜನಶೀಲ ಸಾಹಿತ್ಯಕ್ಕಿಂತ ಸಂಶೋಧನೆ-ರಂಗಭೂಮಿ-ಅನುವಾದ ಕ್ಷೇತ್ರಕ್ಕೆ ಹೊರಳಿದೆ. ಅವರು ನಮಗೆ ಕಲಿಸದೆ ಕಲಿಸಿದ ಗುರು ಸ್ವರೂಪದಲ್ಲಿದ್ದರು. ಅವರ ಅಪಾರ ವಿದ್ವತ್ತು-ಪಾಂಡಿತ್ಯ ನಮಗೆ ಕಾಮಧೇನುವಾಗಿದ್ದವು. ಅವರ ಅಕಾಲಿಕ ಮರಣ ನಮಗೆ ದುಃಖವನ್ನುಂಟು ಮಾಡಿತು.

ಅವರ ಸಮಗ್ರ ಲೇಖನ ಸಂಪುಟ ೧೯೯೯ರಲ್ಲಿ ಪ್ರಕಟವಾಯಿತು. ಆ ಸಂದರ್ಭದಲ್ಲಿ ಅವರು ಹೇಳಿದ ಮಾತುಗಳು ಸಂಶೋಧನ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಮಾರ್ಗದರ್ಶಿ ಸೂತ್ರಗಳಂತಿವೆ. ಆ ಮಾತುಗಳು ಹೀಗಿವೆ:

'ಕಾಲಕಾಲಕ್ಕೆ ಹೊಸ ಹೊಸ ವಿಷಯಗಳು, ಸಮಸ್ಯೆಗಳು ಹುಟ್ಟಿಕೊಂಡಂತೆ ಸಂಶೋಧನ ಕ್ಷೇತ್ರದಲ್ಲಿ ಅವುಗಳನ್ನು ಕುರಿತ ಚರ್ಚೆಗಳು ನಡೆಯುವುದು ಸ್ವಾಭಾವಿಕ. ನಮ್ಮ ಹಿಂದಿನ ತಲೆಮಾರಿನಲ್ಲಿ ಕವಿ-ಕಾಲ-ಕಾವ್ಯಗಳು, ಅವುಗಳಲ್ಲಿ ಪ್ರಯೋಗಗೊಂಡ ಶಬ್ದವಿಶೇಷಗಳು ಹೆಚ್ಚಾಗಿ ವಿದ್ವಾಂಸರ ಚರ್ಚೆಯ ವಿಷಯಗಳಾಗಿದ್ದವು. ಕನ್ನಡ ನಾಡು ಆರು ತುಂಡುಗಳಲ್ಲಿ ಹಂಚಿ ಹೋಗಿದ್ದಿತು. ದೇಶದ ಪಾರತಂತ್ರ್ಯ ಮತ್ತು ಪಾಶ್ಚಾತ್ಯ ವಿಚಾರಗಳು ಅಂದು ಇತರ ಕ್ಷೇತ್ರಗಳಂತೆ ಕನ್ನಡ ಸಂಶೋಧನ ಕ್ಷೇತ್ರದ ಮೇಲೆ ಕೂಡ ತೀವ್ರ ಪ್ರಭಾವ ಬೀರಿದ್ದವು. ೧೯೫೬ರ ತರುವಾಯ ಈ ಪರಿಸ್ಥಿತಿ ಬದಲಾಯಿಸಿ, ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಬಹು ದೊಡ್ಡ ಪ್ರಮಾಣದ ಕೆಲಸ ನಡೆಯತೊಡಗಿತು. ಹೆಚ್ಚು ಹೆಚ್ಚು ಸಮಾಜಮುಖಿಯಾದ ಅಂತರಶಿಸ್ತೀಯ ಚಿಂತನೆಗಳು ಕೂಡ ಈ ಕ್ಷೇತ್ರದಲ್ಲಿ ಕಾಲಿಟ್ಟವು. ಜಾನಪದ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತರಾದ ಅನೇಕ ವಿದ್ವಾಂಸರು ಈ ಮಾತುಗಳ ಹಿನ್ನೆಲೆಯಲ್ಲಿ ಅವರ ಎಲ್ಲ ಸಂಶೋಧನ ಲೇಖನಗಳನ್ನು ನೋಡಬಹುದು. ಬೆಳಗಾವಿಯ ಪ್ರಾಚೀನತೆಯ ಕುರಿತು ಅವರು ಮಾಡಿದ ಸಂಶೋಧನೆ ಅತ್ಯಂತ ಮಹತ್ವವಾದುದು. ಅಲಬ್ಯೆರಿ ಎಂಬ ತತ್ವಪದಕಾರನ ಜೀವನ ಕುರಿತು ಮೊಟ್ಟಮೊದಲು ಬೆಳಕು ಚೆಲ್ಲುವ ಕಾರ್ಯ ಮಾಡಿದ ಅವರ ಶೋಧನ ದೃಷ್ಟಿ ನಮ್ಮಂಥ ಬರಹಗಾರರಿಗೆ ಸ್ಫೂರ್ತಿಯಾಗಿತ್ತು.

ಇಂಥ ಮಹಾನ್ ಸಂಶೋಧಕನ ಬರಹಗಳನ್ನು ಗಮನಿಸದೆ ಕನ್ನಡ ಸಾಂಸ್ಕೃತಿಕ ಕ್ಷೇತ್ರದ ಅಧ್ಯಯನ ಮುಂದೆ ಸಾಗಲಾರದು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

■■

# ಕನ್ನಡ ಭಾಷೆಯ ಪ್ರಾಚೀನತೆ ಶೋಧಿಸಿದ ಶ್ರೇಷ್ಠ ಸಂಶೋಧಕ

ಬೆಳಗಾವಿಯ ಖ್ಯಾತಕವಿಗಳಾದ ಡಾ. ಸರಜೂ ಕಾಟ್ಕರ್ ಅವರನ್ನು ದಿನಾಂಕ ೨೫ ಜೂನ ೨೦೧೦ ರಂದು ಭೇಟಿ ಮಾಡಿ, ಡಾ. ನೇಗಿನಹಾಳ ಅವರ ಕುರಿತು ಕೇಳಿದಾಗ ಅವರು ತುಂಬ ಹೊತ್ತು ಅವರ ವ್ಯಕ್ತಿತ್ವವನ್ನು ಕುರಿತು ಹೇಳಿದರು.

ನಾನು ಅವರು ರಚಿಸಿದ 'ಖಂಡೋಬಾ' ಕೃತಿ ಓದಿ ತುಂಬ ಆಕರ್ಷಿತನಾಗಿದ್ದೆ. ಅದೇ ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಕೂಡ ಬಂದಿತು. ಪ್ರಶಸ್ತಿ ಪ್ರದಾನ ಸಮಾರಂಭ ಬೆಳಗಾವಿಯಲ್ಲಿ ತುಂಬ ಅದ್ದೂರಿಯಾಗಿ ಜರುಗಿತು. ಎಷ್ಟು ಅದ್ದೂರಿ ಎಂದರೆ ನೇಗಿನಹಾಳ ಗ್ರಾಮದ ಬಹುತೇಕ ಜನ ಆ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದರು. ಹತ್ತಾರು ಮೋಟಾರು ವಾಹನ ಮಾಡಿಕೊಂಡು ಊರಿಗೆ ಕೀರ್ತಿ ತಂದ ಡಾ. ಎಂ.ಬಿ.ನೇಗಿನಹಾಳ ಅವರನ್ನು ಗೌರವಿಸಲು ಜನ ಸಂಭ್ರಮದಿಂದ ಪಾಲ್ಗೊಂಡಿದ್ದರು. ಯಾವ ಸಾಹಿತಿಗೂ ಇಷ್ಟು ಊರಿನ ಗೌರವ ಸಿಕ್ಕ ಉದಾಹರಣೆ ನಾನು ಕಂಡಿಲ್ಲ.

ನಿವೃತ್ತಿಯ ನಂತರ ಅವರು ಮರಾಠಿ ಖ್ಯಾತ ಸಂಶೋಧಕ ಡಾ. ರಾಮಚಂದ್ರ ಚಿಂತಾಮಣ ಢೇರೆ ಅವರಂತೆ ಕೆಲವು ದೇಶೀಯ ದೇವತೆಗಳ ಕುರಿತು ಸಮಗ್ರ ಅಧ್ಯಯನ ಮಾಡಬೇಕೆಂದು ಬಯಸಿದ್ದರು. ಸವದತ್ತಿ ಎಲ್ಲಮ್ಮನನ್ನು ಕುರಿತು ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದರು. ಅದನ್ನು ಖಂಡೋಬಾ ಮಾದರಿಯಲ್ಲಿ ಬೃಹತ್ ಸಂಶೋಧನಾ ಕೃತಿರೂಪದಲ್ಲಿ ಸಿದ್ಧಪಡಿಸುತ್ತಿದ್ದರು. ಆದರೆ ಅವರ ಆಕಸ್ಮಿಕ ಮರಣದಿಂದ ಮಾಡಿಟ್ಟ ಟಿಪ್ಪಣಿಗಳು ಹಾಗೆಯೇ ಉಳಿದು ಹೋದುದು ಕನ್ನಡ ಸಾರಸ್ವರಲೋಕದ ದೌರ್ಭಾಗ್ಯವೇ ಸರಿ. ಇಂಥ ಮಹಾನ್ ಸಂಶೋಧಕರು ಬೆಳಗಾವಿಯಲ್ಲಿದ್ದ ಸಂದರ್ಭದಲ್ಲಿ ನಾವು ಅನೇಕ ಸಲ ಭೇಟಿಯಾಗುತ್ತಿದ್ದೆವು. ಕನ್ನಡ ಭಾಷೆಯ ಕುರಿತು ಸುದೀರ್ಘವಾಗಿ ಚರ್ಚಿಸುತ್ತಿದ್ದೆವು. ನಮ್ಮ ಸಂದೇಹಗಳಿಗೆ ಸಮಾಧಾನದ ಉತ್ತರವನ್ನು ನೀಡುವ ಜವಾಬ್ದಾರಿ ಡಾ. ನೇಗಿನಹಾಳರದಾಗಿತ್ತು.

ಅವರ ನಿಧನಾನಂತರ ಅವರ ಮನೆಯವರು ಅವರು ಸಂಗ್ರಹಿಸಿದ ಎಲ್ಲ ಪುಸ್ತಕಗಳನ್ನು ಭೂತರಾಮನಹಟ್ಟಿ ಸ್ನಾತಕೋತ್ತರ ಕೇಂದ್ರಕ್ಕೆ ದಾನವಾಗಿ ನೀಡಿದರು.

ಆ ಕೇಂದ್ರವು ಡಾ. ನೇಗಿನಹಾಳರ ಕನಸಿನ ಕೂಸಾಗಿತ್ತು. ಅದನ್ನು ಬೆಳೆಸಲು ಅವರು ಪಟ್ಟ ಕಷ್ಟ ಅಪಾರ. ಇಂದು ಈ ಸ್ನಾತಕೋತ್ತರ ಕೇಂದ್ರವು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಾಡಾಗಿದೆ. ಇದೊಂದು ಡಾ. ನೇಗಿನಹಾಳರ ದೂರದೃಷ್ಟಿಯ ಫಲ ಎಂದರೆ ಅತಿಶಯೋಕ್ತಿ ಅಲ್ಲ.

ಅವರು ಆಗಾಗ ಕೂಡಿದಾಗ ಕೆಲವು ಅರ್ಥವಂತಿಕೆಯ ಮಾತುಗಳನ್ನು ಹೇಳುತ್ತಿದ್ದರು. ಅವುಗಳನ್ನು ಟಿಪ್ಪಣಿ ಮಾಡಿದ್ದರೆ ಅದೇ ಒಂದು ಪುಸ್ತಕವಾಗಬಹುದಿತ್ತು.

'ಸೋಲು ಹೊಸಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಹೊಸಪ್ರಜ್ಞೆಯಿಂದ ಬಾಳಿನಲ್ಲಿ ಆನಂದವನ್ನು ರೂಢಿಸಿಕೊಳ್ಳುವುದು ಸಾಧ್ಯವಾಗುತ್ತದೆ'.

'ಪ್ರವಾಹದ ವಿರುದ್ಧ ಈಸುವುದು ಸುಲಭವಲ್ಲ, ಸುಖಕರವಲ್ಲ. ಆದರೆ ಹಾಗೆ ಈಸುವಲ್ಲಿ ಕೆಚ್ಚಿದೆ, ಆತ್ಮಗೌರವವಿದೆ. ಅಂದರೆ ನಾವು ಯಾವಾಗಲೂ ಪ್ರವಾಹದ ವಿರುದ್ಧ ಈಸಬೇಕೆಂದಲ್ಲ, ಈಸಬೇಕಾದ ಸಂದರ್ಭವಿರುವಾಗ ನಾವು ಹಿಂಜರಿಯ ಬಾರದು. ಈ ನಿಲುಮೆಯನ್ನು ತಳೆದ ನಮ್ಮಿಂದ ಇತರರು ಗೆಲುವನ್ನು ಕಸಿದುಕೊಳ್ಳ ಬಹುದು. ಆದರೆ ಅವರು ನಮ್ಮ ಆನಂದವನ್ನು ಕಸಿದುಕೊಳ್ಳಲಾರರೆಂಬ ವಿಶ್ವಾಸ ನನಗೀದ ದೃಢವಾಗುತ್ತಿದೆ'

'ಪರಿಸ್ಥಿತಿ ಹೇಗೇ ಇದ್ದರೂ ಅದನ್ನು ಕುರಿತ ನನ್ನ ಪ್ರತಿಕ್ರಿಯೆಯು ನಮಗೆ ಸುಖದ ಇಲ್ಲವೆ ದುಃಖದ ಕಲ್ಪನೆಯನ್ನು ತರುತ್ತದೆ ಎಂಬುದನ್ನು ನಾವು ಜೀವನದಲ್ಲಿ ಕಾಣುತ್ತೇವೆ. ಆದುದರಿಂದ ಎಂತಹ ಪರಿಸ್ಥಿತಿಯಲ್ಲಿಯೂಸ ನಾವು ಸುಖಿಗಳಾಗುವುದು ಸಾಧ್ಯವಿದೆಯೆಂದಾಗುತ್ತಿದೆ. ಸುಖವನ್ನು ಕುರಿತು ಉದ್ರೇಕ. ದುಃಖವನ್ನು ಕುರಿತ ಉದ್ವಿಗ್ನತೆಗಳನ್ನು ಅಳಿದ ಮನಸ್ಸಿನ ಪ್ರಸನ್ನತೆಯು ಆನಂದದ ಸೆಲೆಯಾಗಬಲ್ಲುದು.'

'ನಮ್ಮ ಸುತ್ತಣ ಬಾಳಿನಲ್ಲಿ ವೈಷ್ಯಮಗಳನ್ನು ಗಮನಿಸುವುದಕ್ಕಿಂತ ಸಮನ್ವಯದ ಹಾದಿಯಲ್ಲಿ ನಾವು ಸಾಗಬೇಕು. ಮಾನವೀಯ ಜೀವನ, ಸ್ವಭಾವ, ಅಭಿರುಚಿಗಳು ಏಕಪ್ರಕಾರವಾಗಿಲ್ಲ. ಅವು ವೈವಿಧ್ಯಮಯವಾಗಿವೆ....ನಾವು ಹೂದೋಟದ ಸಮುದಾಯ ಶೋಭೆಯತ್ತ ಗಮನ ಹರಿಸಬೇಕು'

'ಮಾನವನ ಅಹಂಕಾರಸ ಭಾವನೆಯು ಸಮನ್ವಯ ದೃಷ್ಟಿಗೆ ಬಾಧಕವಾಗಿ ಪರಿಣಮಿಸುತ್ತಿದೆ. ಅಹಂಕಾರದಿಂದಾಗಿ ಭಿನ್ನತೆಯ ಭಾವ ಬೆಳೆಯುತ್ತಿದೆ. ಮಾನವನು ತನ್ನ ಅಹಂಕಾರ ಭಾವನೆಯನ್ನು ತೊಡೆದುಹಾಕಿದಾಗ ವಿಶಾಲ ಏಕತೆಯತ್ತ ಗಮನ ಹರಿಸಬಲ್ಲ. ಬಾಳಿನ ವೈವಿಧ್ಯದಲ್ಲಿ ಸಮರಸವನ್ನು ಕಾಣವಲ್ಲ.'

'ನೇರವಾದ ದಾರಿ ದೂರವಹುದು. ಅದು ಕಠಿಣವೆಂದೂ ತೋರಬಹುದು. ಆದರೆ ಅದೇ ಆತ್ಮಗೌರವ ಪುರಸ್ಸರವಾದ ಪಥವಾಗಿದೆ. ಒಳದಾರಿ ಅಡ್ಡದಾರಿಗಳು ಸಮೀಪ. ಸುಲಭವೆಂದು ಅನಿಸಬಹುದು. ಆದರೆ ಅವು ನಮ್ಮ ಗಾಂಭೀರ್ಯಕ್ಕೆ ಹೊಲ್ಲ. ಅಲ್ಲದೆ ಆತ್ಮಘಾತಕ, ಸಮಾಜಘಾತಕವಾಗಿ ಪರಿಣಮಿಸುತ್ತವೆ'

ಇಂಥ ಹಲವಾರು ನುಡಿಗಳನ್ನು ಅವರು ಮೇಲಿಂದ ಮೇಲೆ ಹೇಳುತ್ತಿದ್ದರು. ಹೇಳಿದಂತೆ ಬದುಕುತ್ತಿದ್ದರು. ನಡೆ-ನುಡಿಗಳು ಒಂದಾದ ನಿಷ್ಠುರ ಮನೋಧರ್ಮದ ಪ್ರಾಧ್ಯಾಪಕರಾಗಿದ್ದ ಡಾ. ನೇಗಿನಹಾಳ ನಮ್ಮ ದಿನಮಾನದ ಅಪರೂಪದ ಸಂಸ್ಕೃತಿಯ ಶೋಧಕರಾಗಿದ್ದರು.

■■

## ಜೀವನದ ಪ್ರಮುಖ ಘಟನೆಗಳು

| | | |
|---|---|---|
| * ಜನನ | : | ೧೯೪೦ |
| * ಜನ್ಮಸ್ಥಳ | : | ನೇಗಿನಹಾಳ (ತಾ: ಬೈಲಹೊಂಗಲ ಜಿ: ಬೆಳಗಾವಿ) |
| * ವಿದ್ಯಾಭ್ಯಾಸ | : | ಪ್ರಾಥಮಿಕ ಶಿಕ್ಷಣ ನೇಗಿನಹಾಳ ಗ್ರಾಮದಲ್ಲಿ |
| | | ಮಾಧ್ಯಮಿಕ ಶಿಕ್ಷಣ ಬೆಳಗಾವಿಯಲ್ಲಿ |
| | | ಬಿ.ಎ. ಕರ್ನಾಟಕ ವಿಶ್ವವಿದ್ಯಾಲಯ (೧೯೬೭) |
| | | ಎಂ.ಎ. ಕರ್ನಾಟಕ ವಿಶ್ವವಿದ್ಯಾಲಯ (೧೯೭೦) |
| | | ಪಿಎಚ್.ಡಿ. ಕರ್ನಾಟಕ ವಿಶ್ವವಿದ್ಯಾಲಯ ೧೯೭೭ |
| * ವೃತ್ತಿ | : | ೧೯೭೦ರಿಂದ ೧೯೭೬ ಹುಬ್ಬಳ್ಳಿ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಅಧ್ಯಾಪಕ |
| | | ೧೯೭೬-೧೯೮೦ ಹಾವೇರಿ ಗುದ್ಲೆಪ್ಪ ಹಳ್ಳಿಕೇರಿ ಕಾಲೇಜಿನಲ್ಲಿ ಅಧ್ಯಾಪಕ |
| | | ೧೯೮೦ ರಿಂದ ೧೯೮೪ ಹುಬ್ಬಳ್ಳಿ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ರೀಡರ್ |
| | | ೧೯೮೪ರಿಂದ ೧೯೯೨ ಕರ್ನಾಟಕ ವಿಶ್ವವಿದ್ಯಾಲಯದ ರೀಡರ್ |
| | | ೧೯೯೨ರಿಂದ ೧೯೯೪ ಬೆಳಗಾವಿ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿ |
| | | ೧೯೯೪ರಿಂದ ೯೭ ರವರೆಗೆ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ |
| * ಶೈಕ್ಷಣಿಕ ಹುದ್ದೆಗಳು | : | ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ಟಿನ ಸದಸ್ಯ |

(೧೯೯೩ರಿಂದ ೧೯೯೯)

ಕನ್ನಡ ಅಧ್ಯಯನ ಪೀಠದ ನಿರ್ದೇಶಕ

(೧೯೫ರಿಂದ ೧೯೯೭)

ಹಂಪಿ ಕನ್ನಡ ವಿಶ್ವವಿದ್ಯಾಲಯದ ಸೆನೆಟ್ಟಿನ ಸದಸ್ಯ

(೧೯೯೫ ರಿಂದ ೧೯೯೮)

ಕರ್ನಾಟಕ ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ

ಕ.ವಿ.ವಿ. ಕೌನ್ಸಿಲ್ಲಿನ ಸದಸ್ಯ

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ (೧೯೯೯)

* ಪ್ರಶಸ್ತಿ–ಗೌರವಗಳು : ಮೈಲಾರಲಿಂಗ–ಖಂಡೋಬಾ ಕೃತಿಗೆ

ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ

ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ

* ಪ್ರಕಟಿತ ಕೃತಿಗಳು :೧. ವೈದೇಹಿ ಜಾನಪದ ಸಣ್ಣಾಟ (ಸಂ) ೧೯೭೯

೨. ಚಿಕ್ಕದೇವರಾಯ ವಂಶಾವಳಿ ಗದ್ಯಾನುವಾದ

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

೩. ಆಯ್ದ ರಗಳೆಗಳು (ಹರಿಹರ ಕೃತ) (ಸಂ) ೧೯೮೧

೪. ಬಸವನಾಳರ ಬರಹಗಳು (ಸಂ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೮೩

೫. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೨

೬. ಮೈಲಾರಲಿಂಗನ ಪದಗಳು ಭಾಗ–೧ (೧೯೮೩)

೭. ಮೈಲಾರಲಿಂಗನ ಪದಗಳು ಭಾಗ–೨ (೧೯೯೦)

೮. ಶಿವಲೆಂಕ ಮಂಚಣ್ಣನ ವಚನಗಳು (ಸಂ)

ಮೂರುಸಾವಿರಮಠ, ಹುಬ್ಬಳ್ಳಿ, ೧೯೮೭

೯. ಮೈಲಾರದೇವರ ದಿವ್ಯಕ್ಷೇತ್ರಗಳು

ಅನುಪಮ ಪ್ರಕಾಶನ, ಅಥಣಿ, ೧೯೯೧

೧೦. ಮೈಲಾರಲಿಂಗ–ಖಂಡೋಬಾ(ಸಾಂಸ್ಕೃತಿಕ ಅಧ್ಯಯನ, ೧೯೯೨)

೧೧. ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಿಕ ಅಧ್ಯಯನ. ಕರ್ನಾಟಕ ವಿಶ್ವವಿದ್ಯಾಲಯ, ೧೯೯೪

೧೨. ಸಿದ್ಧರಾಮ ಚಾರಿತ್ರ (ರಾಘವಾಂಕ ಕೃತ, ಸಂ.)

ತೋಂಟದಾರ್ಯಮಠ, ಗದಗ, ೧೯೯೯

೧೩. ನೇಗಿನಹಾಳ ಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

* ನಿಧನ : ದಿನಾಂಕ ೪ ಮೇ ೧೯೯೯ ಮಂಗಳವಾರ

■■■■